ಸಂಪುಟ: 04 ಸಂಚಿಕೆ: 124 ಪುಟಗಳು: 08 ಬುಧವಾರ 17 ಜುಲೈ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com


ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಯಾವುದಕ್ಕೂ ಅಂಜದಿರು;
ಅದ್ಭುತ ಕಾರ್ಯವನ್ನೆಸಗುವೆ,
ಭೀತಿಯೇ ಪ್ರಪಂಚದ ಎಲ್ಲಾ
ದು:ಖಗಳಿಗೂ ಮಹತ್ಕಾರಣ..

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



## 7ನೇ ವೇತನ ಆಯೋಗದ ಜಾರಿ ಕುರಿತು ಸಿಎಂ ಮಹತ್ವದ ಹೇಳಿಕೆ

• ಉದಯವಾಹಿನಿ, ಬೆಂಗಳೂರು

7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರಕಾರಿ ನೌಕರರ ವೇತನ ಮತ್ತು ಪಿಂಚಣಿ ಪರಿಷ್ಕರಣೆ ಕುರಿತು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವದ ಹೇಳಿಕೆ ನೀಡಿದ್ದಾರೆ. ಅದ್ರಂತೆ, ಸಿಎಂ ನೀಡಿದ ಹೇಳಿಕೆಗಳು ಈ ಕೆಳಗಿನಂತಿವೆ.

1) ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯೆ, ಪಿಂಚಣಿ ಪರಿಷ್ಕರಣೆಯ ಬೇಡಿಕೆಗಳನ್ನ ಪರಿಷ್ಕರಿಸಲು ದಿನಾಂಕ: 19.11.2022ರಂದು 7ನೇ ರಾಜ್ಯ ವೇತನ ಆಯೋಗವನ್ನ ರಚಿಸಲಾಗಿತ್ತು.ಅದರಂತೆ, ವೇತನ ಆಯೋಗವು 24.03.2024ರಂದು ವರದಿಯನ್ನು ಸಲ್ಲಿಸಿರುತ್ತದೆ.

2) 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ನೌಕರರ ವೇತನ, ವೇತನ ಸಂಬಂಧಿತ ಭತ್ಯೆ, ಪಿಂಚಣಿಯನ್ನು ದಿನಾಂಕ: 01.07.2022ರಿಂದ ಅನ್ವಯ ವಾಗುವಂತೆ ಪರಿಷ್ಕರಿಸಿ ದಿನಾಂಕ: 01.08.2024ರಿಂದ ಅನುಷ್ಠಾನಗೊಳಿಸಲು ದಿನಾಂಕ: 15.07.2024ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ, ದಿನಾಂಕ: 01.07.2022ಕ್ಕೆ ನೌಕರರ ಮೂಲ ವೇತನಕ್ಕೆ ಶೇಕಡ 31ರಷ್ಟು ತುಟ್ಟಿ ಭತ್ಯೆ ಮತ್ತು ಶೇ. 27.50 ರಷ್ಟು ಫಿಟ್‌ಮೆಂಟ್ ಸೇರಿಸಿ ವೇತನ ಮತ್ತು ಪಿಂಚಣಿಯನ್ನು ಪರಿಷ್ಕರಿಸಲಾಗುವುದು. ಇದರಿಂದ ನೌಕರರ ಮೂಲ ವೇತನ ಮತ್ತು ಪಿಂಚಣಿಯಲ್ಲಿ ಶೇ 58.50 ರಷ್ಟು ಹೆಚ್ಚಳವಾಗುತ್ತದೆ. ಮನೆಬಾಡಿಗೆ ಭತ್ಯೆಯಲ್ಲಿ ಶೇ. 32ರಷ್ಟು ಹೆಚ್ಚಳವಾಗುತ್ತದೆ.

3) ನೌಕರರ ಕನಿಷ್ಟ ಮೂಲವೇತನವು ರೂ. 17,000/- ರಿಂದ ರೂ. 27,000-ಕ್ಕೆ ಗರಿಷ್ಟ ವೇತನವು ರೂ. 1,50,600/- ರಿಂದ ರೂ. 2,41.200/-ಗಳಿಗೆ ಪರಿಷ್ಕರಣೆಯಾಗುತ್ತದೆ. ನೌಕರರ ಕನಿಷ್ಠ ಪಿಂಚಣಿಯು ರೂ.8.500/-ರಿಂದ ರೂ.13,500/-ಕ್ಕೆ ಮತ್ತು ಗರಿಷ್ಠ ಪಿಂಚಣಿಯು ರೂ.75,300/- ರಿಂದ ರೂ. 1.20,600ಕ್ಕೆ ಪರಿಷ್ಕರಣೆಗೊಳ್ಳುತ್ತದೆ. ಈ ಪರಿಷ್ಕರಣೆಯು, ಅನುದಾನಿತ ಶಿಕ್ಷಣ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳ ನೌಕರರು, ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳಿಗೆ ಅನ್ವಯವಾಗುತ್ತದೆ.

4) ನೌಕರರ ವೇತನ ಪರಿಷ್ಕರಣೆಯಿಂದ ಸರ್ಕಾರಕ್ಕೆ ವಾರ್ಷಿಕ ರೂ.20,208/- ಕೋಟಿ ಹೆಚ್ಚುವರಿ ವೆಚ್ಚ ಉಂಟಾಗುತ್ತದೆ. ಈ ಹೆಚ್ಚುವರಿ ವೆಚ್ಚಕ್ಕೆ 2024-25ರ ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಮೀಸಲಿಡಲಾಗಿದೆ.

## ನಾನು ಎಲ್ಲೂ ನಾಪತ್ತೆಯಾಗಿರಲಿಲ್ಲ ಊರಿಗೆ ಹೋಗಿದ್ದೆ: ಶಾಸಕ

• ಉದಯವಾಹಿನಿ, ಬೆಂಗಳೂರು

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವಂತಹ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗಮದ ಅಧ್ಯಕ್ಷ ಹಾಗೂ ಶಾಸಕರಾಗಿರುವ ಬಸನಗೌಡ ದದ್ದಲ್ ಅವರು ನಾಪತ್ತೆಯಾಗಿದ್ದರು ಎಂಬ ವದಂತಿ ಹಬ್ಬಿತ್ತು, ಆದರೆ ನೀನೆ ವಿಧಾನಸೌಧದಲ್ಲಿ ಅಧಿವೇಶನದಲ್ಲಿ ಅವರು ದಿಡೀರ್ ಪ್ರತ್ಯಕ್ಷರಾಗಿದ್ದರು. ಪ್ರಕರಣ ಸಂಬಂಧ ಎಸ್‌ಐಟಿ ಪೊಲೀಸರ ತನಿಖೆ ಎದುರಿಸಿದ ಬಳಿಕ ಇಡಿ ಬಂಧನ ಭೀತಿಯಿಂದ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ವಿಧಾನಸಭೆಯ ಅಧಿವೇಶನ ವೇಳೆ ಪ್ರತ್ಯಕ್ಷರಾದರು. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ.ಖಾದರ್ ಅವರನ್ನು ಭೇಟಿ ಮಾಡಿ ಕೆಲಕಾಲ ಸಮಾಲೋಚನೆ ನಡೆಸಿದರು.



ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ದದ್ದಲ್, ನಾನು ನಾಪತ್ತೆಯಾಗಿರಲಿಲ್ಲ. ಎರಡು ದಿನಗಳಿಂದ ನನ್ನ ಕ್ಷೇತ್ರಕ್ಕೆ ತೆರಳಿದ್ದೆ ಎಂದು ಸ್ಪಷ್ಟನೆ ನೀಡಿದರು. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಜಾರಿ ನಿರ್ದೇಶಾನಲಯದಿಂದ ಮತ್ತೆ ನನಗೆ ಯಾವುದೇ ನೋಟಿಸ್ ಬಂದಿಲ್ಲ ಎಂದು ತಿಳಿಸಿದರು. ಸದ್ಯ ಬಸನಗೌಡ ದದ್ದಲ್ ಅವರನ್ನು ಇಡಿ ಅಧಿಕಾರಿಗಳು ಬಂಧಿಸುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ. ಏಕೆಂದರೆ ಅಧಿವೇಶನ ನಡೆಯುತ್ತಿದ್ದರಿಂದ ಅವರ ಬಂಧನ ಸದ್ಯಕ್ಕೆ ಇಲ್ಲ. ಹಾಗೊಂದು ವೇಳೆ ಬಂಧಿಸಲೇಬೇಕಾದರೆ ಹಿಡಿಧಿಕಾರಿಗಳು ಸಭಾಧ್ಯಕ್ಷರ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ.ಒಂದು ವೇಳೆ ಸಭಾಧ್ಯಕ್ಷರು ಅನುಮತಿ ನೀಡಿದರೆ ಮಾತ್ರ ಬಸನಗೌಡ ದದ್ದಲ್ ಅವರನ್ನು ಇಡಿ ಅಧಿಕಾರಿಗಳು ಬಂಧಿಸಲಿದ್ದಾರೆ.

## ಸಿಎಂ ಸಿದ್ದರಾಮಯ್ಯ ವಿರುದ್ಧ ಎರಡು ಪ್ರತ್ಯೇಕ ದೂರು ದಾಖಲು

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಚುನಾವಣಾ ಆಯೋಗಕ್ಕೆ ಎರಡು ಪ್ರತ್ಯೇಕ ದೂರು ನೀಡಲಾಗಿದೆ. ಚುನಾವಣೆ ಅಫಿಡವಿಟ್ ನಲ್ಲಿ ಸುಳ್ಳು ಮಾಹಿತಿ ಹಾಗೂ ಮುಡಾ ಅಕ್ರಮ ವಿಚಾರವಾಗಿ ಎರಡು ಪ್ರತ್ಯೇಕ ದೂರು ದಾಖಲಾಗಿದೆ. ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಾಹಂ ಚುನಾವಣಾ ಆಯೋಗಕ್ಕೆ ಈ ದೂರು ನೀಡಿದ್ದಾರೆ. 2018ರ ವಿಧಾನಸಭೆ ಚುನಾವಣೆ ವೇಳೆ ಸಿದ್ದರಾಮಯ್ಯ ನೀಡಿದ್ದ ಅಫಿಡವಿಟ್ ನಲ್ಲಿ ಪತ್ನಿ ಪಾರ್ವತಿ ಹೆಸರಲ್ಲಿ 3 ಎಕರೆ 16 ಗುಂಟೆ ಕೃಷಿ ಜಮೀನು ಇದ್ದು, ಇದರ ಮೌಲ್ಯ 25 ಲಕ್ಷ ರೂ ಎಂದು ನಮೂದಿಸಿದ್ದರು. ಆದರೆ 2005ರಲ್ಲಿಯೇ ಈ ಜಮೀನು ಪರಿವರ್ತನೆ ಮಾಡಿಸಿದ್ದಾಗಿ ದಾಖಲೆ ನೀಡಿ ದೂರು ಸಲ್ಲಿಸಲಾಗಿದೆ. 2023ರ ವಿಧಾನಸಭೆ ಚುನಾವಣೆ ವೇಳೆ 14 ಮುಡಾ ಸೈಟ್ ಗಳ ಮೌಲ್ಯ ಕೇವಲ 8 ಕೋಟಿ ಎಂದು ಅಫಿಡವಿಟ್ ನಲ್ಲಿ ನಮೂದಿಸಲಾಗಿದೆ. 14 ಸೈಟ್ ಗಳ ಅಸಲಿ ಮಾರುಕಟ್ಟೆ ಮೌಲ್ಯ 34 ಕೋಟಿಯಾಗಿದ್ದು, ಉದ್ದೇಶಪೂರ್ವಕವಾಗಿ ಸಿಎಂ ಸಿದರಾಮಯ್ಯ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಮತ್ತೊಂದು ದೂರು ಸಲ್ಲಿಸಿದ್ದಾರೆ.

## ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕಲಿ ಎಂದ ಹೆಚ್.ಡಿ.ರೇವಣ್ಣ

• ಉದಯವಾಹಿನಿ, ಬೆಂಗಳೂರು

ವಿಧಾನಮಂಡಲದ ಮುಂಗಾರು ಅಧಿವೇಶನದ ಎರಡನೇ ದಿನವಾದ ಇಂದು ವಿಧಾನಸಭೆಯಲ್ಲಿ ಮಾತನಾಡಿದ ಶಾಸಕ ಹೆಚ್.ಡಿ.ರೇವಣ್ಣ, ನನ್ನ ಮಗ ತಪ್ಪು ಮಾಡಿದ್ದರೆ ಆತನನ್ನು ಗಲ್ಲಿಗೇರಿಸಲಿ ಎಂದು ಗದ್ಗದಿತರಾದ ಪ್ರಸಂಗ ನಡೆದಿದೆ. ವಿಧಾನಸಭೆಯಲ್ಲಿ ಮಾತನಾಡಿದ ಶಾಸಕ ರೇವಣ್ಣ, ನನ್ನ ಮಗ ತಪ್ಪು ಮಾಡಿಲ್ಲ.ಆತ ತಪ್ಪು ಮಡಿದ್ದರೆ ಗಲ್ಲಿಗೆ ಹಾಕಲಿ ನಾನು ಬೇಡ ಅನ್ನಲ್ಲ. ಆತನನ್ನು ವಹಿಸಿಕೊಳ್ಳಲು ಇಲ್ಲಿಗೆ ಬಂದಿಲ್ಲ ಎಂದು ಹೇಳಿದರು.ಇನ್ನು ನನ್ನ ಬಗ್ಗೆ ಆರೋಪ ಮಾಡಲಾಗಿದೆ. ಹೆಣ್ಣು ಮಗಳನ್ನು ಕರೆದುಕೊಂಡು ಬಂದು ಡಿಜಿ ದೂರು ಬರೆಸಿಕೊಳ್ಳುತ್ತಾರೆ ಎಂದರೆ ಅವನು ಡಿಜಿ ಆಗಲು ಲಾಯಕ್ಕಾ? ಎಂದು ಏರುಧ್ವನಿಯಲ್ಲಿ ಕೂಗಾಡಿದ್ದಾರೆ. ಇದೇ ವೇಳೆ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಬಹಳ ಅನ್ಯಾಯವಾಗಿದ್ದರೆ ನೋಟಿಸ್ ಕೊಡಿಸಿ. ಚರ್ಚೆ ಮಾಡೋಣ ಎಂದು ತಿಳಿಸಿದರು.



### ಸಿಎಂ, ಸಚಿವರ ವಿರುದ್ಧ ಬಿಜೆಪಿ ನಾಯಕರ ಕಿಡಿ

# ವಾಲ್ಮೀಕಿ, ಮುಡಾ ಗದ್ದಲ ಸದನದಲ್ಲಿ ಕೋಲಾಹಲ







ಸಿಎಂ ರಾಜೀನಾಮೆಗೆ ಆರ್‌ಅಶೋಕ್ ಆಗ್ರಹ

ಆಡಳಿತ ವಿಪಕ್ಷ ವಾಕ್ಸಮರ

**ವಿಧಾನಸಭೆಯಲ್ಲಿ ವಾಲ್ಮೀಕಿ ನಿಗಮದ ಅಕ್ರಮ ಪ್ರಕರಣ ಸರ್ಕಾರ,ವಿಪಕ್ಷ ನಾಯಕರ ಗದ್ದಲಕ್ಕೆ ಕಾರಣವಾಯಿತು. ಸದನದಲ್ಲಿ ಜಟಾಪಟಿಯೂ ತಾರಕಕ್ಕೆ ಏರಿತ್ತು. ಬಿಜೆಪಿ ಮಾಜಿ ಡಿಸಿಎಂ ಅಶ್ವಥ್ ನಾರಾಯಣ್ ಮಾತನಾಡಿ, ಸದನದಲ್ಲಿ ಕಾಂಗ್ರೆಸ್‌ನವರು ಯಾರೂ ಇಲ್ಲ , ಸಿಎಂ ಇಲ್ಲ , ಸಚಿವರು ಇಲ್ಲ ಎಂದು ಅಸಮಾಧಾನ ಹೊರಹಾಕಿದರು. ಖುದ್ದು ಸಿಎಂ ಮೇಲೆ ಆರೋಪವಿದೆ. ಆದರೆ ಇದರ ಚರ್ಚೆ ವೇಳೆ ಸಿಎಂ ಇಲ್ಲ. ಇದೇನಾ ಅವರ ಜವಾಬ್ದಾರಿ? ಸದನ ನಡೀತಿದೆ, ಸದನಕ್ಕೆ ಬರಲು ಸಿಎಂಗೆ ಪುರುಸೊತ್ತಿಲ್ವಾ? ಕರೆಸಿ ಸಿಎಂನಾ ಎಂದು ಕಿಡಿಕಾರಿದರು.**

• ಉದಯವಾಹಿನಿ, ಬೆಂಗಳೂರು

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಹೌದು.. ನೀವು ಲೂಟಿ ಮಾಡಿದ್ದಕ್ಕೆ ಜನ ನಮ್ಮನ್ನ ಇಲ್ಲಿ ಕೂರಿಸಿರೋದು. ನೀವು ಮಾಡಬಾರದ ಲೂಟಿ ಮಾಡಿದ್ದಕ್ಕೆ ನಿಮ್ಮನ್ನ ಜನ ಅಲ್ಲಿ ಕೂರಿಸಿರೋದು. ನೀನು ಲೂಟಿ ಮಾಡುವವರ ಪಿತಾಮಹ ಅಂತಾ ಏಕವಚನದಲ್ಲಿ ವಾಗ್ದಾಳಿ ನಡೆಸಿದರು. ಡಿಸಿಎಂ ನನ್ನ ಹೆಸರು ಹೇಳಿ ಆರೋಪ ಮಾಡಿದ್ದಾರೆ. ಹಿಟ್ ಅಂಡ್ ರನ್ ಹೇಳಿಕೆ ಕೊಟ್ಟಿದ್ದಾರೆ. ನಾನು ಮಾಡಬಾರದ್ದು ಏನು ಮಾಡಿದ್ದೀನಿ ಅಂತಾ ಡಿಕೆ ಶಿವಕುಮಾರ್ ಹೇಳಬೇಕು. ನಾವು ನಿಮ್ಮ ಹಾಗೆ ಓಡಿ ಹೋಗಲ್ಲ, ಇಲ್ಲೇ ಇರ್ತೇವೆ. ಡಿ.ಕೆ.ಶಿವಕುಮಾರ್ ಕ್ಷಮೆ ಕೇಳಬೇಕು ಎಂದು ಅಶ್ವಥ್ ನಾರಾಯಣ್ ಸೇರಿದಂತೆ ಬಿಜೆಪಿ ಶಾಸಕರು ಪಟ್ಟು ಹಿಡಿದರು. ಆಡಳಿತ ಹಾಗೂ ವಿಪಕ್ಷ ನಾಯಕರ ಗದ್ದಲ ಏರ್ಪಟ್ಟಿತು.

ನಿಗಮದ ಅಕ್ರಮ ಪ್ರಕರಣ ಕುರಿತು ವಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ಸಿಎಂ ಅವರು 187 ಕೋಟಿ ಅಕ್ರಮ ವರ್ಗಾವಣೆ ಆಗಿಲ್ಲ, ವರ್ಗಾವಣೆ ಆಗಿರೋದು 89.62 ಕೋಟಿ ಅಂದ್ರು. ಅಲ್ಲಿಗೆ ಅಕ್ರಮ ವರ್ಗಾವಣೆ ಆಗಿರೋದನ್ನ ಸಿಎಂ ಒಪ್ಪಿಕೊಂಡ ಹಾಗಾಯ್ತಲ್ಲ. ಎಂಜಿ ರಸ್ತೆಯಲ್ಲಿ ಕಳ್ಳತನಕ್ಕೆ ಅಂತಾನೇ ಖಾತೆ ತೆರೆದು 187 ಕೋಟಿ ಕದ್ದು ವರ್ಗಾವಣೆ ಮಾಡಿದ್ದಾರೆ.

ಕಳವು ಮಾಡಲು 187 ಕೋಟಿ ವರ್ಗಾವಣೆ ಮಾಡಿದ್ರೆ ಹಗರಣ ಸಹ 187 ಕೋಟಿ ಅಷ್ಟೇ ಆಗಿದೆ ಅಂತರ್ಥ ಸಿಎಂ 89.62 ಕೋಟಿ ಅಂತಾ ಹೇಗೆ ಹೇಳ್ತಾರೆ..? ಇದು ಪಕ್ಕಾ 187 ಕೋಟಿ ಅಕ್ರಮನೇ. ಕದ್ದು ಇನ್ನೊಂದು ಕಡೆ ಇಟ್ಟಿದ್ದಾರೆ ಅಂದ್ರೆ, ಅದು ನಿಗಮದ ಹಣ ತಾನೇ? ಈ ಕಳ್ಳತನ ಸಿಎಂಗೆ ಗೊತ್ತಿದ್ರೂ, ಅವರದ್ದೇ ತಪ್ಪು ಗೊತ್ತಿಲ್ಲ ಅಂದ್ರೂ ಅವರದ್ದೇ ತಪ್ಪು. ಯಾಕಂದ್ರೆ, ಸಿಎಂ ಅವರೇ ಯಜಮಾನರು ಎಂದು ಆರೋಪಿಸಿದರು. ವಾಲ್ಮೀಕಿ ಪ್ರಕರಣದಲ್ಲಿ ಎಸ್‌ಐಟಿ ವಿಫಲ ಆಗಿದೆ. ನಾಗೇಂದ್ರ ಎಸ್‌ಐಟಿ ವಿಚಾರಣೆ ಎದುರಿಸಿ ನಗ್ತಾ ಹೋಗ್ತಾರೆ, ನಗ್ತಾ ಬರ್ತಾರೆ. ಅದೇ ರೇವಣ್ಣ ಎಸ್‌ಐಟಿ ವಿಚಾರಣೆಗೆ ಮುನ್ನ ಬೇಲ್ ಅಂತಾ ಓಡ್ತಾರೆ. ಇದು ಎಸ್‌ಐಟಿ ವೈಫಲ್ಯ. ವಾಲ್ಮೀಕಿ ಪ್ರಕರಣ ಮುಚ್ಚಿ ಹಾಕಲು ಎಸ್‌ಐಟಿ ರಚನೆ ಆಗಿದೆಯಾ? ಬೇನಾಮಿ ಖಾತೆಗಳಿಗೆ ಹಣ ವರ್ಗಾವಣೆ ಆಗಿದೆ. ಎಸ್‌ಐಟಿ ಏನ್ ಮಾಡ್ತಿದೆ.

ನಾಗೇಂದ್ರಗೆ ಒಂದು ಕಾನೂನು ಬೇರೆಯವರಿಗೆ ಒಂದು ಕಾನೂನಾ ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು. ಅಶೋಕ್ ಮಾತಿಗೆ ಶಾಸಕ ರಿಜ್ವಾನ್ ಅರ್ಷದ್ ಆಕ್ಷೇಪ ವ್ಯಕ್ತಪಡಿಸಿದರು. ಈ ಪ್ರಕರಣ, ಆ ಪ್ರಕರಣ ಒಂದೇನಾ? ಅಲ್ಲಿ ನೂರಾರು ಮಹಿಳೆಯರ ಮಾನ ಹೋಗಿದೆ. ಮಹಿಳೆಯರ ಮಾನದ ಬಗ್ಗೆ ಚಿಂತೆ ಇಲ್ವಾ? ಪದೇ ಪದೇ ಎರಡರ ತುಲನೆ ಮಾಡಿ ಮಾತಾಡ್ತಿದ್ದಾರೆ ಅಶೋಕ್. ರೇವಣ್ಣ ಪ್ರಕರಣ ಗಂಭೀರ ಅಲ್ವಾ ಎಂದು ಪ್ರಶ್ನಿಸಿದರು.ವಾಲ್ಮೀಕಿ ನಿಗಮದ ಪ್ರಕರಣದಲ್ಲಿ ಎಸ್ಟಿ ಸಮುದಾಯಕ್ಕೆ ಅನ್ಯಾಯ ಆಗಿದೆ. ವಾಲ್ಮೀಕಿ ಜನಾಂಗದ ಶಾಪ ಸರ್ಕಾರಕ್ಕೆ ತಟ್ಟಬಾರದು ಅಂದ್ರೆ ಕೂಡಲೇ 187 ಕೋಟಿ ವಾಪಸ್ ಪಡೆಯಿರಿ. ಪ್ರಕರಣದ ಸಿಬಿಐ ತನಿಖೆ ಆಗಬೇಕು. ಇದು ಸಿಎಂ ಹಣಕಾಸು ಇಲಾಖೆಗೆ ಬರುತ್ತೆ, ಸಿಎಂ ನೈತಿಕ ಹೊಣೆ ಹೊರಬೇಕು. ನೈತಿಕ ಹೊಣೆ ಹೊತ್ತು ಸಿಎಂ ರಾಜೀನಾಮೆ ಕೊಡಬೇಕು ಎಂದು ಅಶೋಕ್ ಆಗ್ರಹಿಸಿದರು. ಮೇಜು ಕುಟ್ಟಿ ಬಿಜೆಪಿ ಸದಸ್ಯರು ಸ್ವಾಗತಿಸಿದರು. ಸಿಎಂ ರಾಜೀನಾಮೆಗೆ ಅಶೋಕ್ ಒತ್ತಾಯಿಸಿದ್ದಕ್ಕೆ ಸದನದಲ್ಲಿ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸದನದಲ್ಲಿ ಮತ್ತೆ ಗದ್ದಲ ಶುರುವಾಯಿತು. ಅಶೋಕ್ ಚರ್ಚೆ ಮುಗಿದ ಬೆನ್ನಲ್ಲೇ ವಾಕ್ಸಮರ ತಾರಕಕ್ಕೇರಿತು.

## JDSಗೆ ಪೆನ್‌ಡ್ರೈವ್ ಗುದ್ದು! ದೋಸ್ತಿಗೆ ಠಕ್ಕರ್

1 ಅಧಿಕಾರಿಗಳು, ಸಿಎಂ ಸಿದ್ದರಾಮಯ್ಯ ಗೈರು ವಿಚಾರ ಸದನದಲ್ಲಿ ಗದ್ದಲ ಕೋಲಾಹಲ

2 ಸಿದ್ದರಾಮಯ್ಯ ಅವರ ವಿರುದ್ಧ ಅಪಾದನೆ ಇದೆ. ಅವರಿಗೆ ಬರಲು ಹೇಳಿ ಎಂದು ಏರು ಧ್ವನಿಯಲ್ಲಿ ಆಗ್ರಹಿಸಿದರು.

3 ಮಾಡಬಾರದು ಮಾಡಿದ್ದೀರಿ, ನೀವು ಲೂಟಿಗಳ ಪಿತಾಮಹ ಎಂದು ಡಿಕೆಶಿ ತಿರುಗೇಟು ನೀಡಿದರು.

**ನೀವು ಲೂಟಿಕೋರರು: ಬಿಜೆಪಿ ನಾಯಕರ ವಿರುದ್ಧ ಡಿಕೆಶಿ ವಾಗ್ದಾಳಿ**

### ಜೆಡಿಎಸ್‌ಗೆ ಪೆನ್‌ಡ್ರೈವ್ ಗುದ್ದು...!

**ಮುಡಾದಲ್ಲಿ ದಾಖಲೆ ಕೆದಕಿರುವ ಜೆಡಿಎಸ್‌ಗೆ ಕಾಂಗ್ರೆಸ್, ಪೆನ್‌ಡ್ರೈವ್ ಗುದ್ದು ಕೊಡಲು ಮುಂದಾಗಿದೆ. ಹಾಸನದಲ್ಲಿ ನಡೆದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣದ ಬಗ್ಗೆ ಸದನದಲ್ಲಿಂದು ಪ್ರಸ್ತಾಪಿಸಲು ಕಾಂಗ್ರೆಸ್ ಶಾಸಕಿಯರು ಮುಂದಾಗಿದ್ದಾರೆ. ಶಾಸಕಿಯರಾದ ನಯನಾ ಮೋಟಮ್ಮ, ರೂಪಕಲಾ ನಿಯಮ 69ರಡಿ ಚರ್ಚೆಗೆ ಅವಕಾಶ ಕೋರಿದ್ದು, ಸದನದಲ್ಲಿ ಚರ್ಚೆಗೆ ಸ್ಪೀಕರ್ ಅವಕಾಶ ಮಾಡಿಕೊಡಲಿದ್ದಾರೆ. ಅಂತಿಮವಾಗಿ ಚರ್ಚೆ ಮೂಲಕ ಜೆಡಿಎಸ್ ಗೆ ಪ್ರತ್ಯುತ್ತರ ನೀಡಲು ಕಾಂಗ್ರೆಸ್ ಮುಂದಾಗಿದೆ. ಈಗಾಗಲೇ ಮಹಿಳೆಯರು ಮೇಲಿನ ದೌರ್ಜನ್ಯ ಕೇಸ್ ನಿಂದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲು ಪಾಲಾಗಿದ್ದಾರೆ ಹಾಗೂ ಸಲಿಂಗ ಕಾಮದ ಆರೋಪದಲ್ಲಿ ಸೂರಜ್ ರೇವಣ್ಣ ಜೈಲು ಸೇರಿದ್ದಾರೆ.**

### ಅಶ್ವತ್ಥ ನಾರಾಯಣಗೆ ಭ್ರಷ್ಟಾಚಾರದ ಪಿತಾಮಹ

**ಈ ವೇಳೆ ಎದ್ದು ನಿಂತ ಡಿಸಿಎಂ ಡಿಕೆ ಶಿವಕುಮಾರ್, ನೀವು ಲೂಟಿ ಮಾಡಿದ್ದಕ್ಕೆ ನಮ್ಮನ್ನು ಜನ ಇಲ್ಲಿ ಕಳಿಸಿರುವುದು. ಮಾಡಬಾರದು ಮಾಡಿದ್ದೀರಿ, ನೀವು ಲೂಟಿಗಳ ಪಿತಾಮಹ ಎಂದು ತಿರುಗೇಟು ನೀಡಿದರು. ಇದಕ್ಕೆ ಪ್ರತ್ಯುತ್ತರ ನೀಡಿದ ಅಶ್ವತ್ಥ ನಾರಾಯಣ, ಯಾರು ಲೂಟಿ ಮಾಡಿದ್ದು ಎಂದು ಹೇಳಲಿ. ನನ್ನ ಹೆಸರು ಹೇಳಿ ಅಪಾದನೆ ಮಾಡಿದ್ದಾರೆ. ಇದು ಹಿಟ್ ಆಂಡ್ ರನ್. ನಾನು ಮಾಡಬಾರದು ಏನು ಮಾಡಿದ್ದೇನೆ? ನಿಮ್ಮ ಹಾಗೆ ಓಡಿ ಹೋಗಿಲ್ಲ. ಇಲ್ಲೇ ಇದ್ದೇವೆ. ಅಪಾದನೆ ಮಾಡಿದ್ದಾರೆ, ಅದಕ್ಕೆ ಕ್ಷಮೆ ಕೇಳಬೇಕು. ಈ ರೀತಿಯಲ್ಲಿ ಸದನ ನಡೆಸೋದಾ? ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಲೂಟಿ ಕೋರರ ಪಿತಾಮಹ ನೀನು ಎಂದು ಅಶ್ವತ್ಥ ನಾರಾಯಣ ಉಲ್ಲೇಖಿಸಿ ಆರೋಪಿಸಿದ ಡಿಕೆಶಿ, ಸಿಎಂ ಮೇಲೆ ಹೇಗೆ ಅಪಾದನೆ ಮಾಡುತ್ತಾರೆ? ಎಂದು ಗರಂ ಆದರು. ಅಶ್ವತ್ಥ ನಾರಾಯಣ ಅವರಿಗೆ ಬಿಜೆಪಿ ಸದಸ್ಯರು ಸಾಥ್ ನೀಡಿದರು. ಈ ವೇಳೆ ಆಡಳಿತ ಹಾಗೂ ವಿಪಕ್ಷಗಳ ನಡುವೆ ಆರೋಪ ಪ್ರತ್ಯಾರೋಪ ಕಾವೇರಿತು. ಪರಿಣಾಮ ಪೀಠದಲ್ಲಿದ್ದ ಉಪಸಭಾಧ್ಯಕ್ಷರು ಎದ್ದು ನಿಂತು ಸಮಾಧಾನಪಡಿಸಬೇಕಾಯಿತು.**

## ರಾಜ್ಯದ ಹಿತದೃಷ್ಟಿಯಿಂದ 2ನೇ ಅಂತಾರಾಜ್ಯ ವಿಮಾನ ನಿಲ್ದಾಣ ಸ್ಥಾಪನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಜನತೆಯ ಹಿತದೃಷ್ಟಿ ಮತ್ತು ಭವಿಷ್ಯದ ಬೆಂಗಳೂರನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಸ್ಥಳದಲ್ಲಿ 2ನೇ ಅಂತಾರಾಜ್ಯ ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ವಿಧಾನಪರಿಷತ್‌ಗೆ ತಿಳಿಸಿದರು.

ಸದಸ್ಯ ನವೀನ್‌ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ದೆಹಲಿ, ಗೋವಾ, ಮುಂಬೈನಲ್ಲಿ ಈಗಾಗಲೇ 2ನೇ ವಿಮಾನ ನಿಲ್ದಾಣಗಳನ್ನು ಸ್ಥಾಪನೆ ಮಾಡಿದ್ದಾರೆ. ಅದೇ ಮಾದರಿಯಲ್ಲಿ ಬೆಂಗಳೂರಿನಲ್ಲೂ ಸ್ಥಾಪನೆ ಮಾಡುವುದಾಗಿ ಹೇಳಿದರು.

ಬೆಂಗಳೂರಿನ ಸುತ್ತಮುತ್ತ ಏಳೆಂಟು ಕಡೆ ಸ್ಥಳಗಳನ್ನು ಗುರುತಿಸಲಾಗಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಹಾಗೂ ಸಂಬಂಧಪಟ್ಟ ಸಂಸ್ಥೆಗಳ ಜೊತೆ ಮಾತುಕತೆ ನಡೆಸಲಾಗುವುದು. ಇಂತಹ ಸ್ಥಳದಲ್ಲೇ ವಿಮಾನ ನಿಲ್ದಾಣ ಸ್ಥಾಪನೆ ಮಾಡಬೇಕೆಂಬ ಒತ್ತಡವಿದೆ. ನಾನು ಯಾವುದೇ ಒತ್ತಡಕ್ಕೂ ಬಗ್ಗದೆ ಸೂಕ್ತ ಸ್ಥಳದಲ್ಲಿ ರಾಜ್ಯದ ಹಿತದೃಷ್ಟಿ ಮತ್ತು ಭವಿಷ್ಯದ ಬೆಂಗಳೂರನ್ನು ಗಮನದಲ್ಲಿಟ್ಟುಕೊಂಡು ವಿಮಾನ ನಿಲ್ದಾಣ ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದರು.



ಪ್ರಸ್ತುತ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು 2035ಕ್ಕೆ 110 ಮಿಲಿಯನ್ ಪ್ರಯಾಣಿಕರ ಸಾಮರ್ಥ್ಯ ತಲುಪುತ್ತದೆ. ಅದೇ ರೀತಿ ಸರಕು ಸಾಗಾಣಿಕೆಯಲ್ಲಿ 110 ಟನ್ ತಲುಪಲಿದೆ. ನಾವು 2033ರೊಳಗೆ 2ನೇ ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಬೇಕಿದೆ ಎಂದರು.

ತುಮಕೂರು, ಚಿತ್ರದುರ್ಗ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಹೀಗೆ ಹಲವಾರು ಕಡೆ ವಿಮಾನ ನಿಲ್ದಾಣ ಸ್ಥಾಪನೆಗೆ ಒತ್ತಡವಿದೆ. ಯಾವುದೇ ಒಂದು ವಿಮಾನ ನಿಲ್ದಾಣವನ್ನು ಸ್ಥಾಪನೆ ಮಾಡಬೇಕಾದರೆ ಕೆಲವು ಮಾನದಂಡಗಳಿವೆ ಎಂದು ಮಾಹಿತಿ ನೀಡಿದರು. ಮೊದಲ ಸುತ್ತಿನ ಸಭೆಯಲ್ಲಿ ಏಳೆಂಟು ಸ್ಥಳಗಳನ್ನು ಗುರುತಿಸಿದ್ದೇವೆ. ಅದು ಅಂತಿಮಗೊಂಡಿಲ್ಲ. ಬೆಂಗಳೂರು ಸುತ್ತಮುತ್ತ ಸ್ಥಾಪನೆ ಮಾಡುವುದಂತೂ ಖಚಿತ. ಇದರಲ್ಲಿ ಯಾವುದೇ ಗೊಂದಲವಿಲ್ಲ ಎಂದು ಪಾಟೀಲ್ ಪುನರುಚ್ಚಿಸಿದರು. ಇದಕ್ಕೂ ಮುನ್ನ ಸದಸ್ಯ ನವೀನ್ ಅವರು, 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಮಾಡುವುದಾದರೆ ಚಿತ್ರದುರ್ಗ, ತುಮಕೂರು ಮಧ್ಯಭಾಗದಲ್ಲಿ ಮಾಡಬೇಕೆಂದು ಮನವಿ ಮಾಡಿದರು.

## ಪಾರ್ಕಿಂಗ್ ಸಮಸ್ಯೆ ಪರಿಹರಿಸಲು ಕ್ರಮ: ಗೃಹ ಸಚಿವ ಪರಮೇಶ್ವರ

### ನಗರದಲ್ಲಿ ಇನ್ಫ್ರಾಸ್ಟ್ರಕ್ಚರ್‌ಗಳಿಗೆ ನಿಯಮಗಳನ್ನು ರೂಪಿಸದಿರುವ ಹಿನ್ನೆಲೆಯಲ್ಲಿ ರಸ್ತೆ ಬದಿ ವಾಹನಗಳನ್ನು ಪಾರ್ಕಿಂಗ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಗರದಲ್ಲಿನ ಪಾರ್ಕಿಂಗ್ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ಬಿಬಿಎಂಪಿ ಮತ್ತು ಸಾರಿಗೆ ಇಲಾಖೆಯೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ತಿಳಿಸಿದರು.

ವಿಧಾನಸೌಧದಲ್ಲಿ ಪ್ರಶ್ನಾವಳಿ ಅವಧಿ ವೇಳೆ ಯಲಹಂಕ ಶಾಸಕ ಎಸ್. ಆರ್.ವಿಶ್ವನಾಥ್ ಅವರು ಪಾರ್ಕಿಂಗ್ ಸಮಸ್ಯೆ ಕುರಿತು ಕೇಳಿದ ಪ್ರಶ್ನೆಗೆ ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಉತ್ತರಿಸಿ, ನಗರದಲ್ಲಿ ಇನ್ಫ್ರಾಸ್ಟ್ರಕ್ಚರ್‌ಗಳಿಗೆ ನಿಯಮಗಳನ್ನು ರೂಪಿಸದಿರುವ ಹಿನ್ನೆಲೆಯಲ್ಲಿ ರಸ್ತೆ ಬದಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ಬಿಬಿಎಂಪಿ, ಸಾರಿಗೆ ಇಲಾಖೆಯವರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು.

- **ಹುಬ್ಬಳ್ಳಿಯಲ್ಲಿ ನಡೆದ ಯುವತಿ ಅಂಜಲಿ ಅಂಬಿಗೇರ ಹತ್ಯೆ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿದ ರಾಜ್ಯ ಸರ್ಕಾರ.**
- **ಸಿಎಂ ಜೊತೆ ಚರ್ಚಿಸಿ ಪರಿಹಾರ ಕಲ್ಪಿಸಲು ಕ್ರಮ ಎಂದು ಗೃಹಸಚಿವ ಪರಮೇಶ್ವರ.**
- **ಸ್ಲಂ ಬೋರ್ಡ್ ಅಥವಾ ಆಶ್ರಯ ಯೋಜನೆಯಡಿ ಮನೆ ಕೊಡಿಸುವುದಾಗಿ ಯುವತಿಯ ಅಜ್ಜಿಗೆ ಭರವಸೆ.**



ಮನೆಕಟ್ಟುವಾಗ ವಾಹನಗಳ ಪಾರ್ಕಿಂಗ್‌ಗೆ ಸ್ಥಳ ಇದ್ದರೆ ಮಾತ್ರ ಅನುಮತಿ ನೀಡಬೇಕು. ಇಂತಹ ನಿಯಮಗಳನ್ನು ತರಲು ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ 1194 ನೋ ಪಾರ್ಕಿಂಗ್ ರಸ್ತೆಗಳೆಂದು ಗುರುತಿಸಲಾಗಿದೆ. 2022ರಲ್ಲಿ 12,07,651 ಪ್ರಕರಣಗಳಲ್ಲಿ 20,84,56,000 ರೂ. ದಂಡ, 2023ರಲ್ಲಿ 11,30,855 ಪ್ರಕರಣಗಳಿಗೆ ರೂ 37,30,22,000, 2024 (ಜೂನ್ 3ರವರೆಗೆ) 5,21,326 ಪ್ರಕರಣಗಳನ್ನು ದಾಖಲಿಸಿ 5,97,00,200 ರೂ. ದಂಡ ಸಂಗ್ರಹಿಸಲಾಗಿದೆ ಎಂದು ಮಾಹಿತಿ ನೀಡಿದರು. ಟ್ರಾಫಿಕ್ ಸಮಸ್ಯೆಯನ್ನು ನಿಯಂತ್ರಿಸಲು ಕೆಳಹಂತದ ಸಿಬ್ಬಂದಿಗಳು ಮಾತ್ರವಲ್ಲದೇ ಸಂಚಾರ ವಿಭಾಗದ ಡಿಸಿಪಿ, ಎಸಿಪಿಯವರು ಬೆಳಗ್ಗೆ ಮತ್ತು ಸಂಜೆ ವೇಳೆ ಕನಿಷ್ಟ ಎರಡು ತಾಸು ರಸ್ತೆಗಿಳಿದು ಕೆಲಸ ಮಾಡುವಂತೆ ಈಗಾಗಲೇ ನಿರ್ದೇಶಿಸಲಾಗಿದೆ ಎಂದು ತಿಳಿಸಿದರು.

**ಆಶ್ರಯ ಯೋಜನೆಯಡಿ ಮನೆ :** ಸ್ಲಂ ಬೋರ್ಡ್ ಅಥವಾ ಆಶ್ರಯ ಯೋಜನೆಯಡಿ ಮನೆ ಕೊಡಿಸುವುದಾಗಿ ಯುವತಿಯ ಅಜ್ಜಿಗೆ ಭರವಸೆ ನೀಡಿದ್ದೆನು. ಈಗಾಗಲೇ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರು ಆಶ್ರಯ ಯೋಜನೆಯಡಿ ಮನೆ ನೀಡಲು ಒಪ್ಪಿದ್ದಾರೆ. ತಕ್ಷಣ ಮನೆ ಕೊಡುವ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಿದರು.



### ಜನಸಂಖ್ಯೆ 50ರಿಂದ 60 ಸಾವಿರ ಇರಬೇಕು

**ಹೊಸ ಪೊಲೀಸ್ ಠಾಣೆ ಪ್ರಾರಂಭಿಸಲು ಜನಸಂಖ್ಯೆ 50ರಿಂದ 60 ಸಾವಿರ ಇರಬೇಕು ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಗೆ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಅಲ್ಲಮಪ್ರಭು ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯಂತೆ ಪೊಲೀಸ್ ಠಾಣೆ ತೆರೆಯಬೇಕಾಗುತ್ತದೆ. ಶಾಸಕರು ಕೇಳಿರುವ ಕಲಬುರಗಿ ನಗರದ ಜೇವರ್ಗಿ ರಸ್ತೆಯ ರಾಮಮಂದಿರದ ಬಳಿ ಕೊಟನೂರು ಪೊಲೀಸ್ ಹೊರಠಾಣೆಗೆ ನಿಗದಿತ ಮಾನದಂಡಗಳನ್ನು ಪೂರೈಸದ ಹಿನ್ನಲೆಯಲ್ಲಿ ಪರಿಗಣಿಸಿಲ್ಲ . ಶಾಸಕರು ಮತ್ತೊಮ್ಮೆ ಪರಿಶೀಲನೆ ಮಾಡುವಂತೆ ಹೇಳಿದ್ದಾರೆ. ಅದರಂತೆ ಪರಿಶೀಲಿಸಿ ಅಗತ್ಯಬಿದ್ದರೆ ಪರಿಗಣಿಸಲಾಗುವುದು. ಆದರೆ ಅಕ್ಕಪಕ್ಕದ ಠಾಣೆಗಳನ್ನು ಬಲವರ್ಧನೆ ಮಾಡಲಾಗುವುದು ಎಂದು ಹೇಳಿದರು.**

**ತನಿಖೆ ಪ್ರಗತಿಯಲ್ಲಿದೆ :** ಪ್ರಕರಣದ ತನಿಖೆಯು ಚಾರ್ಜ್ ಶೀಟ್ ಪಟ್ಟಿ ಸಲ್ಲಿಸುವ ಹಂತದಲ್ಲಿದೆ. ಈಗಾಗಲೇ ತ್ವರಿತಗತಿಯಲ್ಲಿ ಆರೋಪಿಯನ್ನು ಬಂಧಿಸಿ, ಎಲ್ಲಾ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದ್ದು ಫಾಸ್ಟ್ರ್ಯಾಕ್ ಕೋರ್ಟ್‌ನ ಅಗತ್ಯವಿಲ್ಲ ಎಂದು ಹೇಳಿದರು.

**ಈ ದಿನದ ದರ** ಪೆಟ್ರೋಲ್: 103.44 ₹/L ಡೀಸೆಲ್ : 89.97 ₹/L ಬಂಗಾರ: ₹7,402/Gram24ct ₹6,725/Gram22ct ಬೆಳ್ಳಿ: ₹95.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ತನು ರುಜೆಯಾಗರವತಿ ದುಃಖ ಸಾಗರ

ನಿಜಗುಣರ ಪರಮಾನುಭವ ಬೋಧೆಯ ಮಾತು. ಈ ಶರೀರ ರೋಗ ರುಜಿನಗಳ ನೆಲೆ, ಅನಂತ ದುಃಖಗಳ ಸಾಗರ. ನೋಡಲೇನದ್ಭುತ! ನಯನ ಮನೋಹರ ಚಿತ್ತಾಕರ್ಷಕ. ವಿವಿಧ ಕಾರ್ಯಗಳಿಗೆ ಅನುಕೂಲದ ಮಾಟ. ಒಳಾಂಗಗಳ ರಚನೆ ಪರಮಾಶ್ಚರ್ಯ. ಯಾವೊಬ್ಬ ವ್ಯಕ್ತಿಯೂ ಇದನ್ನು ಸೃಷ್ಟಿಸಲಾರ. ರೋಬೋಟ್ ಸೃಷ್ಟಿಯೇ ಸುಲಭವಾಗಿಲ್ಲ. ಇನ್ನು ಮಾನವ ಮಾನವನನ್ನು ಸೃಜಿಸಿಯಾನೇ! ಇದೆಲ್ಲ ದೈವ ನಿರ್ಮಿತಿ. ತಂದೆ ತಾಯಿ ನಿಮಿತ್ತ. ದೈವ ನಿರ್ಮಿತ ದೇಹದ ಬಾಯಿ ದೈವವನ್ನೇ ಅಲ್ಲಗೆಳೆಯುವುದು ಪ್ರಪಂಚದ ಮೊದಲ ಅದ್ಭುತ! ಅಷ್ಟೇ ಅಲ್ಲ, ದೇಹ ಹೆತ್ತ ಹೊತ್ತ ಪೋಷಿಸಿದ ಗುರು ಹಿರಿಯರ ಕಡೆಗಣನೆ! ತಾನಲ್ಲದ ತನ್ನದಲ್ಲದ ಈ ದೇಹದ ಸೌಂದರ್ಯದ ಅಭಿಮಾನ ದುರಹಂಕಾರ ಕಾಲ್ಬೆರಳಿನಿಂದ ನೆತ್ತಿಯವರೆಗೆ. ಇದೊಂದು ನಶೆ. ಸೌಂದರ್ಯವಿಲ್ಲದೆಯೂ ಇರುವ ತರದ ಒಣ ಜಂಭದ ಜನವೂ ಉಂಟು. ದೇಹದ ಬಣ್ಣ ಅಂಗಾಂಗ ವಸ್ತ್ರಾಭರಣ ಮಾಟದ ಪ್ರದರ್ಶನ ಚಿತ್ರೀಕರಣ ಪ್ರಸಾರೀಕರಣದಲ್ಲಿ ಕರ್ತವ್ಯ ಸಂಸ್ಕೃತಿ ಸೂರಗುತ್ತಿದೆ. ಸಂಬಂಧ ಹಳಸಿ ಕಳಚುತ್ತಿದೆ. ಇರಲಿ ಸೈ ಎನ್ನೋಣವೇ? ಶರೀರ ಕುಸಿಯುವುದು ಇಲ್ಲವೆನಿಸುವುದು. ಊಹಿಸಲಾಗದ ಭಯಾನಕ ರೋಗ ಅಡರುವುದು. ನವಯೌವನದ ಸುಂದರ ದೇಹ ಸೆಳೆಯುವುದು, ಎಲ್ಲರನ್ನೂ ಧಿಕ್ಕರಿಸಿ ಜಗವನ್ನೇ ಮರೆಸುವುದು. ಆದರೆ ಯೋಚಿಸಿ! ಇದು ಮೂಳೆ ಮಾಂಸದ ಕುಡಿಕೆ. ಪ್ರತಿ ರಂಧ್ರ ಮಲಿನ ಮಲ ಮೂತ್ರ ತಾಣ. ಚರ್ಮದ ಹೊದಿಕೆ ಇಲ್ಲದಿದ್ದರೆ? ದೇಹಾಭಿಮಾನ ಬಿಟ್ಟರೆ ನಿಜ ಸುಖದ ಪ್ರಾಪ್ತಿ!!!

## ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ಖಾಸಗಿ ದೂರು ವಜಾ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಬೆಂಗಳೂರಿನ ಕೋರ್ಟ್‌ನಲ್ಲಿ ದಾಖಲಿಸಿದ್ದಂತ ಖಾಸಗಿ ದೂರಿನ ಅರ್ಜಿಯನ್ನು ಕೋರ್ಟ್ ದೂರಿನ ಅರ್ಜಿಯನ್ನು ವಜಾಗೊಳಿಸಿದೆ. ಈ ಮೂಲಕ ಪ್ರಧಾನಿ ನರೇಂದ್ರ ಮೋದಿಯವರಿಗೆ ಬಿಗ್ ರಿಲೀಫ್ ನೀಡಿದೆ. ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಕಾಂಗ್ರೆಸ್ ಅಧಿಕಾರಕ್ಕೆ ಬಂದರೇ ದೇಶದ ಸಂಪತ್ತು ಮುಸ್ಲಿಮರಿಗೆ ಮರು ಹಂಚಿಕೆ ಆಗುತ್ತದೆ ಅಂತ ಹೇಳಿಕೆ ನೀಡಿದ್ದಾರೆ. ಇದು ದ್ವೇಷ ಭಾಷಣದ ಹೇಳಿಕೆಯಾಗಿದ್ದೂ, ಅವರ ವಿರುದ್ಧ ದೂರು ದಾಖಲಿಸಲು ಅವಕಾಶ ನೀಡುವಂತೆ ಜಿಯಾಉರ್ ರಹಮಾನ್ ನೊಮಾನಿ ಎಂಬುವರು ಖಾಸಗಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದಂತ ಬೆಂಗಳೂರಿನ 42ನೇ ಎಸಿಎಂಎಂ ಕೋರ್ಟ್‌ನ ನ್ಯಾಯಮೂರ್ತಿ ಕೆ.ಎನ್ ಶಿವಕುಮಾರ್ ಅವರು, ಪ್ರಧಾನಿ ನರೇಂದ್ರ ಮೋದಿಯವರು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆಯೇ ಹೊರತು, ದ್ವೇಷ ಭಾಷಣದ ಹೇಳಿಕೆಯನ್ನು ನೀಡಿಲ್ಲ ಎಂಬುದಾಗಿ ಸ್ಪಷ್ಟಪಡಿಸಿದರು. ಅಲ್ಲದೇ ದ್ವೇಷ ಭಾಷಣದ ಯಾವುದೇ ಅಂಶಗಳು ಪ್ರಧಾನಿ ಮೋದಿ ಅವರ ಹೇಳಿಕೆಯಲ್ಲಿ ಇಲ್ಲ ಅಂತ ಹೇಳಿ, ಖಾಸಗಿ ದೂರಿನ ಅರ್ಜಿಯನ್ನು ವಜಾಗೊಳಿಸಿತು.

## ಜು.22ರಂದು ಸಿಎಂ ನೇತೃತ್ವದಲ್ಲಿ ಮಹತ್ವರ ರಾಜ್ಯ ಸಚಿವ ಸಂಪುಟ ಸಭೆ ನಿಗದಿ

• ಉದಯವಾಹಿನಿ, ಬೆಂಗಳೂರು

ನಿನ್ನೆಯಷ್ಟೇ ಸಿಎಂ ಸಿದ್ಧರಾಮಯ್ಯ ನೇತೃತ್ವದಲ್ಲಿ ಮಹತ್ವದ ರಾಜ್ಯ ಸಚಿವ ಸಂಪುಟ ಸಭೆ ನಡೆದಿತ್ತು. ಈ ಸಭೆಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಸಿಹಿಸುದ್ದಿ ಎನ್ನುವಂತೆ 7ನೇ ವೇತನ ಆಯೋಗದ ವರದಿಯ ಶಿಫಾರಸ್ಸಿನಂತೆ ಆಗಸ್ಟ್.1ರಿಂದ ಜಾರಿಗೆ ಬರುವಂತೆ ವೇತನ ಜಾರಿ ಸಂಬಂಧ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಈ ಬೆನ್ನಲ್ಲೇ ಜುಲೈ.22ರಂದು ಮಹತ್ವದ ಸಚಿವ ಸಂಪುಟ ಸಭೆ ನಿಗದಿ ಪಡಿಸಲಾಗಿದೆ.ಈ ಬಗ್ಗೆ ಸರ್ಕಾರದ ಜಂಟಿ ಕಾರ್ಯದರ್ಶಿ ಮಾಹಿತಿ ಹಂಚಿಕೊಂಡಿದ್ದು, ದಿನಾಂಕ 22-07-2024ರಂದು ಸೋಮವಾರ ಸಂಜೆ 6 ಗಂಟೆಗೆ ಸಚಿವ ಸಂಪುಟದ 2024ನೇ ಸಾಲಿನ 13ನೇ ಸಭೆಯನ್ನು ವಿಧಾನಸೌಧದ ಸಚಿವ ಸಂಪುಟ ಸಭಾಮಂದಿರದಲ್ಲಿ ಕರೆಯಲಾಗಿದೆ ಅಂತ ತಿಳಿಸಿದ್ದಾರೆ. ಜುಲೈ.22ರಂದು ನಡೆಯುವಂತ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಸಿದ್ಧರಾಮಯ್ಯ ಅವರು ಮಹತ್ವದ ಯೋಜನೆಗಳಿಗೆ ಅನುದಾನ ಒದಗಿಸೋದಕ್ಕೆ ಅನುಮೋದನೆ ನೀಡುವುದಲ್ಲೇ, ಹಲವು ಜನಪರ ಅಭಿವೃದ್ಧಿ ಕಾರ್ಯಗಳಿಗೆ ನಿರ್ಣಯದ ಅಂಗೀಕಾರ ನೀಡುವ ಸಾಧ್ಯತೆ ಇದೆ.

## ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣ

• ಉದಯವಾಹಿನಿ, ಬೆಂಗಳೂರು

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳಿಗೆ ಷರತ್ತುಬದ್ಧ ಜಾಮೀನು ಮಂಜೂರಾಗಿದೆ. ಗೌರಿ ಲಂಕೇಶ್ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಎ5 ದಿಗ್ವೇಕರ್, ಎ 7ಹೆಚ್.ಎಲ್.ಸುರೇಶ್ ಹಾಗೂ ಎ17 ಕೆ.ಟಿ.ನವೀನ್ ಕುಮಾರ್ ಗೆ ಹೈಕೋರ್ಟ್ ಷರತ್ತುಬದ್ಧ ಜಾಮಿನು ಮಂಜೂರು ಮಾಡಿದೆ.ಕಳೆದ 6 ವರ್ಷಗಳಿಂದ ಆರೋಪಿಗಳು ಜೈಲಿನಲ್ಲಿದ್ದು, ವಿಚಾರಣೆ ಮುಗಿಯದೇ ದೀರ್ಘ ಕಾಲ ಜೈಲಿನಲ್ಲಿ ಇಡುವಂತಿಲ್ಲ ಎಂಬ ತೀರ್ಪು ಇದೆ ಎಂದು ಆರೋಪಿಗಳ ಪರ ವಕೀಲ ಅರುಣ್ ಶ್ಯಾಮ್, ಮಧುಕರ್ ದೇಶಪಾಂಡೆ, ಬಸವರಾಜ್ ಸಪ್ಪಣ್ಣವರ್ ವಾದ ಮಂಡಿಸಿದ್ದರು. ವಾದ ಆಲಿಸಿದ ಹೈಕೋರ್ಟ್ ನ್ಯಾಯಪೀಠ ಮೂವರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದೆ. ಈ ಹಿಂದೆ ಎ 11 ಆರೋಪಿ ಮೋಹನ್ ನಾಯಕ್‌ಗೆ ಜಾಮೀನು ಮ್‌ಂಜೂರಾಗಿತ್ತು.

## ಬಿಎಂಟಿಸಿ ಕಚೇರಿಯಲ್ಲೇ ಸಿಬ್ಬಂದಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಶಾಂತಿನಗರದ ಬಸ್ ನಿಲ್ದಾಣದ ಬಿಎಂಟಿಸಿ ಕೇಂದ್ರ ಕಚೇರಿಯಲ್ಲಿಯೇ ಸಿಬ್ಬಂದಿ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಬಸ್ ನಿಲ್ದಾಣದ ಮೂರನೇ ಮಹಡಿಯ ಕಚೇರಿಯಲ್ಲಿ ಸಿಬ್ಬಂದಿ ಮಹೇಶ್(42) ಎನ್ನುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.ಆತ್ಮಹತ್ಯೆಗೆ ಕಾರಣ ಏನು ಎಂದು ತಿಳಿದುಬಂದಿಲ್ಲ. ಆತ್ಮಹತ್ಯೆ ಮಾಡಿಕೊಂಡ ಮಹೇಶ್ ಮೂಲತಃ ಬೆಳಗಾವಿ ಜಿಲ್ಲೆಯ ಅಥಣಿ ಮೂಲದವರು ಎಂದು ತಿಳಿದುಬಂದಿದೆ. ಬೆಂಗಳೂರಿನ ಇಡಿ ಕಚೇರಿ ಪಕ್ಕದಲ್ಲಿರುವ ಬಿಎಂಟಿಸಿ ಕಚೇರಿಯಲ್ಲಿ ಈ ಒಂದು ದುರ್ಘಟನೆ ನಡೆದಿದೆ.ನಿನ್ನೆ ಬೆಳಿಗ್ಗೆ ಸೆಕ್ಯೂರಿಟಿ ಗಾರ್ಡ್ ಹತ್ತಿರ ರೆಕಾರ್ಡ್ಸ್ ರೂಮಿನ ಕೀಯನ್ನು ಪಡೆದುಕೊಂಡಿದ್ದರು. ನಿನ್ನೆ ಬೆಳಿಗ್ಗೆಯಿಂದ ಮಹೇಶ್ ಅವರು ರೆಕಾರ್ಡ್ಸ್ ರೂಮ್ನಲ್ಲಿಯೇ ಓಡಾಡಿದ್ದರು. ನಿನ್ನೆ ಸಂಜೆ ಯಾರು ಇಲ್ಲದ ವೇಳೆ ಮಹೇಶ್ ನೇಣಿಗೆ ಶರಣಾಗಿದ್ದಾರೆ. ಸ್ಥಳಕ್ಕೆ ವಿಲ್ಸನ್ ಗಾರ್ಡನ್ ಠಾಣೆಯ ಪೊಲೀಸರು ಭೇಟಿ ನೀಡಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ. ಮಹೇಶ್ ಆತ್ಮಹತ್ಯೆ ಕುರಿತಂತೆ ಅವರ ಕುಟುಂಬ ಸದಸ್ಯರಿಗೆ ಪೊಲೀಸರು ಮಾಹಿತಿ ರವಾನಿಸಿದ್ದಾರೆ.

## ಪ್ರಯಾಣಿಕರಿಂದ ರೂ.6.6 ಕೋ. ಚಿನ್ನ ವಶ

• ಉದಯವಾಹಿನಿ, ದೇವನಹಳ್ಳಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜುಲೈ 9ರಿಂದ ಜುಲೈ 13ರವರೆಗೆ ಕಸ್ಟಮ್ಸ್ ಅಧಿಕಾರಿಗಳು ಚಿನ್ನ ಕಳ್ಳಸಾಗಣೆ 11 ಪ್ರಕರಣ ಪತ್ತೆ ಹಚ್ಚಿ ಆರೋಪಿಗಳಿಂದ ಒಟ್ಟು 6.6 ಕೋಟಿ ಮೌಲ್ಯದ ರೂ. 9,375 ಗ್ರಾಂ ಚಿನ್ನ ವಶಕ್ಕೆ ಪಡೆದಿದ್ದಾರೆ. ದುಬೈ, ಶ್ರೀಲಂಕಾ, ಬಹರೇನ್, ಕೊಲೊಂಬೊದಿಂದ ಆಗಮಿಸಿದ ಎಂಟು ಪ್ರಯಾಣಿಕರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಶಾರ್ಜಾದಿಂದ ಆಗಮಿಸಿದ ಅಪರಾಧ ಹಿನ್ನೆಲೆಯ ಪ್ರಯಾಣಿಕನನ್ನು ತಪಾಸಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು ರೂ.1.59 ಕೋಟಿ ಮೌಲ್ಯದ ವಿದೇಶಿ ಕರೆನ್ಸಿ ಜಪ್ತಿ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಜನಪ್ರತಿನಿಧಿಗಳ ಸಭೆ: ಡಿಸಿಎಂ ಡಿಕೆ ಶಿವಕುಮಾರ್

■ ಬೆಂಗಳೂರು ನಿರ್ವಹಣೆಗೆ ಇಲಾಖೆಗಳ ನಡುವೆ ಸಮನ್ವಯತೆ ■ ಸಮನ್ವಯತೆ ಕೊರತೆ ಸಂಸದರ ಸಭೆ ಜುಲೈ 27 ರಂದು

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್ ಎಸ್ ಬಿ, ಬೆಸ್ಕಾಂ ಸೇರಿದಂತೆ ಬೆಂಗಳೂರು ಅಭಿವೃದ್ದಿಗೆ ಇರುವ ಪ್ರತಿ ಇಲಾಖೆಗಳ ನಡುವೆ ಸಮನ್ವಯತೆ ಸಾಧಿಸುವ ವಿಚಾರವಾಗಿ ಬೆಂಗಳೂರು ವ್ಯಾಪ್ತಿಯ ಶಾಸಕರು, ಸಂಸದರ ಸಭೆಯನ್ನು ಜುಲೈ 27 ರಂದು ನಡೆಸಲಾಗುವುದುಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ವಿಧಾನಸಭೆಯ ಪ್ರಶ್ನೋತ್ತರ ಕಲಾಪದ ವೇಳೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಶಾಸಕರಾದ ಎಸ್. ಸುರೇಶ್ ಕುಮಾರ್, ರಾಮ ಮೂರ್ತಿ ಅವರ ಪ್ರಸ್ತಾವನೆಗೆ ಡಿಸಿಎಂ ಅವರು ಹೀಗೆ ಪ್ರತಿಕ್ರಿಯಿಸಿದರು.ಇದಕ್ಕೂ ಮೊದಲು ಬಿಜೆಪಿ ನಾಯಕರು ಬೆಂಗಳೂರು ಅಭಿವೃದ್ಧಿಗೆ ಇರುವ ಇಲಾಖೆಗಳ ನಡುವೆ ಸಮನ್ವಯತೆ ಕೊರತೆ ಬಗ್ಗೆ ಆಕ್ಷೇಪವ್ಯಕ್ತಪಡಿಸಿದರು.

ಇದಕ್ಕೆ ಉತ್ತರಿಸಿದ ಡಿಸಿಎಂ ಅವರು, ಅಶೋಕ್, ಸುರೇಶ್ ಕುಮಾರ್, ರಾಮಮೂರ್ತಿ ಅವರ ಮಾತಿಗೆ ನನ್ನ ಸಹಮತವಿದೆ. ಕಳೆದ ಒಂದು ವರ್ಷದಿಂದ ಸಮನ್ವಯತೆ ಸಾಧಿಸಲು ನಾನೇ ಸಾಕಷ್ಟು ಕಸರತ್ತು ನಡೆಸಿದ್ದೇನೆ. ಇದರಲ್ಲಿ ಸಂಪೂರ್ಣ ಯಶಸ್ವಿಯಾಗಿಲ್ಲ. ಆದರೆ ಒಂದು ಹಂತಕ್ಕೆ ಸಮಸ್ಯೆ ನಿವಾರಣೆ ಮಾಡಿದ್ದೇನೆ. ಆದರೆ ಪ್ರಯತ್ನ ಮುಂದುವರೆಸಿದ್ದೇನೆ. ಪ್ರತಿಪಕ್ಷದವರು ಸಹಕಾರ ನೀಡಿದರೆ ಕಸ ವಿಲೇವಾರಿ, ಕುಡಿಯುವ ನೀರು, ಸಂಚಾರ ದಟ್ಟಣೆ, ಬೀದಿ ದೀಪ, ತೆರಿಗೆ ಸಂಗ್ರಹ, ಹಸಿರೀಕರಣ - ಹೀಗೆ ಅನೇಕ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಬಹುದುಎಂದು ತಿಳಿಸಿದರು.

**ಪ್ರತಿಪಕ್ಷದವರು ಸಹಕಾರ ನೀಡಿದರೆ ಕಸ ವಿಲೇವಾರಿ**

ನನ್ನ ಬಳಿ ಎರಡು ಆಯ್ಕೆಗಳಿದ್ದು, ಸ್ಪೀಕರ್ ಅವರು ಅವಕಾಶ ನೀಡಿದರೆ ಸದನದಲ್ಲೇ ಚರ್ಚೆ ನಡೆಸಬಹುದು ಅಥವಾ ಸದನ ಮುಗಿದ ಮಾರನೇ ದಿನವೇ ನೀವು ತಿಳಿಸಿದ ಜಾಗದಲ್ಲಿ ಇದೇ ವಿಚಾರವಾಗಿ ಇಡೀ ದಿನ ಚರ್ಚೆ ನಡೆಸೋಣ ಎಂದರು.

ಆಗ ?ಎರಡನೇ ಆಯ್ಕೆಯೇ ಉತ್ತಮ? ಎಂದು ಸ್ಪೀಕರ್ ಯು.ಟಿ.ಖಾದರ್ ಅವರು ಹೇಳಿದರು.

ನೀವು ವಿಧಾನಸಭೆ ಕಲಾಪವನ್ನು ಯಾವಾಗ ಮುಗಿಸುತ್ತೀರಾ ಎಂದು ಸ್ಪೀಕರ್ ಅವರನ್ನು ಶಿವಕುಮಾರ್ ಅವರು ಪ್ರಶ್ನಿಸಿದಾಗ 26ಕ್ಕೆ ಮುಗಿಸುತ್ತೇವೆ. ನಿಮ್ಮ ಉತ್ತರ ಹಾಗೂ ಅವರ ಸಲಹೆ ಎರಡೂ ಸರಿಯಿದೆ. ಚರ್ಚೆ ಇಲ್ಲಿ ಬೇಡ, ಸದನದ ಹೊರಗೆ ಇಟ್ಟುಕೊಳ್ಳಿ ಎಂದು ಯು.ಟಿ.ಖಾದರ್ ಹೇಳಿದರು. ಹಾಗದರೆ ಈ ಸಭೆಯನ್ನು ಇದೇ 27 ರಂದು ನಡೆಸೋಣಎಂದು ಡಿಸಿಎಂ ಅವರು ಹೇಳಿದರು. ಎತ್ತಿನಹೊಳೆ ಯೋಜನೆಗೆ 25 ಸಾವಿರ ಕೋಟಿ ಹಣ ಖರ್ಚಾಗಿದೆ. ಕಾಲುವೆಗಳಿಂದ ನೀರನ್ನು ಮದ್ಯೆ, ಮದ್ಯೆ ಪಂಪ್ ಸೆಟ್ ಮೂಲಕ ಎತ್ತುವ ಕಾರಣಕ್ಕೆ ನನಗೆ ಹಾಗೂ ನಮ್ಮ ಶಾಸಕರಿಗೆ ಭಯವಾಗುತ್ತಿದ್ದು, ತುಮಕೂರು ಭಾಗಕ್ಕೂ ನೀರು ತಲುಪುತ್ತದೆಯೇ ಎನ್ನುವ ಅನುಮಾನ ಬಂದಿದೆ ಎಂದು ವಿಧಾನಸಭೆಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಆತಂಕ ವ್ಯಕ್ತಪಡಿಸಿದರು.

ಶಾಸಕ ಜಗದೀಶ್ ಶಿವ ಗುಡಗಂಟಿ ಅವರು ತುಂಗಳ- ಸಾವಳಗಿ ಏತ ನೀರಾವರಿ ಯೋಜನೆಯ ಕೊನೆಯ ಭಾಗಗಳ ರೈತರಿಗೆ ನೀರು ತಲುಪುತ್ತಿಲ್ಲ ಎನ್ನುವ ವಿಚಾರವಾಗಿ ಗಮನ ಸೆಳೆದಾಗ ಉತ್ತರಿಸಿದ ಡಿಸಿಎಂ ಅವರು, ಎತ್ತಿನಹೊಳೆ ಯೋಜನೆಯ ಕಾಲುವೆಗಳಿಗೆ ನೀರು ಹರಿಸಿದರೆ ನೀರನ್ನು ಪಂಪ್, ಸೈಫನ್ ಮಾಡುತ್ತಾರೆ. ಅದೇ ರೀತಿ ಉತ್ತರ ಕರ್ನಾಟಕದ ಅನೇಕ ಕಡೆ ಶೇ 90ರಷ್ಟು ನೀರನ್ನು ಪಂಪ್ ಮಾಡಲಾಗುತ್ತಿದೆ. ಇದನ್ನು ತಡೆಯುವ ಕೆಲಸ ಅಧಿಕಾರಿಗಳಿಂದ ಆಗುವುದಿಲ್ಲ. ಜನಪ್ರತಿನಿಧಿಗಳಾದ ನಾವುಗಳು ನಮ್ಮ ರೈತರಿಗೆ ಮನವರಿಕೆ ಮಾಡಿಕೊಡಬೇಕು ಎಂದರು.



**ಕೆಆರ್ ಎಸ್ ನೀರು ಮಳವಳ್ಳಿಗೆ ಹೋಗುವುದೇ ಇಲ್ಲ. ಕಾಲುವೆ ಮಾಡಿ 20 ವರ್ಷಗಳಾದರೂ ಗದಗ ಜಿಲ್ಲೆ ನೀರನ್ನೇ ನೋಡಿಲ್ಲ. ಎಲ್ಲರೂ ಸಹಕಾರ ಕೊಟ್ಟರೇ ನಾವು ನೀರಿನ ರಕ್ಷಣೆ ಮಾಡಿ ಕೊನೆಯ ಭಾಗದ ರೈತರಿಗೂ ನೀರು ತಲುಪುವಂತೆ ಮಾಡುವ ಕಾನೂನು ತರಲಾಗುವುದು ಎಂದು ತಿಳಿಸಿದರು. ದಯವಿಟ್ಟು ಆದಷ್ಟು ಬೇಗ ವಿಧೇಯಕ ಸಿದ್ದಪಡಿಸಿ, ನಮ್ಮ ಸಂಪೂರ್ಣ ಸಹಕಾರವಿದೆ ಎಂದು ಬಿಜೆಪಿ ಶಾಸಕ ಸಿ.ಸಿ.ಪಾಟೀಲ್ ಅವರ ಮಾತಿಗೆ ಸಹಮತ ವ್ಯಕ್ತಪಡಿಸಿದರು.**

**ಹಾರಂಗಿ ಜಲಾಶಯಕ್ಕೆ 12,827 ಕ್ಯೂಸೆಕ್ಸ್, ಹೇಮಾವತಿ 14,027, ಕೆ.ಆರ್ ಎಸ್ 25,933, ಕಬಿನಿಗೆ 28,840 ಒಟ್ಟು 56, 626 ಕ್ಯೂಸೆಕ್ಸ್ ನೀರಿನ ಒಳಹರಿವಿದೆ. ಕಾನೂನಿನ ಪ್ರಕಾರ 40 ಟಿಎಂಸಿ ನೀರು ಹೋಗಬೇಕಾಗಿತ್ತು. ಬಿಳಿಗುಂಡ್ಲುವಿನಲ್ಲಿ ದಾಖಲೆ ಪ್ರಕಾರ 6 ಟಿಎಂಸಿ ನೀರು ಹೋಗಿದೆ. ಅಂದರೆ ಪ್ರತಿ ದಿನ ನೀರಿನ ಹರಿವಿನ ಪ್ರಮಾಣ 1.5 ಟಿಎಂಸಿ ಮುಟ್ಟಿದೆ. ಏಕೆಂದರೆ 250 ಕಿ.ಮೀ ನಷ್ಟು ನೀರು ಹರಿಯಬೇಕಿದೆ. ಇದೇ ರೀತಿ ಮಳೆ ಬಂದು ನೀರು ಹರಿದರೆ ತೊಂದರೆಯಾಗುವುದಿಲ್ಲ ಎಂಬುದು ನನ್ನ ಭಾವನೆ ಎಂದರು.**

ಮಂಡ್ಯ, ಹಾಸನ, ಬಾಗಲಕೋಟೆ ಸೇರಿದಂತೆ ರಾಜ್ಯದ ನೀರಾವರಿ ಪ್ರದೇಶಗಳ ಟೇಲ್ ಎಂಡ್ ಭಾಗಗಳಿಗೆ ನೀರು ತಲುಪುತ್ತಿಲ್ಲ. ಏತ ನೀರಾವರಿ ಮಾಡಿದರೂ ಸಹ ಶೇ 50 ರಷ್ಟು ನೀರು ಸಹ ಹೋಗುತ್ತಿಲ್ಲ. ಸದನ ಒಪ್ಪುವುದಾದರೆ ಇದನ್ನು ತಡೆಯಲು ವಾರದೊಳಗೆ ಬಿಲ್ ತಯಾರು ಮಾಡಲಾಗುವುದು ಎಂದರು. ಇದನ್ನು ಯಾವ ರೀತಿ ನಿಯಂತ್ರಣ ಮಾಡಬೇಕು ಎಂದು ಪರಿಶೀಲನೆ ನಡೆಸಲಾಗಿದೆ. ನಾವು ನೀರನ್ನು ಏತ ನೀರಾವರಿ ಮೂಲಕ ಹರಿಸುತ್ತೇವೆ. ಆ ನೀರನ್ನೇ ಪಂಪ್ ಮೂಲಕ 10 ಕಿಮೀಗಟ್ಟಲೇ ಪಂಪ್ ಮಾಡುತ್ತಾರೆ. ಯೋಜನೆ ಮಾಡಿ ಏನು ಲಾಭ ಎಂದು ಹೇಳಿದರು.

## ಬಿಪಿಎಲ್ ಕಾರ್ಡ್ ಆಕಾಂಕ್ಷಿಗಳಿಗೆ ಶೀಘ್ರದಲ್ಲಿ 1.73 ಲಕ್ಷ ಅರ್ಜಿ ವಿಲೇವಾರಿ

• ಉದಯವಾಹಿನಿ, ಬೆಂಗಳೂರು

ಬಿಪಿಎಲ್ ಕಾರ್ಡ್ ಹೊಸದಾಗಿ ಅರ್ಜಿ ಸಲ್ಲಿಸಿದ್ದ ಆಕಾಂಕ್ಷಿಗಳಿಗೆ ಆಹಾರ ಸಚಿವ ಕೆಎಚ್ ಮುನಿಯಪ್ಪ ಅವರು ಸಿಹಿ ಸುದ್ದಿ ಒಂದನ್ನು ನೀಡಿದ್ದು, ರಾಜ್ಯದಲ್ಲಿ 1.73 ಲಕ್ಷ ಅರ್ಜಿ ಸಲ್ಲಿಕೆಯಾಗಿದ್ದು, ಶೀಘ್ರದಲ್ಲಿ ವಿಲೇವಾರಿ ಮಾಡಿ ಅರ್ಹರಿಗೆ ಕಾರ್ಡ್ ವಿತರಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್ ಮುನಿಯಪ್ಪ ತಿಳಿಸಿದರು.



ಉದಯವಾಹಿನಿ ಚಿತ್ರ

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ ಸಿಂಹ ನಾಯಕ್ ಪ್ರಶ್ನೆಗೆ ಉತ್ತರಿಸಿದ ಅವರು, 2.95 ಲಕ್ಷ ಪಡಿತರ ಚೀಟಿಗಾಗಿ ಅರ್ಜಿ ಬಂದಿವೆ. ಇದರಲ್ಲಿ 2.36 ಲಕ್ಷ ಮಂದಿ ಅರ್ಹರಿದ್ದಾರೆ. ಬಿಪಿಎಲ್ ಕಾಡ್ ್ಗೆ ಅರ್ಜಿ ಹಾಕಿದ ಒಂದು ವಾರದೊಳಗೆ ಅಂಥವರಿಗೆ ಆರೋಗ್ಯ ಸೇವೆ ಸಿಗುವಂತಹ ವ್ಯವಸ್ಥೆ ಮಾಡಲಾಗಿದೆ ಎಂದರು.


**ರಾಜ್ಯದಲ್ಲಿ 1.73 ಲಕ್ಷ ಅರ್ಜಿ ಸಲ್ಲಿಕೆ**

ಇದೆ ವೇಳೆ ಕಲಾಪದ ವೇಳೆ ಬಿಜೆಪಿಯ ಎನ್ ರವಿಕುಮಾರ್, ಶಿಕ್ಷಣ ಇಲಾಖೆಯು ಅಕ್ಷರ ದಾಸೋಹಕ್ಕೆ 1 ಕೆ.ಜಿ ಅಕ್ಕಿಗೆ 29.30 ರೂ. ಕೊಟ್ಟು ಖರೀದಿಸುತ್ತಿದೆ. ಪಡಿತರ ಚೀಟಿಗೆ ನೀಡುವ ಅಕ್ಕಿಯನ್ನು 34.60 ರೂ.ಗೆ ಖರೀದಿಸಲಾಗುತ್ತಿದೆ. ಇದರ ಮಧ್ಯೆ 5.5 ರೂ.ವ್ಯತ್ಯಾವಿದೆ. ಇದು ಹೇಗೆ ಸಾಧ್ಯ ಅಕ್ಕಿ ಹಣ ಎಲ್ಲಿಗೆ ಹೋಗುತ್ತಿದೆ ಮಕ್ಕಳು ತಿನ್ನುವ ಅಕ್ಕಿಗೆ ಗುಣಮಟ್ಟತೆ ಇಲ್ಲವೇ ಎಂದು ಪ್ರಶ್ನಿಸಿದರು.

**ಇದಕ್ಕೆ ಉತ್ತರಿಸಿದ ಸಚಿವ ಮುನಿಯಪ್ಪ, ಅಕ್ಷರ ದಾಸೋಹಕ್ಕೆ ರಾಜ್ಯದ ಟೆಂಡರ್, ಅನ್ನಭಾಗ್ಯಕ್ಕೆ ಕೇಂದ್ರೀಯ ಭಂಡಾರದಿಂದ ಅಕ್ಕಿ ಖರೀದಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಖರೀದಿ ದರದಲ್ಲಿ ವ್ಯತ್ಯಾಸವಿದೆ. ಕೇಂದ್ರಕ್ಕೆ ಸೇರಿದ ಎರಡು ಸಂಸ್ಥೆಗಳಿಂದಲೇ ಅಕ್ಕಿಯನ್ನು ಪಾರದರ್ಶಕವಾಗಿ ಖರೀದಿ ಮಾಡಲಾಗುತ್ತಿದೆ. ಅನ್ನಭಾಗ್ಯಕ್ಕೆ ಬೇಕಾದ ಹೆಚ್ಚುವರಿ ಅಕ್ಕಿಯನ್ನು ಕೇಂದ್ರ ಕೊಡಲಿಲ್ಲ. ನಂತರ ನಾವು ಕೇಂದ್ರ ಸ್ವಾಮ್ಯದ ಸಂಸ್ಥೆಗಳ ಮೂಲಕವೇ 'ಎ' ಗ್ರೇಡ್ ರಾ ರೈಸ್ ಖರೀದಿಸಿ ವಿತರಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.**

## ಸಿಎಂ ವಿರುದ್ಧ ಚುನಾವಣಾ ಆಯೋಗಕ್ಕೆ 2ನೇ ದೂರು

• ಉದಯವಾಹಿನಿ, ಬೆಂಗಳೂರು



ಮುಡಾ ಸೈಟ್ ಹಂಚಿಕೆಯಲ್ಲಿ ಹಗರಣ ನಡೆದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮತ್ತೊಂದು ಸಂಕಷ್ಟ ಎದುರಾಗಿದ್ದು, ಇದೀಗ ಸಿಎಂ ಸಿದ್ದರಾಮಯ್ಯ ವಿರುದ್ಧ ಚುನಾವಣೆ ಆಯೋಗಕ್ಕೆ ಎರಡನೇ ದೂರು ಸಲ್ಲಿಕೆಯಾಗಿದೆ ಎಂದು ತಿಳಿದುಬಂದಿದೆ.

ಹೌದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎರಡು ಪ್ರತ್ಯೇಕ ದೂರು ಸಲ್ಲಿಕೆಯಾಗಿದ್ದು, 2018-23ರ ಚುನಾವಣಾ ಅಫೀಡಿವೇಟ್ ನಲ್ಲಿ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಟಿಜೆ ಅಬ್ರಹಾಂ ಎನ್ನುವವರು ಮುಖ್ಯ ಚುನಾವಣಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. 2018ರ ವಿಧಾನಸಭೆ ಚುನಾವಣೆಯ ವೇಳೆ 3.16 ಎಕರೆ ಕೃಷಿ ಜಮೀನು ಹೊಂದಿದ್ದು, ಪತ್ನಿ ಪಾರ್ವತಿ ಬಳಿ 3 ಕೆರೆ 16 ಗುಂಟೆ ಜಮೀನು ಎಂದು ನಮೂದಿಸಲಾಗಿದೆ. ಆಫೀಡಿವೇಟ್ ಒಟ್ನಲ್ಲಿ 3 ಎಕರೆ 16 ಗುಂಟೆ ಕೃಷಿ ಜಮಿನು ಎಂದು ನಮೂದು ಮಾಡಲಾಗಿದೆ.ಇದರ ಮೌಲ್ಯ 25 ಲಕ್ಷ ಎಂದು ಸಿಎಂ ಸಿದ್ದರಾಮಯ್ಯ ಆಫೀಡಿವೇಟ್‌ನಲ್ಲಿ ನಮೂದಿಸಿದ್ದರು. 2005ರಲ್ಲಿ ಜಮೀನು ಪರಿವರ್ತನೆ ಮಾಡಿಸಿದ್ದ ದಾಖಲೆ ನೀಡಿ ದೂರು ಸಲ್ಲಿಕೆಯಾಗಿದೆ. 2023ರ ವಿಧಾನಸಭೆ ಚುನಾವಣೆಯ ವೇಳೆ 14 ಮುಡಾ ಸೈಟ್‌ಗಳ ಮೌಲ್ಯ ಕೇವಲ 8 ಕೋಟಿ ಎಂದು ಅಫಿಡಿಟ್‌ನಲ್ಲಿ ನಮೂದು ಮಾಡಲಾಗಿದೆ. ಮುಡಾದ 14 ಸೈಟ್‌ಗಳ ಅಸಲಿ ಮಾರುಕಟ್ಟೆಯ ಮೌಲ್ಯ 34 ಕೋಟಿ ಆಗಿದೆ. ಉದ್ದೇಶಪೂರ್ವಕವಾಗಿ ಸಿಎಂ ಸಿದ್ದರಾಮಯ್ಯ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಎರಡನೇ ದೂರು ಸಲ್ಲಿಕೆಯಾಗಿದೆ. ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಸಾಮಾಜಿಕ ಹೋರಾಟಗಾರ ಟಿಜೆ ಅಬ್ರಹಾಂ ದೂರು ಸಲ್ಲಿಸಿದ್ದಾರೆ.

## ಕಸ ವೀಲೆವಾರಿ ಸಂಸ್ಥೆಯಿಂದ ಕೋಟಿ ಕೋಟಿ ಕಿಕ್‌ಬ್ಯಾಕ್

• ಉದಯವಾಹಿನಿ, ಬೆಂಗಳೂರು

ಕಸದಲ್ಲಿ ಹಣ ಮಾಡೋದಕ್ಕೆ ಮುಂದಾಗಿರುವ ರಾಜ್ಯ ಪ್ರಭಾವಿ ಸಚಿವರೊಬ್ಬರು ನಗರದಲ್ಲಿ ಹೊಸ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಜಾರಿಗೆ ತಂದು ಬ್ಲಾಕ್ ಲಿಸ್ಟ್ ನಲ್ಲಿ ಇರೋ ಒಂದೇ ಸಂಸ್ಥೆಗೆ 30 ವರ್ಷಗಳ ಕಾಲ ಸುಮಾರು 45 ಸಾವಿರ ಕೋಟಿಗೆ ಗುತ್ತಿಗೆ ನೀಡುವ ಮೂಲಕ ಕಿಕ್ ಬ್ಯಾಕ್ ಪಡೆದಿದ್ದಾರೆ ಎಂದು ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಗಂಭೀರ ಆರೋಪ ಮಾಡಿದ್ದಾರೆ.

ಬ್ಲಾಕ್ ಲಿಸ್ಟ್‌ನಲ್ಲಿ ಇರುವ ರಾಮ್ಕಿ ಸಂಸ್ಥೆಗೆ ಕಸದ ಗುತ್ತಿಗೆ ನೀಡುವುದನ್ನು ತಡೆ ಹಿಡಿಯುವ ಮೂಲಕ ನಗರದ ಹಿತ ಕಾಪಡಬೇಕು ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ನಗರದ 225 ವಾರ್ಡ್‌ಗಳ ಕಸ ವಿಲೇವಾರಿಗೆ ಹೈದರಾಬಾದ್ ಮೂಲದ ರಾಮ್ಕಿ ಸಂಸ್ಥೆಗೆ 30 ವರ್ಷಗಳ ಕಾಲ ಸುಮಾರು 45 ಸಾವಿರ ಕೋಟಿ ರೂಪಾಯಿಗಳ ಗುತ್ತಿಗೆ ನೀಡೋದಕ್ಕೆ ಬೆಂಗಳೂರು ಉಸ್ತುವಾರಿ ಸಚಿವರು ಮುಂದಾಗಿದ್ದಾರೆ. ಈಗಾಗಲೇ ಬ್ಲಾಕ್ ಲಿಸ್ಟ್‌ನಲ್ಲಿ ಇರೋ ರಾಮ್ಕಿ ಸಂಸ್ಥೆಗೆ ಮತ್ತೆ ಟೆಂಡರ್ ನೀಡುವ ಮೂಲಕ ಬಾರಿ ಮೊತ್ತದ ಕಿಕ್ ಬ್ಯಾಕ್ ಪಡೆಯಲಾಗುತ್ತಿದೆ ಎಂದು ಪತ್ರದಲ್ಲಿ ರಮೇಶ್ ಗಂಭೀರ ಆರೋಪ ಮಾಡಿದ್ದಾರೆ. ಸದ್ಯ ಪ್ರತಿನಿತ್ಯ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿ ಕಾರ್ಯಕ್ಕೆಂದು ಪ್ರಸ್ತುತ ವರ್ಷಕ್ಕೆ ಸುಮಾರು . 450 ರಿಂದ 510 ಕೋಟಿ ರೂ. ಗಳಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದು,



**ಕಸ ವಿಲೇವಾರಿಗೆ ಸಂಬಂಧಿಸಿದಂತೆ ಉದ್ದೇಶಿತ ನಾಲ್ಕು ಪ್ಯಾಕೇಜ್ ಗಳಿಗೆ ಮಂಡೂರು, ಟೆರ್ರಾಫಾರಂ. ಗೊಲ್ಲಹಳ್ಳಿ ಹಾಗೂ ಬಿಡದಿ ಪ್ರದೇಶಗಳಲ್ಲಿ ಪಾಲಿಕೆ ಗುರುತಿಸಿರುವ ತಲಾ 100 ಎಕರೆಗಳಷ್ಟು ವಿಸ್ತೀರ್ಣದ ಸ್ಥಳಗಳನ್ನು ಪಾಲಿಕೆ ಮತ್ತು ರಾಜ್ಯ ಸರ್ಕಾರವು ತನ್ನ ಖಜಾನೆಯಿಂದಲೇ ಹಣವನ್ನು ಪಾವತಿಸಿ ಕ್ರಯಕ್ಕೆ ಪಡೆದು, ನಂತರ ಆ ಸ್ಥಳಗಳಲ್ಲಿ ತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಅಗತ್ಯವಿರುವ ಎಲ್ಲಾ ವಿಧದ ಮೂಲಭೂತ ಸೌಲಭ್ಯಗಳನ್ನು ತನ್ನ ಹಣದಿಂದಲೇ ಕಲ್ಪಿಸಿಕೊಡಲು ಸರ್ಕಾರವು ಮುಂದಾಗಿದೆ.**

ಪ್ರಸ್ತುತ ಪಾಲಿಕೆಯು ಪ್ರತೀ ಟನ್ ತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಣೆಕೆಗೆ 1,300/- ರೂ ವೆಚ್ಚ ಮಾಡುತ್ತಿದೆ. ಆದರೆ, ಹೊಸ ಕರಡು ಪ್ರತಿಯಲ್ಲಿ ಒಂದು ಟನ್ ತ್ಯಾಜ್ಯದ ಸಂಗ್ರಹ ಮತ್ತು ಸಾಗಣೆ ಕಾರ್ಯಕ್ಕೆ . 2,343/- ರಷ್ಟು ಹಣ ನಿಗದಿ ಮಾಡಲಾಗಿದ ಇದರ ಮೂಲಕ ನಾಗರಿಕರ ತೆರಿಗೆ ಹಣ ಲೂಟಿ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಈ ರೀತಿ ಸರ್ಕಾರವು ಏಕೀಕತ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ 30 ವರ್ಷಗಳ ಗುತ್ತಿಗೆಯನ್ನು ಕಪ್ಪು ಪಟ್ಟಿಗೆ ಸೇರಿಸಲ್ಪಟ್ಟಿರುವ ರಾಮ್ಕಿ ಸಂಸ್ಥೆ ಗೆ ನೀಡಲು ಹೊರಟಿರುವುದು ದುರದೃಷ್ಟಕರ ಎಂದು ಅವರು ಜರಿದಿದ್ದಾರೆ. 30 ವರ್ಷಗಳ ಅವಧಿಯಲ್ಲಿ ಸದರಿ ಗುತ್ತಿಗೆದಾರರಿಗೆ 45,000 ಕೋಟಿ ರೂ. ಗಳಷ್ಟು ಬಹತ್ ಪ್ರಮಾಣದ ಸಾರ್ವಜನಿಕರ ಹಣವನ್ನು ನೀಡುವ ಮೂಲಕ ಹತ್ತಾರು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಕಮಿಷನ್ ರೂಪದಲ್ಲಿ ಪಡೆಯಲು ಹೊರಟಿರುವ ತಮ ಸರ್ಕಾರದ ಕೆಲವು ಭ್ರಷ್ಟರಿಂದಾಗಿ, ಬೆಂಗಳೂರು ಮಹಾನಗರವು ಮುಂದೆಂದಿಗೂ ಚೇತರಿಸಿಕೊಳ್ಳಲಾಗದಂತಹ ಆರ್ಥಿಕ ಹೊಡೆತವನ್ನು ನೀಡಲು ಹೊರಟಿದೆ ಅಂತ ಅರೋಪ ಮಾಡಿ ಸಿಎಂ ಗೆ ರಮೇಶ್ ದೂರು ನೀಡಿದ್ದಾರೆ.

## ಇನ್ಮುಂದೆ ಅಂಗಾಂಗ ದಾನಿಗಳಿಗೆ ಸ್ವಾತಂತ್ರ್ಯ, ಗಣರಾಜ್ಯೋತ್ಸವ ದಿನದಂದು ಪ್ರಶಂಸಾ ಪತ್ರ ನೀಡಿ ಗೌರವ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದಿಂದ ಅಂಗಾಂಗ ದಾನವನ್ನು ಪ್ರೋತ್ಸಾಹಿಸೋ ನಿಟ್ಟಿನಲ್ಲಿ ಮಹತ್ವದ ಕ್ರಮ ಕೈಗೊಂಡಿದೆ. ಅದೇ ಇನ್ಮುಂದೆ ಅಂಗಾಂಗ ದಾನಿಗಳಿಗೆ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವದಂದು ಪ್ರಶಂಸನಾ ಪತ್ರ ನೀಡಿ ಗೌರವ ಸಲ್ಲಿಸೋ ನಿರ್ಧಾರವನ್ನು ಕೈಗೊಂಡಿದೆ.

ಈ ಕುರಿತಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಅವರು ಸುತ್ತೋಲೆ ಹೊರಡಿಸಿದ್ದಾರೆ. ಅದರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಸ್ಥಾಪಿತವಾದ State Organ Tissue Transplant Organization (SOTTO Karnataka) ಮುಖಾಂತರ ನೀಡುವ ಮಾಹಿತಿ ಆಧರಿಸಿ ಅಂಗಾಂಗ ದಾನ ಮಾಡಿದ ದಿನಾಂಕದಿಂದ 10 ದಿನಗಳ ಒಳಗೆ ರಾಜ್ಯ ಸರ್ಕಾರದ ಪರವಾಗಿ ಅಂಗದಾನಿಯ ಕುಟುಂಬದವರಿಗೆ ಪ್ರಶಂಸಾ ಪತ್ರ ನೀಡಿ ಗೌರವಿಸಲು ಸರ್ಕಾರದ ಆದೇಶ ಸಂಖ್ಯೆ: ಆಕುಕ 93 ಎಫ್‌ಪಿಆರ್ 2024, ದಿನಾಂಕ:01.3.2024 ರಲ್ಲಿ ಆದೇಶಿಸಲಾಗಿದೆ ಅಂತ ತಿಳಿಸಿದ್ದಾರೆ.

ಸದರಿ ಆದೇಶದನ್ವಯ ಅಂಗಾಂಗದಾನ ಮಾಡಿದ 10 ದಿನಗಳ ಒಳಗೆ ಪ್ರಾಥಮಿಕವಾಗಿ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸುವ ಬಗ್ಗೆ, ಕ್ರಮವಹಿಸುವುದು. ತದನಂತರ ಸಾರ್ವಜನಿಕ ಸಮಾರಂಭಗಳಾದ 15ನೇ ಆಗಸ್ಟ್ ಸ್ವಾತಂತ್ರ ದಿನಾಚರಣೆಯ ಸಮಾರಂಭದಲ್ಲಿ (ಅಂದರೆ, ವರ್ಷದ ಜನವರಿ 26ನೇ ರಿಂದ 14 ನೇ ಆಗಸ್ಟ್ ವರೆಗೆ ಅಂಗಾಂಗಗಳನ್ನು ದಾನ ಮಾಡುವವರಿಗೆ) ಮತ್ತು 26ನೇ ಗಣರಾಜೋತ್ಸವದ ಸಮಾರಂಭದಲ್ಲಿ (ಅಂದರೆ, ಹಿಂದಿನ ವರ್ಷದ ಆಗಸ್ಟ್ 15 ರಿಂದ ಸಂಬಂಧಿತ ವರ್ಷ ಜನವರಿ 25ನೇ ದಿನಾಂಕದವರೆಗೆ ಅಂಗಾಂಗಗಳನ್ನು ದಾನ ಮಾಡುವವರಿಗೆ) ಜಿಲ್ಲಾಡಳಿತದ ವತಿಯಿಂದ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸುವ ಬಗ್ಗೆ ಕ್ರಮವಹಿಸತಕ್ಕದೆಂದು ಈ ಮೂಲಕ ಸ್ಪಷ್ಟಪಡಿಸಿದ್ದಾರೆ.



**15ನೇ ಆಗಸ್ಟ್ ಸ್ವಾತಂತ್ರ ದಿನಾಚರಣೆಯ ಸಮಾರಂಭ**

2023ನೇ ಸಾಲಿನಿಂದ ಜುಲೈ 2024 ರವರೆಗೆ ಅಂಗಾಂಗದಾನ ಮಾಡಿರುವ ಕುಟುಂಬದವರಿಗೆ 15ನೇ ಆಗಸ್ಟ್ 2024 ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭದಲ್ಲಿ ಜಿಲ್ಲಾಮಟ್ಟದಲ್ಲಿ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸುವ ಬಗ್ಗೆ ಸಹ ಕ್ರಮವಹಿಸುವಂತೆ ಸೂಚಿಸಿದ್ದಾರೆ.

# ಕಂದಾಯ ಇಲಾಖೆಯ ಎನಿವೇರ್ ನೋಂದಣಿ ವ್ಯವಸ್ಥೆ

■ ಆಗಸ್ಟ್ ತಿಂಗಳಿನಿಂದ ಪ್ರತಿಯೊಂದು ಜಿಲ್ಲೆಗಳಿಗೂ ವಿಸ್ತರಿಸಿ ಎಂದು ಸಚಿವ ಕೃಷ್ಣ ಬೈರೇಗೌಡ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

ನೋಂದಣಿ ಇಲಾಖೆಯನ್ನು ಮತ್ತಷ್ಟು ಜನಸ್ನೇಹಿಗೊಳಿಸುವ ಉದ್ದೇಶದಿಂದ ಜಾರಿಗೊಳಿಸಲಾಗಿದ್ದ ಹಾಗೂ ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಎನಿವೇರ್ ನೋಂದಣಿ ವ್ಯವಸ್ಥೆಯನ್ನು ಆಗಸ್ಟ್ ತಿಂಗಳಿನಿಂದ ಪ್ರತಿಯೊಂದು ಜಿಲ್ಲೆಗಳಿಗೂ ವಿಸ್ತರಿಸಿ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನಸಭಾ ಅಧಿವೇಶನದ ನಡುವೆ ಮಂಗಳವಾರ ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಸಂಬಂಧಿತ ಅಧಿಕಾರಿಗಳ ಜೊತೆ ಸಭೆ ನಡೆಸಿ ಸೂಚನೆ ನೀಡಿದ ಅವರು, ಉಪ ನೋಂದಣಾಧಿಕಾರಿ ಕಚೇರಿ ಎಂದರೆ ಜನದಟ್ಟಣೆ ಸಾಮಾನ್ಯ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಜನ ಸಾಮಾನ್ಯರನ್ನು ಸರಕಾರಿ ಕಚೇರಿಗಳಲ್ಲಿ ಕಾಯಿಸುವುದೂ ಒಂದು ರೀತಿಯ ಶೋಷಣೆ ಎಂಬುದರಲ್ಲಿ ಎರಡು ಮಾತಿಲ್ಲ. ಇದೇ ಕಾರಣಕ್ಕೆ ಬೆಂಗಳೂರಿನಲ್ಲಿ ಈಗಾಗಲೇ ಎನಿವೇರ್ ನೋಂದಣಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಆದರೆ, ಈ ವ್ಯವಸ್ಥೆ ಬೆಂಗಳೂರಿಗೆ ಮಾತ್ರ ಸೀಮಿತವಾಗದೆ ಆಗಸ್ಟ್ ತಿಂಗಳಿನಿಂದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕು ಎಂದು ಸಮಯದ ಗಡುವು ನೀಡಿದರು. ಪ್ರಾಯೋಗಿಕವಾಗಿ ಬೆಳಗಾವಿ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಇದೇ ವರ್ಷ ಮಾ.14 ರಿಂದ ಎನಿವೇರ್ ನೋಂದಣಿ ವ್ಯವಸ್ಥೆಯನ್ನು ಪರಿಚಯಿಸಿದ್ದು, ಜನರಿಂದಲೂ ಉತ್ತಮ ಸ್ಪಂದನೆ ದೊರೆಯುತ್ತಿದೆ. ಹೀಗಾಗಿ ಮುಂದಿನ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ತಲಾ 4 ಜಿಲ್ಲೆಗಳಲ್ಲಿ ಈ ವ್ಯವಸ್ಥೆಯನ್ನು ಪರಿಚಯಿಸಿ. ನಂತರದ ತಿಂಗಳಲ್ಲಿ ಈ ಸಂಖ್ಯೆಯನ್ನು 8 ಕ್ಕೆ ಏರಿಸಿ. ಈ ವರ್ಷಾಂತ್ಯದೊಳಗೆ ಎಲ್ಲಾ ಜಿಲ್ಲೆಗಳಲ್ಲೂ ಎನಿವೇರ್ ರಿಜಿಸ್ಟ್ರೇಷನ್ ಲಭ್ಯವಾಗುವಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ದಸ್ತಾವೇಜುಗಳ ನೋಂದಣಿಗಳಲ್ಲಿನ ವಿಳಂಬ ತಡೆಗಟ್ಟಿ ನೋಂದಣಿ ಪ್ರಕ್ರಿಯೆಯನ್ನು ಸುಲಭಗೊಳಿಸುವ, ಸಬ್ ರಿಜಿಸ್ಟ್ರಾರ್ ಕಚೇರಿ ಎದುರು ಜನರಿಗೆ ಕಾಯುವ ಶೋಷಣೆಯಿಂದ ಮುಕ್ತಿ ನೀಡುವ ಹಾಗೂ ಕಚೇರಿ ಸಿಬ್ಬಂದಿಗಳ ಮೇಲೆ ಕೆಲಸದ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಎನಿವೇರ್ ರಿಜಿಸ್ಟ್ರೇಷನ್ ವ್ಯವಸ್ಥೆಯನ್ನು ಜಾರಿಗೆ ತರಲಾಯ್ತು.ಈ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮೊದಲು ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ, ಬಸವನಗುಡಿ, ಜಯನಗರ, ಶಿವಾಜಿನಗರ ಹಾಗೂ ರಾಜಾಜಿನಗರ ಜಿಲ್ಲಾ ನೋಂದಣಿ ಕಚೇರಿಯ ವ್ಯಾಪ್ತಿಯ ಉಪನೋಂದಣಿ ಕಚೇರಿಗಳಲ್ಲಿ ಜಾರಿಗೆ ತರಲಾಗಿತ್ತು.ಈ ಯೋಜನೆಯ ಮೂಲಕ ಆಸ್ತಿ ನೋಂದಣಿ ಸಮಯದಲ್ಲಿ ಜನಸಾಮಾನ್ಯರು ಬೆಂಗಳೂರು ನಗರದ ಜಿಲ್ಲಾ ನೋಂದಣಿ ಕಚೇರಿ ವ್ಯಾಪ್ತಿಯ ಯಾವುದಾದರೂ ಉಪನೋಂದಣಿ ಕಚೇರಿಯಲ್ಲಿ ಆಸ್ತಿ ನೋಂದಣಿ ಮಾಡಿಕೊಳ್ಳಲು ನೋಂದಣಿ ಕಾಯ್ದೆ-1908ರ ಕಲಂ (5) ಕಲಂ (6) ರಡಿಯಲ್ಲಿ ಅನುವು ಮಾಡಿಕೊಡಲಾಗಿತ್ತು. ಎನಿವೇರ್ ನೋಂದಣಿ ವ್ಯವಸ್ಥೆಯು ಬೆಂಗಳೂರು ನಗರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಜನ ಸಾಮಾನ್ಯರಿಗೆ ನೋಂದಣಿ ವಿಚಾರದಲ್ಲಿ ತ್ವರಿತ ಸೇವೆ ನೀಡಲು ಈ ಯೋಜನೆ ಸಹಕಾರಿಯಾಗಿದೆ. ಜನರೂ ಇದರ ಉಪಯೋಗವನ್ನು ಬಳಸಿಕೊಳ್ಳುತ್ತಿದ್ದಾರೆ. ಇದೇ ಕಾರಣಕ್ಕೆ ಈ ಯೋಜನೆಯನ್ನು ಇದೀಗ ರಾಜ್ಯಾದ್ಯಂತ ವಿಸ್ತರಿಸಲು ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.



ಉದಯವಾಹಿನಿ ಚಿತ್ರ

**ಜನ ದಟ್ಟಣೆ ಸಾಮಾನ್ಯ**

**ಈ ನೂತನ ಯೋಜನೆಯು ಸಾರ್ವಜನಿಕರಿಗೆ ಉಪಯುಕ್ತ ವ್ಯವಸ್ಥೆಯಾಗಿರಲಿದೆ. ದಸ್ತಾವೇಜಿನ ನೋಂದಣಿಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ. ಮತ್ತು ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬವನ್ನು ತಡೆಗಟ್ಟಿ ಸಾರ್ವಜನಿಕರ ಸಮಯ ಉಳಿಸಿ ಕಚೇರಿಯ ಜನದಟ್ಟಣೆಯನ್ನು ನಿಯಂತ್ರಿಸುತ್ತದೆ. ಅಲ್ಲದೆ, ಕಚೇರಿ ನೋಂದಣಿ ಕೆಲಸವನ್ನೂ ಜಿಲ್ಲೆಯಾದ್ಯಂತ ಎಲ್ಲ ಕಚೇರಿಗಳಿಗೂ ಸಮಾನವಾಗಿ ಹಂಚಿಕೆ ಮಾಡಲು ಈ ಯೋಜನೆ ಸಹಕಾರಿಯಾಗಿರಲಿದೆ ಎಂದು ಹೇಳಿದರು.**

**-ಸಚಿವ ಕೃಷ್ಣ ಬೈರೇಗೌಡ**

**ಯಾವುದೇ ವ್ಯಕ್ತಿಯು ನೋಂದಣಿ ದಸ್ತಾವೇಜನ್ನು ಜನ ಸಂದಣಿ ಇಲ್ಲದ ಜಿಲ್ಲೆಯ ವ್ಯಾಪ್ತಿಯ ಯಾವುದಾದರೂ ಉಪನೋಂದಣಿ ಕಚೇರಿಯಲ್ಲಿ ತಮ್ಮ ಆಸ್ತಿ ದಸ್ತಾವೇಜನ್ನು ನೋಂದಾಯಿಸಿಕೊಳ್ಳಲು ಎನಿವೇರ್ ರಿಜಿಸ್ಟ್ರೇಷನ್ ವ್ಯವಸ್ಥೆಯ ಅಡಿಯಲ್ಲಿ ಸರ್ಕಾರ/ಕಂದಾಯ ಇಲಾಖೆ ಅವಕಾಶ ಮಾಡಿ ಕೊಟ್ಟಿದೆ.**

ಅಂತರಾಳದಿಂದ..
EDITORIAL

# ಮುಂಗಡ ಪತ್ರ: ಮೋದಿ ಸರಕಾರದ ಎದುರಿನ ಸವಾಲುಗಳು

ಲೋಕಸಭಾ ಚುನಾವಣೆಗೆ ಮುನ್ನ ಫೆಬ್ರವರಿಯಲ್ಲಿ ತಾತ್ಕಾಲಿಕ ಮುಂಗಡಪತ್ರವನ್ನು ಮಂಡಿಸಿದ್ದ ಕೇಂದ್ರದ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಸರಕಾರ ಈಗ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲು ತಯಾರಿ ನಡೆಸಿದೆ. ಇದಕ್ಕೆ ಪೂರ್ವ ಸಿದ್ಧತೆಯ ಭಾಗವಾಗಿ ಕೆಲವು ಆಯ್ದ ರಾಜ್ಯಗಳ ಮುಖ್ಯಮಂತ್ರಿಗಳು, ಹಣಕಾಸು ಮತ್ತು ನೀತಿ ಆಯೋಗದ ಸದಸ್ಯರು ಹಾಗೂ ಆರ್ಥಿಕ ಪರಿಣಿತರ ಜೊತೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ನಿರಂತರವಾಗಿ ಸಮಾಲೋಚನೆ ನಡೆಸಿದ್ದಾರೆ. ಜುಲೈ 23ರಂದು ಆಯವ್ಯಯ ಮಂಡನೆಯಾಗಲಿದೆ.ಈ ಮುಂಗಡಪತ್ರ ಸಿದ್ಧಪಡಿಸುವುದು ಈಗ ಸುಲಭವಲ್ಲ. ಹಣಕಾಸು ಆಯೋಗದ ಸೂತ್ರ ನೀತಿ ಆಯೋಗದ ಶಿಫಾರಸುಗಳು, ರಾಜ್ಯಗಳ ಬೇಡಿಕೆ ಹಾಗೂ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಮತದಾರರಿಗೆ ನೀಡಿದ್ದ ಭರವಸೆಗಳು, ಇವೆಲ್ಲವನ್ನೂ ಕಡ್ಡಾಯವಾಗಿ ಗಮನದಲ್ಲಿಟ್ಟುಕೊಂಡು ಮುಂಗಡ ಪತ್ರದ ಗಾತ್ರ ಮತ್ತು ಸ್ವರೂಪದ ಬಗ್ಗೆ ತೀರ್ಮಾನವಾಗಲಿದೆ. ಈಗ ಇರುವ ಹಲವಾರು ಯೋಜನೆಗಳನ್ನು ಮುಂದುವರಿಸುವ ಜೊತೆಗೆ ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಆಶ್ವಾಸನೆಗಳು ಹಾಗೂ ಸರಕಾರದ ಆಧಾರ ಸ್ತಂಭಗಳಾದ ಆಂಧ್ರಪ್ರದೇಶದ ತೆಲುಗು ದೇಶಂ ಮತ್ತು ಬಿಹಾರದ ಸಂಯುಕ್ತ ಜನತಾದಳಗಳ ವಿಶೇಷ ಬೇಡಿಕೆಗಳಿಗೆ ಪ್ರಧಾನಿ ಆದ್ಯತೆಯನ್ನು ನೀಡಬೇಕಾಗಿದೆ.

> **ಇದು ಮೋದಿಯವರಿಗೆ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಗಳಿಗೆ ಅವು ಸಂಗ್ರಹಿಸುವ ತೆರಿಗೆಯಲ್ಲಿ ಶೇ. 41ರಷ್ಟನ್ನು ನೀಡಬೇಕಾಗುತ್ತದೆ. ಆದರೆ ಈ ಹಣಕಾಸು ಆಯೋಗ ಮಾಡಿರುವ ಶಿಫಾರಸಿನಿಂದ ಕರ್ನಾಟಕ ಮತ್ತು ಕೇರಳ ರಾಜ್ಯಗಳಿಗೆ ತೆರಿಗೆ ಪಾಲಿನಲ್ಲಿ ಅನ್ಯಾಯವಾಗಿದೆ ಎಂದು ದಿಲ್ಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ, ಅರ್ಥಶಾಸ್ತ್ರಪ್ಪ ಅರುಣ್ ಕುಮಾರ್ ಮತ್ತು ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ನೀತಿ ನಿರೂಪಣಾ ಸಂಸ್ಥೆಯ ಪಿನಾಕಿ ಚಕ್ರವರ್ತಿ ಅವರು ಹೇಳಿದ್ದಾರೆ.**

ಲೋಕಸಭಾ ಚುನಾವಣೆಯ ನಂತರ ಚಂದ್ರಬಾಬು ನಾಯ್ಡು ಅವರ ತೆಲುಗು ದೇಶಂ ಮತ್ತು ನಿತೀಶ್ ಕುಮಾರ್ ಅವರ ಸಂಯುಕ್ತ ಜನತಾದಳಗಳು ಆಸರೆಯಾಗಿ ನಿಲ್ಲದಿದ್ದರೆ ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ರಚನೆಯಾಗುತ್ತಿರಲಿಲ್ಲ. ಸರಕಾರಕ್ಕೆ ಬೆಂಬಲ ನೀಡುವ ಮುನ್ನ ತೆಲುಗು ದೇಶಂ ಲೋಕಸಭೆಯ ಸ್ಪೀಕರ್ ಸ್ಥಾನ ಮತ್ತು ನಾಲ್ಕು ಸಂಪುಟ ದರ್ಜೆಯ ಸಚಿವ ಸ್ಥಾನಗಳಿಗೆ ಆಗ್ರಹಿಸಿತ್ತು. ಸಂಯುಕ್ತ ಜನತಾದಳ ಕೂಡ ನಾಲ್ಕು ಸಂಪುಟ ದರ್ಜೆಯ ಸಚಿವ ಸ್ಥಾನ ಹಾಗೂ ಮಹತ್ವದ ಖಾತೆಗಳಿಗೆ ಪಟ್ಟು ಹಿಡಿದಿತ್ತು ಆದರೆ ಅದು ಈಡೇರಲಿಲ್ಲ. ಆಗ ಪಟ್ಟು ಸಡಿಲಿಸಿದ ಚಂದ್ರಬಾಬು ನಾಯ್ಡು ಮತ್ತು ನಿತೀಶ್ ಕುಮಾರ್ ಈಗ ರಾಜ್ಯದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನಕ್ಕೆ ಒತ್ತಾಯಿಸುತ್ತಿದ್ದಾರೆ. ಇವರ ಬೇಡಿಕೆಗಳನ್ನು ಕಡೆಗಣಿಸುವ ಸ್ಥಿತಿಯಲ್ಲಿ ಪ್ರಧಾನಿ ಮೋದಿಯವರಿಲ್ಲ. ಹಿಂದಿನಂತೆ ಆಂಧ್ರಪ್ರದೇಶವನ್ನು ಐಟಿ-ಬಿಟಿ ಕೇಂದ್ರವನ್ನಾಗಿ ಮಾಡುವ ಬಗ್ಗೆ ವಿಶೇಷ ಆಸಕ್ತಿ ವಹಿಸಿರುವ ಆ ರಾಜ್ಯದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹಿಂದೆ ಅವಿಭಜಿತ ಆಂಧ್ರಪ್ರದೇಶದ ರಾಜಧಾನಿಯಾಗಿದ್ದ ಹೈದರಾಬಾದನ್ನು ಅಭಿವೃದ್ಧಿ ಪಡಿಸಿದಂತೆ ಆಂಧ್ರಪ್ರದೇಶದ ನೂತನ ರಾಜಧಾನಿ ಅಮರಾವತಿಯನ್ನು ಇತರ ರಾಜ್ಯಗಳ ರಾಜಧಾನಿಗಳಿಗಿಂತ ಹೆಚ್ಚು ಯೋಜನಾಬದ್ಧವಾಗಿ ರೂಪಿಸಲು ವಿಶೇಷ ಆಸಕ್ತಿ ವಹಿಸಿದ್ದಾರೆ. ಆಂಧ್ರಪ್ರದೇಶದ ಹಿಂದಿನ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರು ಅಮರಾವತಿ ರಾಜಧಾನಿಯಾಗಲು ಅಡ್ಡಿಯಾಗಿದ್ದರು.ಅದರ ಬದಲಿಗೆ ಮೂರು ರಾಜಧಾನಿಗಳನ್ನು ಮಾಡಲು ಹೊರಟಿದ್ದರು. ಆದರೆ ಈಗ ಮತ್ತೆ ಚಂದ್ರಬಾಬು ನಾಯ್ಡು ಅವರು ಅಧಿಕಾರಕ್ಕೆ ಬಂದಿರುವುದರಿಂದ ಅಮರಾವತಿ ಅಭಿವೃದ್ಧಿಗೆ ರೆಕ್ಕೆ ಪುಕ್ಕಗಳು ಮೂಡಿವೆ. ಅದಕ್ಕಾಗಿ ಅವರಿಗೆ ಕೇಂದ್ರದಿಂದ ವಿಶೇಷ ಅನುದಾನ ಬೇಕಾಗಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಕೂಡ ಬಿಹಾರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಿ ಹೆಚ್ಚಿನ ಸಹಾಯವನ್ನು ನೀಡುವಂತೆ ಪ್ರಧಾನಿ ನರೇಂದ್ರ ಮೋದಿಯವರನ್ನು ಒತ್ತಾಯಿಸುತ್ತಿದ್ದಾರೆ. ಅಪಾರ ಖನಿಜ ಸಂಪತ್ತನ್ನು ಹೊಂದಿರುವ ಜಾರ್ಖಂಡ್ ಪ್ರದೇಶವನ್ನು ಪ್ರತ್ಯೇಕ ರಾಜ್ಯ ಮಾಡಿದ ನಂತರ ಬಿಹಾರಕ್ಕೆ ಸಂಪನ್ಮೂಲಗಳ ತೀವ್ರ ಕೊರತೆ ಉಂಟಾಗಿದೆ. ಅದಕ್ಕಾಗಿ ಈ ಕೊರತೆಯನ್ನು ನೀಗಿಸಲು ನಿತೀಶ್ ಕುಮಾರ್ ವಿಹಾರಕ್ಕೆ ವಿಶೇಷ ಸ್ಥಾನಮಾನ ನೀಡಿ ವಿಶೇಷ ಅನುದಾನ ಬಿಡುಗಡೆ ಮಾಡಲು ಒತ್ತಾಯಿಸುತ್ತಿದ್ದಾರೆ. ಬಿಹಾರದಲ್ಲಿ ಒಂಭತ್ತು ವಿಮಾನ ನಿಲ್ದಾಣಗಳು ಎರಡು ವಿದ್ಯುತ್ ಸ್ಥಾವರ ಘಟಕಗಳು, ನದಿ ನೀರಿನ ಬಳಕೆಯ ಎರಡು ಯೋಜನೆಗಳು ಹಾಗೂ ಏಳು ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲು ನಿತೀಶ್ ಕುಮಾರ್ ಪಟ್ಟು ಹಿಡಿದಿದ್ದಾರೆ. ಬಿಹಾರ ಮತ್ತು ಅಂಧ್ರಪ್ರದೇಶ ಈ ಎರಡೂ ರಾಜ್ಯಗಳು ಕೇಂದ್ರ ಸರಕಾರದಿಂದ ತಲಾ ಐವತ್ತು ಸಾವಿರ ಕೋಟಿ ರೂಪಾಯಿ ನೆರವನ್ನು ಕೇಳುತ್ತಿವೆ. ಆದರೆ ಎರಡೂ ರಾಜ್ಯಗಳ ಈ ಬೇಡಿಕೆಯನ್ನು ಈಡೇರಿಸುವುದು ಸುಲಭದ ಸಂಗತಿಯಲ್ಲ.ಅಂಧ್ರಪ್ರದೇಶ ವಿಭಜನೆಯಾದಾಗ ಅಂಧ್ರಪ್ರದೇಶಕ್ಕೆ ಉಂಟಾದ ತೆರಿಗೆ ಸಂಗ್ರಹದ ಕೊರತೆಯನ್ನು ಹಿಂದಿನ ಕಾಂಗ್ರೆಸ್ ಸರಕಾರ ವಿಶೇಷ ಅನುದಾನದ ಮೂಲಕ ನಿವಾರಿಸಿತ್ತು. ಆದರೂ ಈಗ ಮತ್ತೆ ವಿಶೇಷ ಅನುದಾನ ಕೋರುತ್ತಿದೆ. ಈ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇರಳ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇಂದ್ರ ಸರಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ 2 ರಾಜ್ಯಗಳ ಸಚಿವರು ಮತ್ತು ಶಾಸಕರು ದಿಲ್ಲಿಯಲ್ಲಿ ಪ್ರತಿಭಟನೆಯನ್ನೂ ಮಾಡಿದರು. ತಮಿಳುನಾಡು ಕೂಡ ತನಗೆ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಹೀಗಾಗಿ ಆಂಧ್ರಪ್ರದೇಶ ಮತ್ತು ಬಿಹಾರ ರಾಜ್ಯದ ಬೇಡಿಕೆಗಳನ್ನು ಈಡೇರಿಸುವುದಾದರೆ ಈ ರಾಜ್ಯಗಳ ಬೇಡಿಕೆಗೂ ಸ್ಪಂದಿಸಬೇಕಾಗುತ್ತದೆ. ಬಿಜೆಪಿಯೇತರ ರಾಜ್ಯಗಳ ಬಗ್ಗೆ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಪಕ್ಷಪಾತ ಧೋರಣೆ ತಾಳಿದೆ. ಭೀಕರ ಬರಗಾಲದಿಂದ ತತ್ತರಿಸಿದ ಕರ್ನಾಟಕಕ್ಕೆ ಗ್ರಾಮೀಣ ಭಾಗದ ಜನರಿಗೆ ಸಹಾಯವಾಗಲು ರಾಜ್ಯ ಸರಕಾರ 12,557 ಕೋಟಿ ರೂಪಾಯಿ ನೆರವು ಕೇಳಿದರೆ ಕೇವಲ 232 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದೆ.

# ಮಹಾಭಾರತ

## ಸ್ತ್ರೀಪರ್ವ



• ಹಿಂದಿನ ಸಂಚಿಕೆಯಿಂದ


ಧೃತರಾಷ್ಟ್ರ ಮತ್ತಿತರರೊಡನೆ ಯುಧಿಷ್ಠಿರನು, ಗಾಂಧಾರಿ ಕುಂತಿ ದ್ರೌಪದಿಯರೊಡಗೂಡಿ,ಸತ್ತವರಿಗಾಗಿ ತರ್ಪಣವನ್ನು ಬಿಡಲು ಗಂಗಾನದೀತೀರದ ಕಡೆಗೆ ಹೊರಟನು. ಎಲ್ಲಾರೂ ವಸ್ತ್ರಾಭರಣಗಳನ್ನು ತೆಗೆದಿಟ್ಟು ಮಡಿಯನ್ನುಟ್ಟು ಬರಿಗಾಲಿನಲ್ಲಿ ನಡೆದರು. ರಾಜಮನೆತನದ ದುಃಖೀಜನರ ಗುಂಪು ಹೀಗೆ ಸಾಮಾನ್ಯರಂತೆ ಹೊರಟಿತು.

ಕುಂತಿಯ ಸ್ಥಿತಿ ದಯನೀಯವಾಗಿತ್ತು. ತನ್ನ ಮಗನೇ ಆದ ಅರ್ಜುನನು ಮೂರು ದಿನಗಳ ಹಿಂದೆ ರಾಧೇಯನನ್ನು ಕೊಂದಿದ್ದನು. ಪಾಂಡವ ಪಾಳೆಯದಲ್ಲಿ ಹಬ್ಬವಾಚರಿಸಿದ್ದರು. ಅದನ್ನು ಸಂಜಯ ಧೃತರಾಷ್ಟ್ರನಿಗೆ ಹೇಳುತ್ತಿದ್ದಾಗ, ಅಲ್ಲಿದ್ದ ತಾನೂ ಕೇಳಿ ತಿಳಿದಿದ್ದಳು. ಅವಳ ಹೃದಯವು ದುಃಖದಿಂದ ವಿದೀರ್ಣವಾಯಿತು. ಯಾರೊಡನೆಯಾದರೂ ಹೇಳಿಕೊಳ್ಳುವಂತೆಯೂ ಇಲ್ಲ. ಮೌನವಾಗಿ ಸಹಿಸಿದ್ದಳು. ಇಂದು ರಣರಂಗದಲ್ಲಿ ತನ್ನ ಚೊಚ್ಚಲು ಮಗನ ಶರೀರವನ್ನು ನೋಡಿದಳು. ತಲೆತಿರುಗಿ ಬೀಳುತ್ತಿದ್ದುದನ್ನು ಕಷ್ಟಪಟ್ಟು ನಿಯಂತ್ರಿಸಿಕೊಡಳು. ಕೃಷ್ಣನು ಎಲ್ಲವನ್ನು ನೋಡುತ್ತಿದನು. ರಾಧೇಯನ ಹೆಂಡತಿ ಅವನ ಶರೀರದ ಮೇಲೆ ಬಿದ್ದು ಅಳುತ್ತಿದ್ದುದನ್ನು ನೋಡಿಯೂ ಸುಮ್ಮನಿರಬೇಕಾಯಿತು. ಈಗ, ಎಲ್ಲಾರೊಡನೆ ತಾನೂ ಗತಿಸಿದವರಿಗೆ ತರ್ಪಣ ಕೊಡುವುದಕ್ಕಾಗಿ ಹೋಗುತ್ತಿರುವಳು. ವರ್ಷಗಳ ಹಿಂದೆ ಇದೇ ಗಂಗೆಯಲ್ಲಿಯೇ ಮಗುವನ್ನು ಮರದ ತೊಟ್ಟಿಲಿನಲ್ಲಿಟ್ಟು ತೇಲಿಬಿಟ್ಟವಳಲ್ಲವೆ ತಾನು ಗಂಗೆ ಆ ದಿನ ಹೇಗೆ ಹರಿಯುತ್ತಿದ್ದಳೋ ಇಂದೂ ಹಾಗೆಯೇ ಶಾಂತವಾಗಿ ಹರಿಯುತ್ತಿರುವಳು. ನೆನ್ನೆ ಮೊನ್ನೆಯಂತೆ ಭಾಸವಾಗುತ್ತಿದೆಯಲ್ಲವೆ ಕುಂತಿಯು ಎಲ್ಲರೂ ತರ್ಪಣ ಬಿಡುತ್ತಿರುವುದನ್ನು ನೋಡಿದಳು. ರಾಧೇಯನಿಗೆ ತರ್ಪಣ ಬಿಡುವವರು ಯಾರೂ ಇಲ್ಲ; ಮಕ್ಕಳೆಲ್ಲ ಸತ್ತಿರುವರು. ತಾನು ಅವನನ್ನು ಗಂಗೆಯಲ್ಲಿ ತೇಲಿಬಿಟ್ಟ ದಿನದಂತೆಯೇ ಇಂದೂ ಅವನು ತಬ್ಬಲಿ, ಅನಾಥ. ಕುಂತಿಗೆ ದುಃಖವನ್ನು ತಾಳಿಕೊಳ್ಳಲಾರದೆ ಹೃದಯ ಒಡೆಯುವಂತಾಯಿತು. ಅಯ್ಯೋ, ತನ್ನ ಮಗುವಿಗೆ ಎಂಥ ಅನ್ಯಾಯ ಮಾಡಿಬಿಟ್ಟೆ! ಕುಂತಿ ಸೆರಗು ಕಟ್ಟಿ, ಮೈಯನ್ನು ಸೆಟೆಸಿ, ತುಟಿ ಕಚ್ಚಿ ಹಿಡಿದಳು. ತನ್ನ ಮಗುವಿಗೆ ತಾನು ಇಷ್ಟಾದರೂ ಮಾಡಬೇಕು ಎಂದುಕೊಂಡವಳೇ ಗಟ್ಟಿಮನಸ್ಸಿನಿಂದ ಯುಧಿಷ್ಠಿರನಿದ್ದಲ್ಲಿಗೆ ಭದ್ರವಾಗಿ ಹೆಜ್ಜೆಯಿಡುತ್ತ ನಡೆದಳು.

ಯುಧಿಷ್ಠಿರನು ಆಗತಾನೆ ದ್ರೌಪದಿಯ ಮಕ್ಕಳಿಗೂ ಮತ್ತಿತರರಿಗೂ ತರ್ಪಣ ಕೊಟ್ಟು ಮುಗಿಸಿದ್ದನು. ಅರ್ಜುನ ಅಳುತ್ತಳುತ್ತ ಅಭಿಮನ್ಯುವಿಗೆ ತರ್ಪಣ ಕೊಟ್ಟಿದ್ದನು. ಈಗ ಕುಂತಿ ಯುಧಿಷ್ಠಿರನ ಬೆಣ್ಣ ಮೇಲೆ ಕೈಯಿಟ್ಟಳು. ಅವನು ತಿರುಗಿ ನೋಡಿದರೆ ತನ್ನ ತಾಯಿ! ''ಏನಮ್ಮ, ಏನು ಬೇಕು ಏಕೆ ಕರೆದೆ ಎಂದು ಕೇಳಿದನು. ಕುಂತಿ ವ್ಯಕ್ತವಾಗಿ ಅಳು ಹೊರಬರದಿರುವಂತೆ ಕಷ್ಟಪಟ್ಟು ಉಗುಳು ನುಂಗಿದಳು. ''ನೀನು ಇನ್ನೂ ಒಬ್ಬನಿಗೆ ತರ್ಪಣ ಕೊಡಬೇಕಾಗಿದೆಯಪ್ಪ, ಮಗನೇ! ಎಂದಳು. ಯುಧಿಷ್ಠಿರನು ಅಚ್ಚರಿಯಿಂದ ಅಮ್ಮನನ್ನು ನೋಡಿದನು.

ಮುಂದುವರಿಯುವುದು...

---



**ಸಾಮಾಜಿಕ ಕಳಕಳಿ**

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

• ಉದಯವಾಹಿನಿ, ವಿಶೇಷ

# ಹಿಂದೂ,ಮುಸ್ಲಿಮರ ಭಾವೈಕ್ಯತೆಯ ಹಬ್ಬವೇ 'ಮೊಹರಂ



**ಧಾರ್ಮಿಕವಾಗಿ ರೀತಿ ನೀತಿಗಳಲ್ಲಿ ಅಚ್ಚುಕಟ್ಟಾಗಿ ಉಪವಾಸ**

ಬಲಿಯಾಗಿ ನೆನೆಯುತಲಿ ನಿಂತಿಹರು ಮರೆಯದಲೆ
ಕಲಿಯುತಲಿ ನಿಯಮವನು ಮೀರದಲೆಯೆ
ಸಲಿಗೆಯನು ನೀಡದಲೆ ಸರಿಯಾಗಿ ನಡೆಯುತಿರೆ
ಬೆಲೆಯಿಹುದು ಶಾಂತಿಯಲಿ ಲಕ್ಷ್ಮಿ ದೇವಿ..........

ಈ ಮೇಲಿನ ಮುಕ್ತಕದಂತೆ ಮುಸ್ಲಿಂ ಬಾಂಧವರು ಮೊಹರಂ ಹಬ್ಬವನ್ನು ದುಃಖದ ಹಬ್ಬವಾಗಿ ಹಸೇನ್ ಹುಸೇನ್ ಎಂಬ ಸಹೋದರರ ಮರಣವನ್ನು ನೆನೆಯುವಂತಹ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವಂತಹ ಹಬ್ಬವಾಗಿದ್ದು. ಅವರು ಬಿಟ್ಟು ಹೋದಂತಹ ನೀತಿ ನಿಯಮಗಳನ್ನು ಮೀರದಲೆ ಕಲಿಯುತಲಿ ಜೀವನವನ್ನು ಸಾಗಿಸುತ್ತಿದ್ದಾರೆ . ಯಾವುದೇ ರೀತಿಯ ಸಲಿಗೆಯನ್ನು ಈ ಧರ್ಮದ ವಿಚಾರದಲ್ಲಿ ತೋರದೆಯೇ ಹಬ್ಬವನ್ನು ನಿಯಮ ಬದ್ಧವಾಗಿ ಆಚರಿಸುತ್ತಾರೆ. ಈ ಹಬ್ಬದಲ್ಲಿ ಶಾಂತಿಗೆ ಪ್ರಾಮುಖ್ಯತೆಯನ್ನು ನೀಡಿ ಬೆಲೆಯನ್ನು ನೀಡುತ್ತಾರೆ.

> **ನಮ್ಮ ಮುಸ್ಲಿಂಸರಲ್ಲಿ ಎರಡು ಪಂಗಡಗಳಿದೆ. ಪಂಗಡಗಳ ಹೆಸರು ಶಿಯಾ ಮತ್ತು ಸುನ್ನಿ ಎಂದು. ಎಲ್ಲರಿಗೂ ತಿಳಿದಿರುವ ವಿಷಯವೇನೆಂದರೆ ಮೊಹಮ್ಮದ್ ರವರು ಈ ಧರ್ಮದ ಸ್ಥಾಪಕ ಎಂಬುದು ನಾನು ಅದನ್ನು ಚಿಕ್ಕವಯಸಿನಲ್ಲೇ ಓದಿರುವ ಜ್ಞಾಪಕ ಹೆಚ್ಚಿದೆ. ಎರಡು ಪಂಗಡಗಳು ಆಚರಿಸುವ ಪ್ರಮುಖವಾದ ಹಬ್ಬಗಳಲ್ಲಿ ಈ ಹಬ್ಬವು ಒಂದು ಎಂದರು. ಮುಸ್ಲಿಮರ ಹಬ್ಬಗಳನ್ನು ಆಚರಿಸುವುದರಲ್ಲಿ ಹಬ್ಬವನ್ನು ಹಲವು ದೇಶಗಳಲ್ಲಿ ಆಚರಿಸಲಾಗುತ್ತದೆ.**

ಹೇಳಬೇಕೆಂದರೆ ಧರ್ಮ ಎಂಬುದು ಹೆಸರಿಗಷ್ಟೇ. ನಿಷ್ಕಲ್ಮಶವಾದ ಪ್ರೀತಿ ಸ್ನೇಹವಿದ್ದರೆ ಆ ಸಂಬಂಧದಲ್ಲಿ ಯಾವುದೇ ಬೇದ -ಭಾವವನ್ನು ಕಾಣಲು ಸಾಧ್ಯವಿಲ್ಲ. ನಾನು ಚಿಕ್ಕವಯಸ್ಸಿನಿಂದಲೂ ನನ್ನ ಸ್ನೇಹಿತೆಯಾದ ಸಾಹಿರಾ ಭಾನು ರವರನ್ನು ಬಹಳಷ್ಟು ಪ್ರೀತಿ ವಿಶ್ವಾಸದಿಂದ ಸ್ನೇಹವನ್ನು ಉಳಿಸಿಕೊಂಡು ಬಂದಿದ್ದೇವೆ. ನಮ್ಮ ಹಬ್ಬದ ಆಚರಣೆಗಳಲ್ಲಿ ಅವರು ಬರುತ್ತಾರೆ. ಬರಲಾಗಲಿಲ್ಲವೆಂದರೆ ಫೋನ್ ಕರೆ ಯ ಮುಖಾಂತರವಾದರೂ ಶುಭ ಕೋರುತ್ತಾರೆ. ನಾನು ಅದೇ ಪ್ರಕ್ರಿಯೆಯನ್ನು ರೂಢಿಸಿಕೊಂಡಿದ್ದೇನೆ. ಆದರೆ ಅವರ ಹಬ್ಬದ ವಿಶೇಷವೆಂದರೆ ಸಿಹಿಯನ್ನು ಮನೆಗೆ ತಂದುಕೊಟ್ಟಿಬಿಡುತ್ತಾರೆ. ನಮ್ಮ ಮನೆಯ ಹಬ್ಬಗಳಲ್ಲಿ ಅವರೇ ಮನೆಗೆ ಬಂದು ಊಟ ಮಾಡುವುದು ಪ್ರತೀತಿ. ನಾನು ಅವರನ್ನು ಬುದ್ಧಿ ಬಂದಾಗಿನಿಂದಲೂ ಮೊಹರಂ ನ ವೇಳೆ ಸ್ವಲ್ಪ ಹಣವನ್ನು ಕೊಟ್ಟುಬಿಡುತ್ತೇನೆ. ನಿಮ್ಮ ಮೊಹರಂ ಹಬ್ಬದ ಆಚರಣೆ ಏನು? ಏಕೆ? ಹೇಗೆ ಆಚರಿಸುವಿರಿ?ಎಂದು ಪ್ರಶ್ನೆಸುತ್ತಿದ್ದೆ. ನಿಮ್ಮ ದೇವರಿಗೆ ನನ್ನ ಕೈಯಿಂದ ಏನಾದರೂ ಅರ್ಪಿಸಬೇಕು ಎಂಬುದಾಗಿ ಕೇಳುತ್ತಲ್ಲೇ ಇರುತ್ತಿದ್ದೆ . ಆಗ ಸ್ನೇಹಿತೆ ನಿನ್ನ ಕೈ ಯಿಂದ ಸ್ವಲ್ಪ ಹಣ ಕೊಡು ನಾನು ನಿನ್ನ ಹೆಸರಿನಲ್ಲಿ ಅರ್ಪಿಸುವೆ ಎಂದು ಹೇಳಿದರು. ಉತ್ತಮವಾದ ಸಲಹೆ ಎಂದು ಪ್ರತಿ ವರ್ಷ ನಾನು ಸ್ವಲ್ಪ ಕೈಯಲಿ ಆದಷ್ಟು ನೀಡುವುದು ರೂಡಿಯಾಗಿದೆ. ಆ ಹಣದಿಂದ ನಿಮ್ಮ ದೇವರಿಗೆ ಏನಾದರೂ ಅರ್ಪಿಸಿಬಿಡಿ ಎಂದು ಹೇಳಿಬಿಡುತ್ತೇನೆ. ಮೊಹರಂನ ಹಬ್ಬ ಬಂತೆಂದರೆ.ಅವರ ಮೊದಲ ಕೆಲಸ ನನಗೆ ಜ್ಞಾಪಿಸುವುದು. ನಾನು ಹೋದರೆ ಹಣವನ್ನು ಕೊಟ್ಟುಬಿಡುತ್ತೇನೆ. ಇಲ್ಲ ಎಂದರೆ ಅಣ್ಣನಿಗೆ ಫೋನ್ ಪೇ ಮಾಡ್ಬಿಡುತ್ತೇನೆ. ಮರೆಯದಲೆ ವರ್ಷ ವರ್ಷ ಮಾಡುವ ಕೆಲಸವಿದು. ನಾನು ಮೊದಮೊದಲು ಮೊಹರಂ ಹಬ್ಬ ಹೇಗೆ ಆಚರಿಸುವುದು, ಇತಿಹಾಸವೇನು ಹೀಗೆಲ್ಲಾ ಪ್ರಶ್ನಿಸುತ್ತಿದೆ. ನನಗೆ ಕೆಲವು ದೇವರ ಬಗ್ಗೆ ಮಾಹಿತಿ ವಇತ್ತು. ನಾನು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದ್ದು ಒಂದೇ. ಈ ದಿನವನ್ನು ದುಃಖದ ದಿನವೆಂದು ಆಚರಿಸುತ್ತೇವೆ. ಕೆಲವರು ಈ ಹಬ್ಬದ ಹಿಂದಿನ ಕೆಲವು ದಿನಗಳು ಉಪವಾಸವನ್ನು ಇಡುತ್ತಾರೆ. ಈ ದಿನದಂದು ಪ್ರವಾದಿ ಮೊಹಮ್ಮದರ ಮೊಮ್ಮಗ ಹುಸೇನ್ ಇಬ್ನ ಆಲಿ ಅವರ ಮರಣವನ್ನು ಸ್ಮರಿಸುವ ದಿನವಾಗಿದೆ ಎಂದರು. ಈ ದಿನವನ್ನು ನಾವು ಉಮ್ಮಾಗೆ ನೆನಪಿನ ಸಮಯವಾಗಿ ಹೇಳುತ್ತೇವೆ. ಈ ದಿನದಂದು ಅಶುರ ದಿನ ಕರ್ಬಲಾ ಯುದ್ಧ ನಡೆದದ್ದು. ಮತ್ತು ಪ್ರವಾದಿಯ ಪ್ರೀತಿಯ ಮೊಮ್ಮಗ ಇಮಾಮ್ ಹುಸೇನ್ ರನ್ನು ಪೂರವಾಗಿ ಹತ್ಯೆ ಮಾಡಲಾಯಿತು ಎಂದು ಹೇಳಿದರು. ನನಗಿಂತಲೂ ನನ್ನ ಚಿಕ್ಕಪ್ಪನಿಗೆ ಹೆಚ್ಚಿನ ಮಾಹಿತಿ ಇದೆ ಅವರನ್ನು ಕೇಳಿ ಹೇಳುತ್ತೇನೆ ಎಂದರು. ಮುಸ್ಲಿಮರ ಪಂಗಡದವರು ಹಲವಾರು ರೀತಿಯ ಹಬ್ಬಗಳನ್ನು ಸಂಭ್ರಮದಲ್ಲಿ ಆಚರಿಸುತ್ತಾರೆ. ಆದರೆ ಈ ಹಬ್ಬವನ್ನು ದುಃಖದಲ್ಲಿ ಆಚರಿಸುತ್ತಾರೆ. ಈ ದುಃಖದಿಂದಲೇ ಈ ಹಬ್ಬವನ್ನು ಧರ್ಮನಿಷ್ಟವಾಗಿ ಮುಸ್ಲಿಮರು ತಮ್ಮ ಧಾರ್ಮಿಕ ತತ್ವಗಳನ್ನು ಅನುಸರಿಸುತ್ತಾ ಹಬ್ಬಗಳನ್ನು ಆಚರಿಸುತ್ತಾರೆ. ಗೌರವ ನೀಡಿ ಈ ಹಬ್ಬವನ್ನು ಆಚರಿಸುವುದು ವಿಶೇಷವಾಗಿದೆ. ಈ ಹಬ್ಬದ ವಿಶೇಷವೆಂದರೆ ಹಸನ್ ಮತ್ತು ಹುಸೇನ್ ಎಂಬ ಇಬ್ಬರು ಮಕ್ಕಳಿದ್ದರೂ. ಮಹಾನ್ ಮೊಹಮ್ಮದ್ ಆದರ್ಶ ಮಹಾನ್ ವ್ಯಕ್ತಿ ಮತ್ತು ದೈವಿಕ ಶಕ್ತಿಯ ವ್ಯಕ್ತಿಯಾಗಿ ಬಹಳ ಜನಪ್ರಿಯವಾಗಿರುವುದು ಪ್ರತಿಯೊಬ್ಬ ಮುಸ್ಲಿಂ ಬಾಂಧವರಿಗೂ ತಿಳಿದಿದೆ. ಮೊಹಮದರ ಮರಣದ ನಂತರ ಹಸನ್ ಮತ್ತು ಹುಸ್ಸನ್ ಉತ್ತರಾಧಿಕಾರಿಗಳಾಗಿದ್ರಂತೆ ಅವರ ಮುಸ್ಲಿಮರ ಆದರ್ಶಗಳನ್ನು ಮುಸ್ಲಿಮರ ತತ್ವಗಳನ್ನು, ಸಿದ್ಧಾಂತಗಳನ್ನು ಪುನರುಜ್ಜೀವನಗೊಳ್ಳಿಸುವ ಪ್ರಯತ್ನವನ್ನು ಇವರು ಮಾಡುತ್ತಿದ್ದರಂತೆ. ಆದರೆ ಅಲ್ಲಿನ ಕಲೀಕರು ಅಸಹಿಷ್ಣತೆ ಮತ್ತು ಹಸನ್ ಮತ್ತು ಹುಸೇನ್ ನಾಯಕತ್ವವನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲವೆಂದು ಅದರಿಂದ ಹಿಂಜರಿದರಂತೆ ಈ ಹಿಂಜರಿಕೆಯೂ ಬಹಳಷ್ಟು ವಿವಾದಕ್ಕೆ ಕಾರಣವಾಗಿತ್ತು. ಈ ಖಲೀಫರು ವಿವಿಧ ವಿಧಾನಗಳನ್ನು ಅಳವಡಿಸಿಕೊಂಡು ಅವರು ಕೊನೆಗೆ ಹಸನ್ ರವರನ್ನು ಸಂಚು ಮಾಡಿ ಹತ್ಯೆ ಮಾಡಲಾಯಿತಂತೆ. ಆದ್ರೆ ಹುಸೇನರವರನ್ನು ಹತ್ತಿಕ್ಕುವುದು ಅವರನ್ನು ಹುಸೇನರನ್ನು ಒಳಸಂಚಿನಿಂದ ನಿಷ್ಕ್ರಿಯರನ್ನಾಗಿ ಮಾಡುವುದು ಅಸಾಧ್ಯವಾಗಿತ್ತಂತೆ ಏಕೆಂದರೆ ಅವರು ಬಹಳಷ್ಟು ಧೈರ್ಯಶಾಲಿ, ಬಹಳಷ್ಟು ಶಕ್ತಿಶಾಲಿಯಾಗಿ, ಬಲಯುತರಾದವರಂತೆ. ಏನು ಮಾಡಲಾಗಲಿಲ್ಲವಲ್ಲ ಎಂದುಕೊಂಡು ಕೊನೆಗೆ ಒಳಸಂಚಿನಿಂದ ಸೆರೆಹಿಡಿದು ಚಿತ್ರ ಹಿಂಸೆಗಳನ್ನು ನೀಡಿದರಂತೆ. ನಂತರ ಚಿತ್ರಹಿಂಸೆ ನೀಡಿ ನಿಂದನೆಗಳಿಗೆ ಒಳಪಡಿಸಿ. ಅವರನ್ನು ಹೀನಾಯವಾಗಿ ಹತ್ಯೆ ಮಾಡಲಾಯಿತಂತೆ. ಇಸ್ಲಾಂ ಧರ್ಮವನ್ನು ಬೆಂಬಲಿಸಿದಂತಹ ಬಲಯುತವಾದಂತ ವೀರದಿ ವೀರರಾದಂತಹ ಈ ಇಬ್ಬರ ಅಕಾಲಿಕ ಮರಣದ ನೆನಪಿಗಾಗಿ ಆಚರಿಸುವಂತಹ ವಿಶೇಷವಾದಂತಹ ದುಃಖದ ಹಬ್ಬ. ಮುಸ್ಲಿಂ ಬಾಂಧವರು ಈ ಹಬ್ಬವನ್ನು ಬಹಳಷ್ಟು ದುಃಖಿತವಾಗಿ ನೆನಪನ್ನು ಮಾಡಿಕೊಂಡು ಹಬ್ಬವನ್ನು ಆಚರಿಸುತ್ತಾರೆ ಈ ಹಬ್ಬವನ್ನು ಮುಸ್ಲಿಮರು ಉಪವಾಸವನ್ನು ಮಾಡುವುದರ ಮುಖಾಂತರ, ಮತ್ತು ಅವರು ಶಾಂತಿಯುತವಾದ ಜೀವನವನ್ನು ನಡೆಸುವುದರ ಮುಖಾಂತರ, ಅವರು ಒಂದು ಸೀಮಿತ ಸ್ಥಳವನ್ನು ಗುರುತಿಸಿ ಸೇರುವಂತಹ ಹಬ್ಬವಾಗಿದೆ. ಹಸೇನ್ ಮತ್ತು ಹುಸೇನ ರನ್ನು ನೆನೆಯುತ್ತಾ ಈ ಹಬ್ಬದಲ್ಲಿ ದುಃಖಿತರಾಗಿ ಎಲ್ಲರೂ ದೇವರನ್ನು ಪ್ರಾರ್ಥಿಸುತ್ತಾರೆ. ನಂತರದಲ್ಲಿ ಈ ಸಮಯದಲ್ಲಿ ಹುಸೇನ್ ಸಮಾಧಿಯ ಮೇಲೆ ತಾಜಿಯನ್ನು ತಯಾರಿಸುತ್ತಾರೆ. ಈ ತಾಜಿಯಾವನ್ನು ತಯಾರಿಸಲು ಬಿದ್ರು, ಮತ್ತು ಬಣ್ಣದ ಕಾಗದವನ್ನು ಬಳಸಿಕೊಳ್ಳುತ್ತಾ. ಇದು ಹತ್ತು ಹಲವಾರು ದಿನಗಳು ಸಮಾಧಿಗಳ ಮೇಲೆ ಇರುತ್ತದೆ. ನಂತರದ ಹತ್ತನೆಯ ಕೊನೆಯ ದಿನದಂದು ಈ ಸಮಾಧಿ ಎಲ್ಲೆಡೆಯು ಸಂಭ್ರಮದಿಂದ ರಾತ್ರಿಯ ವೇಳೆ ಮೆರವಣಿಗೆ ಹೋಗುತ್ತಾರೆ. ಎಲ್ಲರಿಗೂ ಹುಸೇನ್ ರವರ ಹೆಸರಿನಲ್ಲಿ ಪುರಿ ಬೆಲ್ಲ, ಪಾನಿಯಗಳು, ಇನ್ನು ಅನೇಕ ಆಹಾರ ಪದಾರ್ಥಗಳನ್ನು ಹೆಚ್ಚುತ್ತಾರೆ. ಒಟ್ಟಾರೆ ಈ ದುಃಖದ ಹಬ್ಬವನ್ನು 1 ಧಾರ್ಮಿಕವಾಗಿ ರೀತಿ ನೀತಿಗಳಲ್ಲಿ ಅಚ್ಚುಕಟ್ಟಾಗಿ ಉಪವಾಸವಿದ್ದು, ಹಬ್ಬದ ಆಚರಣೆ ಎಲ್ಲ ಮಾಡುವುದು ಪ್ರತಿತಿಯಲ್ಲಿದೆ ಹೀಗೆ ಹೇಳುತ್ತಾ ಹೋದರೆ ಇನ್ನೂ ಹಲವು ವಿಷಯಗಳನ್ನು ಹೇಳಬೇಕಾಗುತ್ತದೆ ಎಂದಳು. ಏನೇ ಆದರೂ ಅವರವರ ಧರ್ಮ ಅವರವರಿಗೆ ಹೆಚ್ಚಲ್ಲವೇ. ಈಗಿನ ಪ್ರಸ್ತುತ ದಿನಮಾನಗಳಲ್ಲಿ ಎಲ್ಲಾ ಧರ್ಮಿಯರು ಒಂದೇ ಎಂಬ ಭಾವದಲ್ಲಿ ದುಃಖದ ಆಚರಣೆ ಆಗಲಿ, ಸಂತೋಷದ ಆಚರಣೆ ಆಗಲಿ , ಧರ್ಮದ ಬೇದಭಾವವಿಲ್ಲದೆ ಒಂದುಗೂಡಿ ಆಚರಣೆ ಮಾಡುವುದು ಕಾಣುತ್ತಿದ್ದೇವೆ. ಈ ದುಃಖದ ಆಚರಣೆಯಿಂದಾಗಿ ಹಸೇನ್ ಹುಸೇನರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂಬುದು ಎಲ್ಲರಿಗೂ ತಿಳಿದಂತಹ ವಿಷಯ. ಇಷ್ಟು ಹೇಳುತ್ತಾ ನನ್ನ ಈ ಮುಸ್ಲಿಂ ಬಾಂಧವರ ಹಸೇನ್ ಹುಸೇನ್ ರವರ ಹುತಾತ್ಮರಾದ ದಿನವನ್ನು ನೆನೆಯುತ್ತಾ ಈ ಲೇಖನಕ್ಕೆ ಸಹಕರಿಸಿದ ಸಾಹೇರಾಬಾನು, ಮತ್ತು ಅಕ್ಬರ್ ಅಣ್ಣನವರಿಗೆ ಧನ್ಯವಾದಗಳನ್ನು ಹೇಳುತ್ತಾ ವಿರಾಮವನ್ನು ಹೇಳುತ್ತಿದ್ದೇನೆ. ಜೈ ಹಿಂದ್ ಜೈ ಭಾರತ್ ಮಾತೆ

---

# ನೃತ್ಯ ಕಲಾವಿದೆ ನಯನಾ ಶಿವಣ್ಣ ರಂಗಪ್ರವೇಶ



**ವೈ.ಕೆ. ಸಂಧ್ಯಾಶರ್ಮ**
• ಉದಯವಾಹಿನಿ, ವಿಶೇಷ

ಖ್ಯಾತ ಶಾಂತಲಾ ಆರ್ಟ್ಸ್ ಅಕಾಡೆಮಿಯ ನಿರ್ದೇಶಕ, ಹಿರಿಯ ನಾಟ್ಯಗುರು ಕಲಾಯೋಗಿ ಪುಲಿಕೇಶಿ ಕಸ್ತೂರಿ ಅವರ ನುರಿತ ಗರಡಿಯಲ್ಲಿ ರೂಹುತಳೆದ ಕಲಾಶಿಲ್ಪ ಕು. ನಯನಾ ಶಿವಣ್ಣ ಪ್ರತಿಭಾನ್ವಿತ ನೃತ್ಯಕಲಾವಿದೆ. ಶ್ರೀ ಶಿವಣ್ಣ ಮತ್ತು ಪುಟ್ಟತಾಯಮ್ಮನವರ ಪುತ್ರಿಯಾದ ನಯನಾ ಸುಮಾರು 15 ವರ್ಷಗಳಿಂದ ಏಕಗುರು ನಿಷ್ಠೆಯಿಂದ ನೃತ್ಯಾಭ್ಯಾಸ ಮಾಡುತ್ತಾ ಅನೇಕ ವೇದಿಕೆಗಳಲ್ಲಿ ತನ್ನ ಕಲಾಪ್ರದರ್ಶನದಿಂದ ಗುರುತಿಸಿಕೊಂಡಿದ್ದಾರೆ. ವೃತ್ತಿಯಲ್ಲಿ ಇಂಜಿನಿಯರ್ ಆದರೂ ನೃತ್ಯ ಇವಳ ಮೊದಲ ಒಲವು. ಇದೀಗ ತನ್ನ ಕಲಾನೈಪುಣ್ಯವನ್ನು ಪ್ರದರ್ಶಿಸಲು ನಯನಾ , ಇದೇ ತಿಂಗಳ 21 ನೇ ತಾ. ಭಾನುವಾರ ಸಂಜೆ 5.30 ಗಂಟೆಗೆ, ವೈಯಾಲಿಕಾವಲ್ಲಿನಲ್ಲಿರುವ 'ಶ್ರೀ ಕೃಷ್ಣದೇವರಾಯ ರಂಗಮಂದಿರ'ದಲ್ಲಿ ವಿದ್ಯುಕ್ತವಾಗಿ 'ರಂಗಪ್ರವೇಶ' ಮಾಡಲಿದ್ದಾಳೆ. ಈ ಭರವಸೆಯ ಕಲಾವಿದೆಯ ಸುಂದರ ನರ್ತನ ವೀಕ್ಷಿಸಲು ಎಲ್ಲರಿಗೂ ಆದರದ ಸ್ವಾಗತ.

**ಪ್ರತಿಭಾ ಕಾರಂಜಿ, ಬಾಲ ವೇದಿಕಾ ಕಾರ್ಯಕ್ರಮ**

ಶ್ರೀಮತಿ ನಯನಾಗೆ ಬಾಲ್ಯದಿಂದಲೂ ನೃತ್ಯ ಮಾಡುವುದೆಂದರೆ ಬಲು ಪ್ರೀತಿ. ಅವಳು ತನ್ನ 7 ನೆಯ ವಯಸ್ಸಿಗೇ ಗುರು ಪುಲಿಕೇಶಿಯವರಲ್ಲಿ ಭರತನಾಟ್ಯಾಭ್ಯಾಸ ಆರಂಭಿಸಿದಳು. ಸತತವಾಗಿ 12 ವರ್ಷಗಳ ಕಾಲ ಏಕಾಗ್ರಚಿತ್ತದಿಂದ ಅಷ್ಟೇ ಪರಿಶ್ರಮದಿಂದ ಭರತನಾಟ್ಯಾಭ್ಯಾಸ ಮಾಡಿದಳು. ಶಾಲಾ-ಕಾಲೇಜುಗಳಲ್ಲಿ ಎಲ್ಲ ನೃತ್ಯ ಪ್ರದರ್ಶನಗಳಲ್ಲಿ ಭಾಗಿ, ಬಹುಮಾನಗಳನ್ನೂ ಪಡೆದ ಕಲಾನಿಪುಣೆ. ಜೊತೆಯಲ್ಲಿ ಕಥಕ್ ನೃತ್ಯವನ್ನೂ ಕಲಿಯುತ್ತಿರುವುದು ಇವಳ ವೈಶಿಷ್ಟ್ಯ ಈಗಾಗಲೇ ಅನೇಕ ಕಡೆ ತನ್ನ ಪ್ರತಿಭೆ ಯನ್ನು ಪ್ರದರ್ಶಿಸಿರುವ ನಯನಾ ನೀಡಿದ ಪ್ರಮುಖ ಕಾರ್ಯಕ್ರಮಗಳೆಂದರೆ, ವಿಶ್ವನೃತ್ಯ ದಿನಾಚರಣೆ, ದಶಾವತಾರ ಮತ್ತು ಶಾಂತಲಾ ನೃತ್ಯವೈಭವ ನೃತ್ಯರೂಪಕಗಳು , ಆರ್ಟ್ ಆಫ್ ಲಿವಿಂಗ್ ಸಾಂಸ್ಕೃತಿಕ ಕಾರ್ಯಕ್ರಮ, ಇಸ್ಕಾನ್ ನೃತ್ಯೋತ್ಸವ, ಕೆನರಾ ಬ್ಯಾಂಕ್ ಯುನಿಯನ್ ಕಲ್ಚುರಲ್ ಪ್ರದರ್ಶನಗಳು, ಐ.ಎಸ್. ಆರ್.ಓ., ನಿಮಾನ್ಸ್ ಮತ್ತು ಬಿ.ಇ.ಎಲ್. ಮುಂತಾದ ಸಂಸ್ಥೆಗಳು ಏರ್ಪಡಿಸಿದ ಅನೇಕ ಮಹೋತ್ಸವಗಳಲ್ಲಿ ಭಾಗವಹಿಸಿದ್ದಾಳೆ.

ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ ಆಯೋಜಿಸಿದ್ದ ಕಲಾ ಪ್ರತಿಭೋತ್ಸವ,ಪ್ರತಿಭಾ ಕಾರಂಜಿ, ಬಾಲ ವೇದಿಕಾ ಕಾರ್ಯಕ್ರಮ, ಕರ್ನಾಟಕ ರಾಜ್ಯ ಕೌನ್ಸಿಲ್ ಆಫ್ ಚೈಲ್ಡ್ ವೆಲ್ಫೇರ್, ರಾಜ ರಾಜೇಶ್ವರಿ ಸಂಸ್ಥೆಗಳ ನೃತ್ಯಸ್ಪರ್ಧೆಗಳಲ್ಲಿ ಪ್ರದರ್ಶನ ನೀಡಿ ವಿವಿಧ ಬಹುಮಾನಗಳನ್ನು ಗಳಿಸಿದ ಹೆಮ್ಮೆ ಇವಳದು. ಚಿಕ್ಕಂದಿನಿಂದ ವಿದ್ಯಾಭ್ಯಾಸದಲ್ಲಿ ಮುಂದಿದ್ದ ನಯನಾ ಆರ್.ಆರ್. ಐ.ಟಿ. ಕಾಲೇಜಿ ನಿಂದ ಇನ್ಫಾರ್ಮೇಶನ್ ಸೈನ್ಸ್ ಮತ್ತು ಟೆಕ್ನಾಲಜಿ ವಿಷಯದಲ್ಲಿ ಎಂಜಿನಿಯರಿಂಗ್ ಪದವಿ ಪಡೆದುದಲ್ಲದೆ ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಮ್ಯಾನೆಜ್ ಮೆಂಟ್ ಸ್ಟಡೀಸ್ ನಿಂದ ಎಂ.ಬಿ.ಎ. ಪದವಿ ಗಳಿಸಿದ ಅಗ್ಗಳಿಕೆ ಇವಳದು. ಗ್ಲೋಬಲ್ ಟೆಕ್ನೋಲಜಿ ಫರ್ಮ್‌ನಲ್ಲಿ ಎಂಟು ವರ್ಷಗಳ ಅನುಭವ ಮತ್ತು ಸೇವಾ ನಿಮಿತ್ತ, ಅಮೇರಿಕಾ, ಯುರೋಪ್ ಮತ್ತು ಸೌತ್ ಏಷಿಯಾ ಸ್ಥಳಗಳಿಗೆ ಪ್ರವಾಸ ಮಾಡುವ ಅವಕಾಶ ಪಡೆದರು. ನಯನಾ, ಕೋಜಿಕೋಡ್ ಐ ಐ ಎಂ.ಎಕ್ಸಿಕ್ಯುಟಿವ್ ಪ್ರೊಗ್ರಾಮ್ ನಲ್ಲಿ ತೊಡಗಿಕೊಂಡಿದ್ದು, ಪ್ರಸ್ತುತ ಜಿ ಐ ಐ ಎಫ್ ಟಿ ? ಐ ಟಿ ಸಂಸ್ಥೆಯಲ್ಲಿ ಬಿಸಿನೆಸ್ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಪತಿ ಶುಭಂ ಶುಕ್ಲಾ ಅವರು, ವಿ ಪಿ ರಿಸರ್ಚ್ ಮತ್ತು ಡೆವೆಲಪ್ಮೆಂಟ್ ಐ ಟಿ ಸಂಸ್ಥೆಯಲ್ಲಿದ್ದಾರೆ. ಗೃಹಾಲಂಕಾರ, ಬ್ಲಾಗ್ ಬರವಣಿಗೆ ನಯನಾ ಅವರ ಹವ್ಯಾಸಗಳು.



---

# ಪ್ರಕೃತಿಯ ಜೊತೆಗೆ ವಿಕೃತ ಆಟವಾಡದಿರಿ

• ಉದಯವಾಹಿನಿ, ವಿಶೇಷ



ಸೋನೇ ಮಳೆಯ ಆರಂಭ ಎಲ್ಲೆಲ್ಲೂ ಮಳೆಹನಿಗಳ ಸಿಂಚನ ಬೇಸಿಗೆಯ ಬೇಗೆಯಲ್ಲಿ ಬೆಂದ ಜನರಿಗೆ ಮುದ ನೀಡುವ ಮಳೆ ಹನಿಗಳು ತುಂಬಿ ಹರಿಯುವ ನದಿಗಳು. ಭುವಿಗೆ ಚಾಪೆ ಹಾಸಿದಂತೆ ಚಿಗುರಿರುವ ಹಸಿರುಗಳು. ಆಹಾ! ಈ ಪ್ರಕೃತಿಯ ನೋಟ ಸವಿಯಲು ಅದೆಷ್ಟು ಆನಂದ ವಾರಪೂರ್ತಿ ಕಾರ್ಯ ನಿರತರಾಗಿರುವ ನಾವು ವಾರಂತ್ಯದಲ್ಲಿ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಪ್ರಕೃತಿಯ ಮನೋಹರ ದೃಶ್ಯವನ್ನು ಸವಿಯಲು ಬಯಸುತ್ತೇವೆ. ಒಂದಿಷ್ಟು ಹೊತ್ತು ಪ್ರಕೃತಿಯೊಂದಿಗೆ ಕಳೆಯಲು ಇಚ್ಚಿಸುತ್ತೇವೆ. ಆದರೆ ಇತ್ತೀಚೆಗೆ ಪ್ರಕೃತಿಯ ಸೌಂದರ್ಯವನ್ನು ಸವಿಯುವ ಬದಲು ಪ್ರಕೃತಿಯೊಂದಿಗೆ ವಿಕೃತ ಆಟವಾಡುತ್ತಿದ್ದಾರೆ. ಇಂದಿನ ಜನತೆ ಪ್ರಕೃತಿಯ ಸೌಂದರ್ಯವನ್ನು ಕೇವಲ ಜಂಗಮವಾಣಿಯಲ್ಲಿ ಸೆರೆಹಿಡುವುದರಲ್ಲೇ ಮುಳುಗಿರುತ್ತಾರೆ. ಪ್ರಕೃತಿಯ ಆ ನೋಟವನ್ನು ಕಣ್ತುಂಬಿಸಿಕೊಳ್ಳುವ ಬದಲು ಜಂಗಮವಾಣಿಯಲ್ಲಿ ತುಂಬಿಸುತ್ತಿರುವುದು ವಿಪರ್ಯಾಸವೆ ಸರಿ. ಕಳೆದ ವರ್ಷ ನಾನು ಪ್ರವಾಸಿ ತಾಣಗಳಲ್ಲಿ ಒಂದಾದ ಮತ್ತು ಕರ್ನಾಟಕದ ಚಿರಾಪುಂಜಿ ಎಂದು ಹೆಸರು ಪಡೆದುಕೊಂಡ ಆಗುಂಬೆಗೆ ಭೇಟಿ ನೀಡಿ ಅಲ್ಲಿನ ಪ್ರಕೃತಿ ಸೌಂದರ್ಯ ಸವಿಯುತ್ತಿರುವ ಸಂದರ್ಭದಲ್ಲಿ ಮೋಟಾರ್ ಸೈಕಲ್ ನಲ್ಲಿ ಅತೀ ವೇಗವಾಗಿ ಬಂದ ವ್ಯಕ್ತಿಯೊಬ್ಬರು ಮೋಟಾರ್ ಸೈಕಲ್ ನಿಲ್ಲಿಸಿ ಕೆಳಗಿಳಿದು ಒಂದು ಸ್ವಂತಿ(ಸೆಲ್ಫಿ)ಯನ್ನು ತೆಗೆದುಕೊಂಡು ಮತ್ತೆ ಅದೇ ಮೋಟಾರ್ ಸೈಕಲ್ ಹತ್ತಿ ಹಿಂತಿರುಗಿ ಹೊರಟರು ಅವರೂ ಪ್ರಕೃತಿಯನ್ನು ಕಣ್ಣೆತ್ತಿಯು ನೋಡಲಿಲ್ಲ ನನಗಿದು ಬಹಳ ವಿಚಿತ್ರ ಎನ್ನಿಸಿತು. ಆದರೆ ಜಂಗಮವಾಣಿಯಲ್ಲಿ ಭಾವಚಿತ್ರ ಸೆರೆ ಹಿಡಿಯಲು ಇಲ್ಲಿಯವರೆಗೂ ಬಂದರೆ ಎನಿಸಿತು. ಹೌದು ಅವರು ಪ್ರಯಾಣ ಮುಂದುವರೆಸಿದ ಅಷ್ಟೊಂದು ಆಶ್ಚರ್ಯ ಆಗುತ್ತಿರಲಿಲ್ಲ ಆದರೆ ಆತ ಬಂದ ದಾರಿಯ ಹಿಂತಿರುಗಿ ಹೊರಟ್ಟಿದ್ದು. ನನಗೆ ವಿಚಿತ್ರ ಮತ್ತು ಹಲವು ಪ್ರಶ್ನೆಗಳನ್ನು ಮೂಡುವಂತೆ ಮಾಡಿತ್ತು. ಹೀಗೆ ಅದೆಷ್ಟೋ ಜನರಿದ್ದಾರೆ.

ಇನ್ನು ಕೆಲವರು ರೀಲ್ಸ್ ಮಾಡುವ ಬರದಲ್ಲಿ ತಾವೆಲ್ಲಿದ್ದೇವೆ ಎನ್ನುವುದನ್ನೇ ಮರೆಯುತ್ತಾರೆ. ನೀರಿನೊಂದಿಗೆ ಆಟ ಜಲಪಾತಗಳೊಂದಿಗೆ ಆಟವಾಡುತ್ತ ಕಂಡ ಕಂಡಂತೆ ಕಣ್ಮರೆಯಾಗಿದುಂಟು. ಇತ್ತೀಚೆಗೆ ಇಂತಹ ಹಲವು ಘಟನೆಗಳನ್ನು ಕೇಳುತ್ತಿದ್ದೇವೆ. ಕಣ್ಣಾರೆ ಕಾಣುತ್ತಿದ್ದೇವೆ. ಆದರೂ ಜನತೆ ಎಚ್ಚೆತ್ತು ಕೊಳ್ಳುತ್ತಿಲ್ಲ ಎಂಬುವುದೇ ವಿಪರ್ಯಾಸ. ಯುವಜನರೇ ನೀವು ಪ್ರವಾಸಿ ತಾಣಗಳಿಗೆ ಭೇಟಿನೀಡಿದಾಗ ಹಾಗೂ ಮಲೆನಾಡಿನ ಜಲಪಾತ ಗುಡ್ಡ ಬೆಟ್ಟಗಳ ವೀಕ್ಷಣೆಗೆ ಹೋದಾಗ ದಯವಿಟ್ಟು ನಿಮ್ಮ ಜೀವದ ಮೇಲೆ ಕಾಳಜಿವಹಿಸಿ. ಕೆಲವರು ಹೇಳುವರು ಇರುವುದು ಒಂದು ದಿನ ಹೋಗೋದು ಒಂದು ದಿನ ಏನಾಗಲ್ಲ ಅಂತ. ಖಂಡಿತ ತಪ್ಪು ನಿಮ್ಮನ್ನು ಹೀಗೆ ಕಳೆದು ಕೊಳ್ಳಲು ನಿಮ್ಮ ತಾಯಿ ನಿಮ್ಮನ್ನು ಒಂಬತ್ತು ತಿಂಗಳು ಗರ್ಭದಲ್ಲಿ ಕಾಪಾಡಿ ಹುಟ್ಟಿದಾಗಿಂದ ನಡೆದು ಬೆಳೆದು ದೊಡ್ಡವರಾಗುವವರೆಗೂ ಲಾಲನೆ, ಪಾಲನೆ ಮಾಡಿರುವುದು ಒಮ್ಮೆ ನೆನಪಿಸಿ. ನಿಮ್ಮ ಪ್ರವಾಸದಲ್ಲಿ ಜಾಗ್ರತೆ ವಹಿಸಿ ಎಂಬುದು ಈ ಲೇಖನದ ಸದುದ್ದೇಶ.


**ಮಾನಸಪ್ರವೀಣ್ ಭಟ್**

---

# ಹರಿನಾಮ ಸಂಕೀರ್ತನೆ ಗಾಯನ

• ಉದಯವಾಹಿನಿ, ಬೆಂಗಳೂರು

ಜಯನಗರ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್.ಕೆ. ವಾದೀಂದ್ರಾ ಚಾರ್ಯರ ನೇತೃತ್ವದಲ್ಲಿ ಜುಲೈ 18, ಗುರುವಾರ ಸಂಜೆ 7-30ಕ್ಕೆ ಶ್ರೀಮತಿ ಶ್ರೀದೇವಿ ಪ್ರಸನ್ನ ಇವರಿಂದ ಹರಿನಾಮ ಸಂಕೀರ್ತನೆ ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್ ಮತ್ತು ಮೃದಂಗ ವಾದನದಲ್ಲಿ ಶ್ರೀ ಅನಿರುದ್ಧ ವಾಸುದೇವ್ ಸಹಕರಿಸಲಿದ್ದಾರೆ ಎಂದು ಶ್ರೀ ನಂದ ಕಿಶೋರ್ ಆಚಾರ್ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

---

# ರೈತನೇ ಮಾತ್ರ ಮಹಾಶ್ರೇಷ್ಠ



**ವಿಶ್ವಾಸ್.ಡಿ.ಗೌಡ**
• ಉದಯವಾಹಿನಿ, ವಿಶೇಷ

ಬೆಳಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಹೊಟ್ಟೆ ತುಂಬುವಷ್ಟು ಊಟ ಮಾಡಿ ಹಸಿವೆ ಇಲ್ಲದೆ ನಿಶ್ಚಿಂತೆಯಿಂದ ನಾವು ನಿದ್ದೆ ಮಾಡುತ್ತಿದ್ದರೆ, ಇದಕ್ಕೆ ರೈತನ ಶ್ರಮದ ಫಲವೇ ಮುಖ್ಯಕಾರಣ. ಏಕೆಂದರೆ ಉಪಹಾರ ಮತ್ತು ಊಟದಲ್ಲಿ ಬಳಸುವ ಪ್ರತಿಯೊಂದು ಪದಾರ್ಥದಲ್ಲಿಯೂ ರೈತನ ಶ್ರಮ ಅಡಗಿರುತ್ತದೆ. ಇಂತಹ ರೈತನಿಗೆ ನಾವೆಲ್ಲರೂ ಕೃತಜ್ಞರಾಗಿರಲೇಬೇಕು. ನಮಗೆಲ್ಲರಿಗೂ ಇಂದು ಡಾಕ್ಟರ್, ಲಾಯರ್, ಎಂಜಿನಿಯರ್‌ಗಳು, ವ್ಯಾಪಾರಸ್ಥ, ಬ್ಯುಸಿನೆಸ್ ಮ್ಯಾನ್ ಮುಖ್ಯ ಎನಿಸುತ್ತಾರೆ. ಆದರೆ ಇವರೆಲ್ಲರಿಗಿಂತಲೂ ಮೂರು ಹೊತ್ತು ಅನ್ನಕ್ಕೆ ಕಾರಣವಾಗಿರುವ ರೈತನ ನೆನಪು ಮಾತ್ರ ಬರುವುದಿಲ್ಲ. ಇವರೆಲ್ಲರಿಗಿಂತಲೂ ರೈತನೇ ಏಕೆ ಮಾತ್ರ ಮಹಾಶ್ರೇಷ್ಠ ಎಂಬುದಕ್ಕೆ ಇಲ್ಲೊಂದು ಚಿಕ್ಕ ಕತೆ ಹೇಳುತ್ತೇನೆ ಕೊನೆಯವರೆಗೆ ಓದಿ...

ಒಂದು ಊರಲ್ಲಿ ಒಬ್ಬ ರಾಜನಿದ್ದನಂತೆ ಆತನಿಗೆ ತನ್ನ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ರಾಜ್ಯದ ಅತ್ಯಂತ ಶ್ರೇಷ್ಠ ವ್ಯಕ್ತಿಯನ್ನು ಗೌರವಿಸಬೇಕೆಂದು ಅಂದುಕೊಂಡಿದ್ದ. ರಾಜನ ಕಾಲದಲ್ಲಿ ಸನ್ಮಾನವೆಂದರೆ ಕೇವಲ ಹೂಗುಚ್ಛ ನೀಡುವುದಲ್ಲ, ವಜ್ರ ವೈಡೂರ್ಯಗಳನ್ನು ಕೊಟ್ಟು ಸನ್ಮಾನಿಸಲಾಗುತ್ತಿತ್ತು. ಎಲ್ಲಾ ಮಂತ್ರಿಗಳನ್ನು ಕರೆದು ರಾಜ್ಯದ ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನಿಸಬೇಕು ಎಂದು ಪ್ರಕಟಣೆ ಹೊರಡಿಸಿದ. ರಾಜನ ಪ್ರಕಟಣೆ ಕೇಳಿದ್ದೇ ತಡ ರಾಜ್ಯದಲ್ಲಿರುವ ವೈದ್ಯರು, ಎಂಜಿನಿಯರ್‌ಗಳು, ಸಮಾಜ ಸುಧಾರಕರು, ಕ್ರೀಡಾಪಟುಗಳು, ಸಂಗೀತಗಾರರು, ನೃತ್ಯಪಟುಗಳು, ವ್ಯಾಪಾರಸ್ಥರು, ಜ್ಯೋತಿಷಿಗಳು, ಪರ್ವತಾರೋಹಿಗಳು, ಉದ್ಯಮಿಗಳು, ವಕೀಲರು, ಪೊಲೀಸರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ರಾಜನ ಆಸ್ಥಾನಕ್ಕೆ ಬಂದು ತಾವು ತಾವೇಕೆ ಶ್ರೇಷ್ಠ ವ್ಯಕ್ತಿಗಳು ಎಂದು ವಿವರಿಸಿ ಹೋದರು. ಆದರೆ, ಅಷ್ಟರಲ್ಲಿ ಆಸ್ಥಾನದಲ್ಲಿ ಒಂದು ಘಟನೆ ನಡೆದಿತ್ತು. ಅದು ರಾಜ ಮತ್ತು ಮಂತ್ರಿಗಳ ಗಮನಕ್ಕೂ ಬಂದಿರಲಿಲ್ಲ. ಹೌದು ಮೈಯೆಲ್ಲಾ ಕೆಸರು ಮಯವಾಗಿರುವ, ತಲೆಗೆ ಶಾಲು ಸುತ್ತಿದ್ದ ವ್ಯಕ್ತಿಯೊಬ್ಬ ಓಡುತ್ತ ಬಂದು ರಾಜನ ಆಸ್ಥಾನಕ್ಕೆ ಪ್ರವೇಶ ಮಾಡಲು ಯತ್ನಿಸಿದ್ದ. ಮೈಯಲ್ಲಾ ಕೆಸರುಮಯ ಆಗಿದ್ದನ್ನು ನೋಡಿ ಬಾಗಿಲ ಕಾವಲುಗಾರರು ರಾಜನ ಆಸ್ಥಾನದಲ್ಲಿ ಪ್ರವೇಶ ಮಾಡಲು ಅವಕಾಶವನ್ನೇ ನೀಡಲಿಲ್ಲ. ಏ ಭಿಕ್ಷುಕ, ನೀನು ಒಳಗೆ ಹೋಗಲು ಸಾಧ್ಯವಿಲ್ಲ ಎಂದು ಆತನನ್ನು ತಡೆದುಬಿಟ್ಟರು. ನಾನು ಭಿಕ್ಷುಕನಲ್ಲ, ರೈತ. ಈ ರಾಜ್ಯದ ಎಲ್ಲರಿಗೂ ಬೇಕಾಗುವ ಆಹಾರ ಧಾನ್ಯಗಳನ್ನು ಬೆಳೆದುಕೊಡುವವನು ಎಂದು ಎಷ್ಟೇ ಹೇಳಿದರೂ ಕಾವಲುಗಾರರು ಆತನನ್ನು ಒಳಕ್ಕೆ ಬಿಡಲೇ ಇಲ್ಲ. ಇದರಿಂದ ಬೇಸರಗೊಂಡ ಆ ರೈತ ಮನೆಗೆ ಹೋಗಿ ಮಲಗಿಬಿಟ್ಟ. ಮುಂದಿನ ವರ್ಷ ರಾಜನ ಹುಟ್ಟು ಹಬ್ಬ ಬಂತು. ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನ ಮಾಡಲು ರಾಜ ಸಿದ್ಧನಾಗಿ ಕುಳಿತಿದ್ದ. ರಾಜನಿಗೆ ಯಾರ್ಯಾರು ಶ್ರೇಷ್ಠವೆಂದು ಅರ್ಜಿ ಹಾಕಿದ್ದರೋ ಅವರೆಲ್ಲರನ್ನು ಆಹ್ವಾನಿಸಿ ಎಂದು ಮಂತ್ರಿಗಳಿಗೆ ಹೇಳಿದ. ಆದರೆ, ಎಂಜಿನಿಯರ್, ವೈದ್ಯ, ಪರ್ವತಾರೋಹಿ, ವಿದ್ವಾಂಸ, ಈಜುಗಾರ, ಸಮಾಜ ಸುಧಾರಕ, ಕ್ರೀಡಾಸಾಧಕ ಹಾಗೂ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಯಾರೂ ಆಸ್ಥಾನದತ್ತ ಸುಳಿಯಲೇ ಇಲ್ಲ. ಇದರಿಂದಾಗಿ ಆಶ್ಚರ್ಯಚಕಿತರಾದ ರಾಜ ತನ್ನ ಹುಟ್ಟುಹಬ್ಬಗ್ಗೆ ಒಬ್ಬರೂ ಬರಲಿಲ್ಲವೇ..? ಕೂಡಲೇ ರಾಜ ಮಂತ್ರಿಯನ್ನು ಕರೆದು ಏಕೆ ಯಾರೂ ಬಂದಿಲ್ಲ ಎಂದು ಕೇಳಿದ. ತಕ್ಷಣವೇ ಬೇಹುಗಾರರನ್ನು ಕಳುಹಿಸಿ ವಿಷಯ ತಿಳಿದುಕೊಂಡು ಬರಲು ಕಳುಹಿಸಿದಾಗ ನಿಜವಾದ ಸಂಗತಿ ಗೊತ್ತಾಯಿತು. ಕಳೆದ ಬಾರಿ ರಾಜನ ಆಸ್ಥಾನ ಪ್ರವೇಶಿಸಲು ಸಾಧ್ಯವಾಗದ್ದರಿಂದ ರೈತ ಮನೆಯಲ್ಲಿಯೇ ಮಲಗಿಬಿಟ್ಟಿದ್ದ. ಆತ ಮಲಗಿದ್ದರಿಂದ ಈ ವರ್ಷ ಆಹಾರಧಾನ್ಯದ ಉತ್ಪಾದನೆಯೇ ಆಗಿರಲಿಲ್ಲ. ಆಹಾರ ಇಲ್ಲದ್ದರಿಂದ ತಾವೇ ಶ್ರೇಷ್ಠ ಅಂದುಕೊಂಡಿದ್ದ ಯಾವುದೇ ವ್ಯಕ್ತಿಗೂ ರಾಜನ ಆಸ್ಥಾನಕ್ಕೆ ಬರುವಷ್ಟು ಶಕ್ತಿಯೇ ಇರಲಿಲ್ಲ. ಈ ವಿಷಯ ರಾಜನಿಗೆ ಗೊತ್ತಾದ ತಕ್ಷಣವೇ ತನ್ನ ರಾಜ್ಯದಲ್ಲಿ ಅತ್ಯುತ್ತಮ ಶ್ರೇಷ್ಠ ವ್ಯಕ್ತಿ ಬೇರಾರು ಅಲ್ಲ, ರಾಜ್ಯಕ್ಕೆ ಅನ್ನ ಕೊಡುವ ವ್ಯಕ್ತಿಯೇ ಶ್ರೇಷ್ಠ, ಅವನೇ ಅನ್ನದಾತನೆಂದುಕೊಂಡು ನೇರವಾಗಿ ರೈತನ ಮನೆಗೆ ಹೋಗಿ ಆತನನ್ನು ಸತ್ಕರಿಸಿದ. ಜೊತೆಗೆ ಕಳೆದ ಬಾರಿ ರಾಜಭಟರು ಅರಮನೆಗೆ ಪ್ರವೇಶ ನಿರಾಕರಿಸಿದ್ದಕ್ಕಾಗಿ ಕ್ಷಮೆಯನ್ನೂ ಕೋರಿದ. ಅನ್ನದಾತನಿದ್ದರೆ ಮಾತ್ರ ಅರಮನೆ ಎನ್ನುವುದು ಆ ರಾಜನಿಗೆ ಅರ್ಥವಾಗಿತ್ತು. ಅನ್ನದಾತ ಮುನಿದರೆ ಯಾರೂ ಯಾವುದೇ ಸಾಧನೆ ಮಾಡುವುದು ಅಸಾಧ್ಯ ಎನ್ನುವುದೂ ಆತನಿಗೆ ಗೊತ್ತಾಯಿತು.

ಕೃಷಿ ಹಾಗೂ ರೈತನ ಅಗತ್ಯತೆ ಸಮಾಜಕ್ಕೆ ಎಷ್ಟಿದೆ ಎಂಬುದು ಈ ಕತೆಯಿಂದಲೇ ನಮಗೆ ತಿಳಿಯುತ್ತದೆ.

ನೇಗಿಲ ತುದಿಯೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಕವನದ ಸಾಲುಗಳು ವೇದಿಕೆಗಳ ಮೇಲೆ ರಾಜಕಾರಣಿಗಳ ಬಾಯಲ್ಲಿ ಹರಿದಾಡುತ್ತಿದ್ದರೂ ರೈತರು ಇಂದಿಗೂ ಸಹ ತನ್ನ ಬೆಳೆಗೆ ಬೆಲೆ ನಿಗದಿ ಮಾಡದ ಪರಿಸ್ಥಿತಿಯಲ್ಲಿದ್ದಾನೆ. ರೈತನಿಂದ ಖರೀದಿ ಮಾಡಿದ ವ್ಯಾಪಾರಸ್ಥರು ಆ ಬೆಳೆಗೆ ಬೆಲೆ ಕಟ್ಟಿ ಅದನ್ನೇ ದುಬಾರಿ ಬೆಲೆಗೆ ರೈತನಿಗೆ ಮಾರುತ್ತಿರುವುದು ದುರ್ದೈವದ ಸಂಗತಿ...


ಉದಯವಾಹಿನಿ ಚಿತ್ರ

# ಜನರಿಗೆ ಉಪಯುಕ್ತ ಆಗುವಂಥ ಸಾಹಿತ್ಯ ರಚನೆಯಲ್ಲಿ ತೊಡಗಿ

## ಕವಿ, ಸಾಹಿತಿಯಾದವನು ಸಮಾಜದ ಎಲ್ಲಾ ಧರ್ಮಗಳ ಸಹಿಷ್ಣುತೆಯನ್ನು ಹೊಂದಿರಬೇಕು: ಪ್ರಾಧ್ಯಾಪಕ ಅಮರೇಶ್ ನುಗಡೋಣಿ

• **ಉದಯವಾಹಿನಿ, ಬಳ್ಳಾರಿ**



ಉದಯವಾಹಿನಿ ಚಿತ್ರ

ಸಾಹಿತ್ಯವನ್ನು ಕೇವಲ ಮನರಂಜನೆಗೆ ಮಾತ್ರ ರಚಿಸಬಾರದು ಅದರಿಂದ ಸಮಾಜದ ಬಡ ಜನರಿಗೆ ತಳ ಸಮುದಾಯದ ಜನರಿಗೆ ಉಪಯುಕ್ತ ಆಗುವಂತ ಸಾಹಿತ್ಯ ರಚನೆಯಲ್ಲಿ ತೊಡಗಬೇಕು ಇದರಿಂದ ಸಮಾಜದಲ್ಲಿ ತನ್ನ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಕವಿ ಸಾಹಿತಿ ಯಾದವನು ಸಮಾಜದ ಎಲ್ಲಾ ಧರ್ಮಗಳ ಸಹಿಷ್ಣುತೆಯನ್ನು ಹೊಂದಿರುವುದು ಅತ್ಯವಶ್ಯಕ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಅಮರೇಶ್ ನಗುಡೋಣಿ ಅಭಿಪ್ರಾಯ ಪಟ್ಟರು.

**ಕಲ್ಪನೆ ಕನಸು ಊಹೆ ಇಲ್ಲದವನು ಸಾಹಿತಿಯಾಗಲಾರ**

ಅವರು ಮಂಗಳವಾರ ನಗರದ ಸರಳಾದೇವಿ ಸತೀಶ್ ಚಂದ್ರ ಅಗರ್ವಾಲ್ ಪ್ರಥಮ ದರ್ಜೆ ಪದವಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಾಹಿತ್ಯ ಧರ್ಮ ಸಮಾಜ ಮತ್ತು ಅಂತರ ಸಂಬಂಧ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿ, ಆಯಾ ವ್ಯಕ್ತಿಗೆ ಸೇರಿದ ಒಂದು ಧರ್ಮ ಹಲವು ವ್ಯಕ್ತಿಗಳು ಸೇರಿದರೆ ಹಲವು ಧರ್ಮವಾಗಿ ಮಾರ್ಪಾಡಾಗುತ್ತದೆ ಸಾಹಿತ್ಯ ರಚನೆಕಾರರು ಸಮಾಜದಲ್ಲಿ ಹೇಗೆ ತಮ್ಮ ಜವಾಬ್ದಾರಿಯನ್ನು ನಿಭಾಯಿಸ ಬೇಕುಎಂಬುದನ್ನು ತಿಳಿದುಕೊಂಡಿರಬೇಕು ಎಂದು ಕಿವಿಮಾತು ಹೇಳಿದರು.

ಇದಕ್ಕೆ ಅತ್ಯಂತ ಪ್ರಮುಖ ಉದಾಹರಣೆ ಎಂದರೆ ನೃಪತುಂಗ ರಾಜನ ಆಸ್ಥಾನ ಕವಿಯಾದ ಶ್ರೀವಿಜಯನು ರಚಿಸಿದ ಕವಿರಾಜಮಾರ್ಗ ಕೃತಿಯೇ ಸಾಕ್ಷಿ, ಶ್ರೀ ವಿಜಯನು ಅಮೋಘ ವರ್ಷ ನೃಪತುಂಗ ರಾಜನಿಗೆ ಎಲ್ಲಾ ರೀತಿಯಲ್ಲೂ ಸಲಹೆ ಸೂಚನೆಗಳನ್ನು ಕೊಡುತ್ತಿದ್ದನು. ಅದೇ ರೀತಿ ಯಾಗಿ ಕಾವೇರಿಯಿಂದ ಗೋದಾವರಿವರೆಗೆ ಕನ್ನಡ ನಾಡು ಎಂದು ಮೇರೆಯನ್ನು ಹಾಕಿಕೊಟ್ಟ ಕವಿ ಶ್ರೀವಿಜಯ ಆಗಿದ್ದನು. ಈ ನಾಡಿಗೆ ಕನ್ನಡವೇ ಅಧಿಕೃತರಾಜ ಭಾಷೆಯಾಗಿರಬೇಕೆಂದು ಸಹ ಕವಿ ಶ್ರೀ ವಿಜಯನು ಪ್ರಸ್ತಾಪಿಸಿದ್ದನು. ಈ ರೀತಿಯ ಕಲ್ಪನೆಯನ್ನು ನೃಪತುಂಗನಿಗೆ ತಂದು ಕೊಟ್ಟಿದ್ದನು, ಈ ರೀತಿಯಾಗಿ ಕಲ್ಪನೆ ಕನಸು ಊಹೆ ಇಲ್ಲದವನು ಸಾಹಿತಿಯಾಗಲಾರ ಕಲ್ಪನೆ ಮತ್ತು ಕನಸನ್ನು ಭವಿಷ್ಯದಲ್ಲಿ ಸಾಕಾರಗೊಳ್ಳುವ ನಿಟ್ಟಿನಲ್ಲಿ ಕವಿ ಕೆಲಸ ಮಾಡಬೇಕಾಗುತ್ತದೆ ಎಂದರು.

> **ಕಾರ್ಯಕ್ರಮದಲ್ಲಿ ಕನ್ನಡ ಉಪನ್ಯಾಸಕ ಡಾಕ್ಟರ್ ದಸ್ತಗಿರಿ ಸಾಬ್ ದಿನ್ನಿ ಮಾತನಾಡಿ ಸಮಾಜದಲ್ಲಿ ಇರುವ ಅಸಹಿಷ್ಣತೆ ಭ್ರಷ್ಟಾಚಾರ ಹೆಚ್ಚಾಗಿರುವ ಇಂದಿನ ಕಾಲಘಟ್ಟದಲ್ಲಿ ಇಂಥ ಉಪನ್ಯಾಸಗಳು ಅತ್ಯಂತ ಪ್ರಸ್ತುತ**
> **-ಅಮರೇಶ್ ನಗುಡೋಣಿ**
> **ವಿಶ್ರಾಂತ ಪ್ರಾಧ್ಯಾಪಕ**

### ಮಾನವ ಜಾತಿ ತಾನೊಂದೇ ವಲಂ

**ಕರ್ನಾಟಕದಲ್ಲಿ ಕನ್ನಡ ಭಾಷೆಯು ಪ್ರತಿ ಐವತ್ತು ಕಿಲೋಮೀಟರ್ ಗೆ ತನ್ನ ಪ್ರಭೇದವನ್ನು ಬದಲಾಯಿಸಿಕೊಳ್ಳುತ್ತ ಸಾಗುತ್ತದೆ. ಇವೆಲ್ಲವನ್ನೂ ಒಗ್ಗೂಡಿಸಿಕೊಂಡ ಕನ್ನಡ ಭಾಷೆ ಸುಮಾರು 2000 ವರ್ಷಗಳ ಇತಿಹಾಸವನ್ನು ಹೊಂದಿದೆ ಇದನ್ನು ಕೇವಲ ಮಾತನಾಡಲು ಮಾತ್ರ ಬಳಸುತ್ತಿದ್ದರು ನಂತರ ಲಿಪಿಯನ್ನು ಕಂಡುಕೊಳ್ಳಲಾಯಿತು. ನಂತರ 10ನೇ ಶತಮಾನದಲ್ಲಿ ಪಂಪ ರನ್ನ ಪೊನ್ನ ನಾಗಚಂದ್ರ, ಸೇರಿದಂತೆ ಅನೇಕ ಜೈನ ಕವಿಗಳು ರಾಜಶ್ರಯವನ್ನು ಪಡೆದು ಕನ್ನಡವನ್ನು ಕಲಿತು ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ ಅದರಲ್ಲಿ ಪ್ರಮುಖವಾದ ಕವಿ ಪಂಪನು ಮಾನವ ಜಾತಿ ತಾನೊಂದೇ ವಲಂ ಎಂಬುದು ಕವಿ ಹೃದಯದ ವೈಶಾಲಿಯನ್ನು ತೋರಿಸುತ್ತದೆ.**

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಮಂಜುನಾಥ್ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಕೆ ಬಸಪ್ಪ ಸ್ವಾಗತಿಸಿದರು ರಾಮಸ್ವಾಮಿ ನಿರೂಪಿಸಿದರು ಪ್ರಾರ್ಥನೆಯನ್ನು ವಿದ್ಯಾರ್ಥಿನಿ ಬಿ ಎಚ್ ಎಂ ಸುಷ್ಮಾ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಾಹಿತಿ ಗಳಾದ ಶಿವಲಿಂಗಪ್ಪ ಹಂದಿಹಾಳ್, ವೀರೇಂದ್ರ ರವಿಹಾಳ್, ಪತ್ರಕರ್ತರಾದ ವಿ. ಬಿ. ಮಲ್ಲಪ್ಪ, ಸಿ ಮಂಜುನಾಥ್, ಸಿದ್ದರಾಮಪ್ಪ ಸಿರಿಗೇರಿ ಸೇರಿದಂತೆ ಕಾಲೇಜಿನ ಬೋಧಕ ಸಿಬ್ಬಂದಿ, ಕನ್ನಡ ವಿಭಾಗದ ಹಲವಾರು ವಿದ್ಯಾರ್ಥಿಗಳಿದ್ದರು.

---

# ಪ್ರತಿ ಎರಡು ದಿನಕ್ಕೊಮ್ಮೆ ಹೆದ್ದಾರಿ ಗುಂಡಿ ಮುಚ್ಚಲು ಜಿಲ್ಲಾಧಿಕಾರಿ ಸೂಚನೆ

• **ಉದಯವಾಹಿನಿ, ಮಂಗಳೂರು**


ಉದಯವಾಹಿನಿ ಚಿತ್ರ

ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ನಂತೂರು ಹಾಗೂ ಕೆಪಿಟಿ ಜಂಕ್ಷನ್‌ಗಳಲ್ಲಿ ಹೊಂಡಗಳಿಂದಾಗಿ ನಿತ್ಯವೂ ವಾಹನದಟ್ಟಣೆ ಉಂಟಾಗುತ್ತಿದೆ. ಈ ಜಂಕ್ಷನ್ ಗಳನ್ನು ಹಾಗುಹೊಗಲು ವಾಹನ ಸವಾರರು ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.


ಸಮಸ್ಯೆ ಎದುರಿಸುತ್ತಿರುವ ಸಾರ್ವಜನಿಕರಿಂದ ದೂರು ಬಂದಿದ್ದರಿಂದ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಎಂ.ಪಿ. ಅವರು ಮಂಗಳವಾರ ಈ ಎರಡೂ ವೃತ್ತಗಳನ್ನು ಪರಿಶೀಲಿಸಿದರು. ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮ ವಹಿಸುವಂತೆ ಪಾಲಿಕೆ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಂತೂರು ಹಾಗೂ ಕೆಪಿಟಿಯಲ್ಲಿ ಹೆದ್ದಾರಿಯನ್ನು ರಸ್ತೆಗಳು ಕೂಡುವಲ್ಲಿ ಸೃಷ್ಟಿಯಾಗಿರುವ ಹೊಂಡಗಳನ್ನು ತ್ವರಿತವಾಗಿ ಮುಚ್ಚಬೇಕು.ಇಲ್ಲಿ ಫೇವರ್ ಫಿನಿಶ್ ಡಾಂಬರೀಕರಣ ಮಾಡಬೇಕು ಎಂದು ನಿರ್ದೇಶನ ನೀಡಿದರು. ನಂತೂರು ಮತ್ತು ಕೆಪಿಟಿ ವೃತ್ತಗಳನ್ನು ನಿತ್ಯವೂ ಪರಿಶೀಲಿಸಿ ಪ್ರತಿ ಎರಡು ದಿನಕ್ಕೊಮ್ಮೆಯಾದರೂ ಹೊಂಡ ಮುಚ್ಚಲು ಕ್ರಮ ವಹಿಸಬೇಕು ಎಂದು ಎನ್‌ಎಚ್‌ಎಐ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಾಲಿಕೆ ಆಯುಕ್ತ ಆನಂದ ಸಿ.ಎಲ್, ಕಂದಾಯ ವಿಭಾಗದ ಉಪಾಯುಕ್ತ ಗಿರೀಶ್ ನಂದನ್, ಕಾರ್ಯಪಾಲಕ ಎಂಜಿನಿಯರ್ ನರೇಶ್ ಶೆಣೈ, ಎನ್‌ಎಚ್‌ಎಐ ಯೋಜನಾ ನಿರ್ದೇಶಕ ಜಾವೇದ್ ಅಜ್ಮಿ ಮತ್ತಿತರ ಅಧಿಕಾರಿಗಳು ಭಾಗವಹಿಸಿದ್ದರು.

---

# ರಸಗೊಬ್ಬರ ಅಭಾವ: ರೈತ ಸಂಘ ಪ್ರತಿಭಟನೆ

• **ಉದಯವಾಹಿನಿ, ಮುಳಗುಂದ**


ಉದಯವಾಹಿನಿ ಚಿತ್ರ

ಕಳೆದೊಂದು ವಾರದಿಂದ ಉತ್ತಮ ಮಳೆ ಆಗುತ್ತಿದ್ದು, ಬೆಳೆಗಳಿಗೆ ಅಗತ್ಯವಿರುವ ಯೂರಿಯಾ, ರಸಗೊಬ್ಬರ ಸ್ಥಳೀಯವಾಗಿ ಅಭಾವ ಉಂಟಾದ ಹಿನ್ನೆಲೆ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಸದಸ್ಯರು ಕೃಷಿ ಇಲಾಖೆ ವಿರುದ್ಧ ಗ್ರಾಮ ಲೆಕ್ಕಾಧಿಕಾರಿ ಕಚೇರಿ ಮುಂದೆ ಪ್ರತಿಭಟಿಸಿ, ಕೃಷಿ ಜಂಟಿ ನಿರ್ದೇಶಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಈ ಭಾಗದಲ್ಲಿ ಉತ್ತಮ ಮಳೆ ಆಗುತ್ತಿದೆ. ಹೆಸರು, ಗೋವಿನ ಜೋಳ, ಶೇಂಗಾ ಬೆಳೆಗಳ ರಕ್ಷಣೆಗೆ ಯೂರಿಯಾ ರಸಗೊಬ್ಬರ ಸ್ಥಳೀಯ ಆಗ್ರೋ ಕೇಂದ್ರಗಳು, ಸೂಸೈಟಿಯಲ್ಲಿ ಲಭ್ಯವಾಗುತ್ತಿಲ್ಲ. ಬೇರೆ ಗ್ರಾಮಗಳಲ್ಲಿ ಹೆಚ್ಚಿನ ದರಕೊಟ್ಟು ಯೂರಿಯಾ ತರುವ ಸ್ಥಿತಿ ಪಟ್ಟಣದ ರೈತರಿಗೆ ಬಂದೊದಗಿದೆ. ರಸಗೊಬ್ಬರ ಪೂರೈಕೆಗೆ ಕ್ರಮ ಕೈಗೊಳ್ಳಬೇಕಿದ್ದ, ಕೃಷಿ ಜಂಟಿ ನಿರ್ದೇಶಕಿ ತಾರಾಮಣಿ ಅವರು ನಮ್ಮ ಫೋನ್ ಕರೆಗೆ ಸ್ಪಂದಿಸದೇ ಹಾರಿಕೆ ಉತ್ತರ ನೀಡಿದ್ದಾರೆ' ಎಂದು ರೈತ ಸಂಘದ ದೇವರಾಜ ಸಂಗನಪೇಟಿ ಆರೋಪಿಸಿದರು.

ರೈತ ಸಂಘದ ಸ್ಥಳೀಯ ಘಟಕದ ಅಧ್ಯಕ್ಷ ಬಸವರಾಜ ಕರಿಗಾರ, ದೇವಪ್ಪ ಅಣ್ಣಿಗೇರಿ, ಕಿರಣ ಕುಲಕರ್ಣಿ, ಮಹ್ಮದಲಿ ಶೇಖ, ಮಹಾಂತೇಶ ಗುಂಜಳ, ಗುಡುಸಾಬ ಗಾಡಿ, ಮುತ್ತಣ್ಣ ಪಲ್ಲೇದ, ಮಂಜುನಾಥ ಕಬಾಡಿ, ಪಟ್ಟಣ ಪಂಚಾಯ್ತಿ ಸದಸ್ಯ ಎನ್.ಆರ್.ದೇಶಪಾಂಡೆ, ಎಸ್.ಸಿ.ಬಡ್ನಿ, ಪಿಎಸ್‌ಐ ವಿ.ಎಸ್.ಚವಡಿ ಹಾಗೂ ರೈತ ಸಂಘದ ಸದಸ್ಯರು ಇದ್ದರು.

ಮುಳಗುಂದ ಪಟ್ಟಣಕ್ಕೆ ಯೂರಿಯಾ ರಸಗೊಬ್ಬರ ಪೂರೈಕೆ ಮಾಡಬೇಕು ಎಂದು ರೈತ ಸಂಘದವರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ ಅವರಿಗೆ ಮನವಿ ಸಲ್ಲಿಸಿದರು

### ನ್ಯಾಯ ಒದಗಿಸುವ ಭರವಸೆ

**ಪ್ರತಿಭಟನಾ ಸ್ಥಳಕ್ಕೆ ಬಂದ ಗದಗ ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ, ಕೃಷಿ ಉಪ ನಿರ್ದೇಶಕಿ ಸ್ಫೂರ್ತಿ ಜಿ.ಎಸ್, ಸಹಾಯಕ ನಿರ್ದೇಶಕ ಮಲ್ಲಯ್ಯ ಕೊರಣ್ಣವರ ಯೂರಿಯಾ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಶೀಘ್ರವೇ ಮುಳಗುಂದದಲ್ಲೆ ಯೂರಿಯಾ ಸಿಗಲಿದೆ. ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಇದಕ್ಕೆ ಜಗ್ಗದ ರೈತರು ಜಂಟಿ ನಿರ್ದೇಶಕರು ಬರಬೇಕು, ಅವರು ರೈತರ ಪರ ಕೆಲಸ ಮಾಡುತ್ತಿಲ್ಲ ರೈತರು ಫೋನ್ ಕರೆ ಮಾಡಿದರೆ ಸೌಜನ್ಯದಿಂದ ವರ್ತಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.**
**ಈ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ರೈತರಿಗೆ ನ್ಯಾಯ ಒದಗಿಸುವ ಭರವಸೆ ನೀಡಿ, ರೈತರ ಮನವೊಲಿಸಿದರು.**

---

# ಗುಡಿಗೆ ಮೂಲಸೌಕರ್ಯ ಕೊರತೆ

• **ಉದಯವಾಹಿನಿ, ಹಳೇಬೀಡು**


ಉದಯವಾಹಿನಿ ಚಿತ್ರ

ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಇಲ್ಲಿನ ಹೊಯ್ಸಳೇಶ್ವರ ದೇವಾಲಯ ಸ್ಥಾನ ಪಡೆದು, ಒಂದು ವರ್ಷವಾದರೂ ಅಭಿವೃದ್ಧಿ ಕೆಲಸಗಳು ಗರಿಗೆದರುವ ಸೂಚನೆ ಕಾಣುತ್ತಿಲ್ಲ. ಪ್ರವಾಸಿಗರು ಹೆಚ್ಚು ಭೇಟಿ ನೀಡುತ್ತಾರೆ' ಎಂದು ಅಧಿಕಾರಿಗಳು ಹೇಳಿದರೂ, ಸದ್ಯದ ಪರಿಸ್ಥಿತಿಯಲ್ಲಿ ರಜೆ ದಿನ ಹೊರತುಪಡಿಸಿದರೆ, ಬೇರೆ ದಿನ ಪ್ರವಾಸಿಗರ ಸಂಖ್ಯೆ ಕಡಿಮೆ.'ಸೌಲಭ್ಯ ಕೊರತೆಯೇ ಅದಕ್ಕೆ ಕಾರಣ' ಎಂಬುದು ಸ್ಥಳೀಯರ ಅಭಿಪ್ರಾಯ.

ಯುನೆಸ್ಕೋ ತಂಡ ಪರಿಶೀಲನೆಗೆ ಬರುವ ವೇಳೆಗೆ ದೇವಾಲಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆದಿದ್ದವು. ಪ್ರವೇಶದ್ವಾರದ ಪಕ್ಕದಲ್ಲಿ ಪ್ರವಾಸಿಗರ ಮಾಹಿತಿಗಾಗಿ ನಿರ್ವಚನ ಕೇಂದ್ರ ಆರಂಭಿಸಲಾಯಿತು. ಮ್ಯೂಸಿಯಂನ ಒಳಾಂಗಣದಲ್ಲಿ ವಿಗ್ರಹಗಳಿಗೆ ಹೊಸ ಗಾಜು ಅಳವಡಿಸಿ, ವಿದ್ಯುತ್ ಬೆಳಕಿನ ವ್ಯವಸ್ಥೆ ಮಾಡಲಾಗಿತ್ತು.

ವಿದ್ಯುತ್ ಸಂಪರ್ಕ ಸರಿಪಡಿಸಿ, ವಿಗ್ರಹಗಳನ್ನು ರಾಸಾಯನಿಕಗಳಿಂದ ಶುದ್ಧೀಕರಿಸಲಾಗಿತ್ತು. ಉದ್ಯಾನದಲ್ಲಿ ಹೊಸ ಹುಲ್ಲಿನ ಲಾನ್ ಹಾಗೂ ಆಕರ್ಷಕ ಗಿಡ ನೆಡಸಲಾಯಿತು. ಕಾರ್ಮಿಕರ ಕೊರತೆಯಿಂದ ಉದ್ಯಾನ ಈಗ ಸೊರಗಿದೆ.

ಮಧ್ಯಮ ವರ್ಗದ ಆರ್ಥಿಕ ಶಕ್ತಿಗೆ ತಕ್ಕ ಸ್ಟಾರ್ ಹೋಟೆಲ್ ಎಲ್ಲಿಯೂ ಇಲ್ಲ. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಮಯೂರ ಶಾಂತಲಾ ಹೋಟೆಲ್‌ನಲ್ಲಿ ನಾಲ್ಕು ಕೊಠಡಿಗಳಿವೆ. ಖಾಸಗಿ ಲಾಡ್ಜ್‌ಗಳಲ್ಲಿ 10 ಕೊಠಡಿ ದೊರಕುತ್ತವೆ. ಮಯೂರ ಹೋಟೆಲ್ ಅಭಿವೃದ್ಧಿ ಯಾಗಬೇಕು. ಹೆಚ್ಚುವರಿ ಕೊಠಡಿ ನಿರ್ಮಾಣವಾಗ ಬೇಕು. ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು' ಎನ್ನುತ್ತಾರೆ ಇತಿಹಾಸ ಪ್ರಾಧ್ಯಾಪಕ ಎಚ್.ಎಂ. ಬಸವರಾಜು.

> **ಪ್ರವಾಸೋದ್ಯಮ, ಲೋಕೋಪಯೋಗಿ, ಸಾರಿಗೆ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಅಭಿವೃದ್ಧಿ ಕೆಲಸವಾಗುತ್ತಿಲ್ಲ. ಅನುದಾನದ ಕೊರತೆ ನಡುವೆ ಗ್ರಾಮ ಪಂಚಾಯಿತಿಯೇ ಕೆಲಸ ನಿರ್ವಹಿಸಬೇಕಾಗಿದೆ. ಪಟ್ಟಣದ ಸಂಪರ್ಕ ರಸ್ತೆಗಳ ಅಭಿವೃದ್ಧಿ ಯಾಗಬೇಕು. ಮೈಸೂರು, ಬೆಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು ಕಡೆಯಿಂದ ಹಳೇಬೀಡು ಮಾರ್ಗವಾಗಿ ಬಸ್‌ಗಳು ಸಂಚರಿಸುವಂತಾಗಬೇಕು. ರೈಲ್ವೆ ಸೌಲಭ್ಯ ಆಗಬೇಕು'**
> **-ಮೋಹನ್ ಕುಮಾರ್, ಸದಸ್ಯ**

ಗೌತಮ್, ಸಹಾಯಕ ಸಂರಕ್ಷಣಾಧಿಕಾರಿಪಾರಂಪರಿಕ ತಾಣಗಳ ಪಟ್ಟಿಗೆ ಸೇರುವ ಮೊದಲೇ ಅಭಿವೃದ್ಧಿ ನಡೆದಿದೆ. ಹೆಚ್ಚುವರಿ ಸೌಲಭ್ಯಕ್ಕಾಗಿ ಅನುದಾನಕ್ಕೆ ಕಾಯುತ್ತಿದ್ದೇವೆ.

---

# ಬಾಗಿಲು ತೆರೆಯದ ನಮ್ಮ ಕ್ಲಿನಿಕ್

• **ಉದಯವಾಹಿನಿ, ಹಿರೇಕೆರೂರು**

ಜ್ವರ, ಕೆಮ್ಮು, ನೆಗಡಿ ಹಾಗೂ ಇತರೆ ಸಣ್ಣ-ಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವ ಉದ್ದೇಶದಿಂದ ಪಟ್ಟಣದಲ್ಲಿ ಎಂಟು ತಿಂಗಳ ಹಿಂದೆ ಸ್ಥಾಪಿಸಿರುವ 'ನಮ್ಮ ಕ್ಲಿನಿಕ್' ಇದುವರೆಗೂ ಬಾಗಿಲು ತೆರೆದಿಲ್ಲ. ವೈದ್ಯ ನೇಮಕಾತಿ ವಿಳಂಬವಾಗಿದ್ದರಿಂದ ನಮ್ಮ ಕ್ಲಿನಿಕ್ ಉದ್ಘಾಟನೆಯಾಗದೇ ಪಾಳು ಬಿದ್ದಿದೆ.

ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಮೇಲಿನ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ರಾಷ್ಟ್ರೀಯ ಆರೋಗ್ಯ ಯೋಜನೆ ಅಡಿ ನಮ್ಮ ಕ್ಲಿನಿಕ್ ಸ್ಥಾಪಿಸಲಾಗಿದೆ.

ಜನರಿಗೆ ಮಾತ್ರ ಸೇವೆ ಲಭ್ಯವಾಗುತ್ತಿಲ್ಲ.ಪಟ್ಟಣದ ಆಜಾದ್ ನಗರದಲ್ಲಿರುವ ಕಟ್ಟಡವೊಂದಕ್ಕೆ ಯೋಜನೆಯ ಬಣ್ಣ, ಘೋಷಣೆಗಳನ್ನು ಹಚ್ಚಿ ನಮ್ ಕ್ಲಿನಿಕ್ ಸ್ಥಾಪಿಸಲಾಗಿದೆ. ಈ ಕಟ್ಟಡಕ್ಕೆ ಪ್ರತಿ ತಿಂಗಳು 10 ಸಾವಿರ ಬಾಡಿಗೆ ಸಹ ನೀಡಲಾಗುತ್ತಿದೆ.

ಆದರೆ, ಕಟ್ಟಡ ಮಾತ್ರ ಬಳಕೆಯಾಗುತ್ತಿಲ್ಲವೆಂದು ಸ್ಥಳೀಯರು ದೂರಿದರು. ನಮ್ಮ ಕ್ಲಿನಿಕ್‌ನಲ್ಲಿ ವೈದ್ಯಕೀಯ ಅಧಿಕಾರಿ, ಶುಶ್ರೂಷಕಿ, ಪ್ರಯೋಗಾಲಯ ತಂತ್ರಜ್ಞ ಹಾಗೂ 'ಡಿ' ಗ್ರೂಪ್ ನೌಕರ ಕಾರ್ಯನಿರ್ವಹಿಸಬೇಕೆಂಬ ನಿಯಮವಿದೆ. ಆದರೆ, ಆಜಾದ್ ನಗರದಲ್ಲಿರುವ ನಮ್ಮ ಕ್ಲಿನಿಕ್‌ಗೆ ವೈದ್ಯರೇ ಇಲ್ಲ. ಕೆಲ ಸಿಬ್ಬಂದಿ ಮಾತ್ರ ಕೆಲಸಕ್ಕೆ ನಿಯೋಜನೆಗೊಂಡಿದ್ದು, ವೈದ್ಯರಿಲ್ಲದಿದ್ದರಿಂದ ಅವರು ಸಹ ಕ್ಲಿನಿಕ್‌ನತ್ತ ಮುಖ ಮಾಡುತ್ತಿಲ್ಲ.

'ನಮ್ಮ ಕ್ಲಿನಿಕ್ ಸಿದ್ಧವಾದರೂ ಬಾಗಿಲು ತೆರೆಯುತ್ತಿಲ್ಲ. ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ವಿಷಯ ತಿಳಿಸಿದರೂ ಪ್ರಯೋಜನವಾಗುತ್ತಿಲ್ಲ. ವೈದ್ಯರಿಲ್ಲವೆಂಬ ಕಾರಣ ನೀಡಿ ನಮ್ಮ ಕ್ಲಿನಿಕ್ ಉದ್ಘಾಟನೆ ಮಾಡುತ್ತಿಲ್ಲ.

ಇದರಿಂದಾಗಿ ನಮ್ಮಂಥ ಬಡವರಿಗೆ ತೊಂದರೆ ಆಗುತ್ತಿದೆ. ಕೂಡಲೇ ನಮ್ಮ ಕ್ಲಿನಿಕ್ ತೆರೆಯಲು ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯ ಮುನ್ನಾ ಕುಪ್ಪೇಲೂರು ಆಗ್ರಹಿಸಿದರು.

ಜಾಹೀರಾತು ನೀಡಿ ದರೂ ಬಾರದ ವೈದ್ಯರು ಹಿರೇಕೆರೂರು ಆಜಾದ್ ನಗರದಲ್ಲಿರವ ನಮ್ಮ ಕ್ಲಿನಿಕ್‌ಗೆ ಎಂಬಿಬಿಎಸ್ ವೈದ್ಯರ ಅಗತ್ಯವಿದೆ ಎಂದರು.

---

# ಉರಗ ರಕ್ಷಕರಿಗಿಲ್ಲ ವೃತ್ತಿ ಭದ್ರತೆ

• **ಉದಯವಾಹಿನಿ, ಮಂಗಳೂರು**

ವಸತಿ ಪ್ರದೇಶ, ಸಾರ್ವಜನಿಕರ ಸ್ಥಳಗಳಲ್ಲಿ ಹಾವು ಬಂದಾಗ ಬರುವ ಕರೆಗಳಿಗೆ ಸ್ಪಂದಿಸಿ ತಕ್ಷಣ ಆ ಪ್ರದೇಶಕ್ಕೆ ಧಾವಿಸಿ ಹಾವನ್ನು ರಕ್ಷಿಸುವ ಜೊತೆಗೆ ಜನರಲ್ಲಿ ನಿರಾಳ ಭಾವ ಮೂಡಿಸುವ ಉರಗ ರಕ್ಷಕರಿಗೆ ವೃತ್ತಿ ಭದ್ರತೆ ಇಲ್ಲದಾಗಿದೆ. ಬಿಬಿಎಂಪಿ ಪ್ರತ್ಯೇಕ ಅರಣ್ಯ ಘಟಕವಿದ್ದು, ಇಲ್ಲಿ ನೇಮಕಗೊಂಡಿರುವ ಉರಗ ರಕ್ಷಕರಿಗೆ ಮಾಸಿಕ ಗೌರವಧನ ಪಾವತಿಯಾಗುತ್ತದೆ. ಬೆಂಗಳೂರು ಹೊರತುಪಡಿಸಿದರೆ ರಾಜ್ಯದ ಇನ್ನುಳಿದ ಸ್ಥಳೀಯ ಸಂಸ್ಥೆಗಳಲ್ಲಿ ಈ ಸೌಲಭ್ಯ ಇನ್ನೂ ಅನುಷ್ಠಾನಗೊಂಡಿಲ್ಲ, ಉರಗ ರಕ್ಷಕರು ಸ್ವಂತ ವೆಚ್ಚದಲ್ಲಿ ಸ್ಥಳಕ್ಕೆ ತೆರಳಿ ಹಾವನ್ನು ಹಿಡಿದು ಕಾಡಿಗೆ ಬಿಡಬೇಕು ಅಥವಾ ಜನರು ವಾಹನದ ಇಂಧನ ವೆಚ್ಚ ನೀಡಿದರೆ ಅದಕ್ಕೆ ತೃಪ್ತಿಪಟ್ಟುಕೊಳ್ಳಬೇಕು. ಜನರ ಕರೆಗಳಿಗೆ ಓಗೊಡುವ ತಮಗೆ ಅರಣ್ಯ ಇಲಾಖೆಯಿಂದ ಅಧಿಕೃತ ಗುರುತಿನ ಚೀಟಿ ನೀಡುವ ವ್ಯವಸ್ಥೆ ಸಹ ಇಲ್ಲ ಎಂಬುದು ಉರಗ ರಕ್ಷಕರ ಅಳಲು.

ಉರಗ ರಕ್ಷಕರಿಗೆ ಯಾವುದೇ ಆರ್ಥಿಕ ಭದ್ರತೆ ಇಲ್ಲ. ಹಾವು ಹಿಡಿಯುವ ಸಲಕರಣೆಗಳನ್ನು ಸ್ವಂತ ವೆಚ್ಚದಲ್ಲಿ ಖರೀದಿಸಬೇಕು. ರಕ್ಷಣೆಯ ಸಂದರ್ಭದಲ್ಲಿ ಅಕಸ್ಮಾತ್ ಹಾವು ಕಚ್ಚಿದರೆ, ಚಿಕಿತ್ಸೆಗೆ 1.5 ಲಕ್ಷಕ್ಕೂ ಅಧಿಕ ವೆಚ್ಚವಾಗುತ್ತದೆ. ಅದನ್ನು ನಾವೇ ಭರಿಸಬೇಕು. ಅರಣ್ಯ ಇಲಾಖೆಯಿಂದ ಪ್ರಮಾಣೀಕೃತ ಗುರುತಿನ ಕಾರ್ಡ್ ದೊರೆಯುತ್ತಿಲ್ಲ. 'ರಾಜ್ಯದ ಪ್ರತಿ ಅರಣ್ಯ ವಿಭಾಗ ಅಥವಾ ಸ್ಥಳೀಯ ಸಂಸ್ಥೆ ಮೂಲಕ ಉರಗ ರಕ್ಷಕರಿಗೆ ಗುರುತಿನ ಚೀಟಿ ನೀಡಿ, ಕನಿಷ್ಠ ಗೌರವಧನ ನೀಡಬೇಕು, ಜೊತೆಗೆ ವಿಮೆ ಸೌಲಭ್ಯ ವಿಸ್ತರಿಸಬೇಕು. ಇದರಿಂದ ಹಾವು ಸಂರಕ್ಷಣೆ ನೆಪದಲ್ಲಿ ಕೆಲವರು ಬೇಕಾಬಿಟ್ಟಿ ಹಣ ಪಡೆಯುವ ದಂಧೆ ನಿಯಂತ್ರಣ ಸಾಧ್ಯವಾಗುತ್ತದೆ. ಹಾವು ಸಹಿತ ಗಾಯಗೊಂಡ ವನ್ಯಪ್ರಾಣಿಗಳಿಗೆ ಚಿಕಿತ್ಸೆ ನೀಡಲು ಸಂಚಾರಿ ಚಿಕಿತ್ಸಾಲಯ ಆರಂಭಿಸಬೇಕೆನ್ನುವ ನಮ್ಮ ಬಹುವರ್ಷಗಳ ಬೇಡಿಕೆಯನ್ನು ಸರ್ಕಾರ ಪರಿಗಣಿಸಬೇಕು' ಎಂದು ಒತ್ತಾಯಿಸಿದರು.

---

# ಹುಲಿವೇಷ ಬರೆಯುವ ಕಲಾವಿದರು

• **ಉದಯವಾಹಿನಿ, ಲಕ್ಷ್ಮೇಶ್ವರ**


ಉದಯವಾಹಿನಿ ಚಿತ್ರ

ಹಿಂದೂ-ಮುಸ್ಲಿಂ ಭಾವೈಕ್ಯದ ಸಂಕೇತವಾದ ಮೊಹರಂ ಹಬ್ಬದಲ್ಲಿ ಜನರು ದೇವರಿಗೆ (ಪಂಜಾ) ಹರಕೆ ಹೊತ್ತು ಕೊಳ್ಳುವುದು ಹಿಂದಿನಿಂದ ಬಂದ ಸಂಪ್ರದಾಯ. ಸಂತಾನ ಭಾಗ್ಯ, ಕುಟುಂಬದ ಆರೋಗ್ಯ ಸಮಸ್ಯೆ ಪರಿಹಾರ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಜನ ದೇವರ ಮೊರೆ ಹೋಗಿ, ಹರಕೆ ಹೋರುತ್ತಾರೆ. ಹುಲಿ ವೇಷ ಬರೆಸಿಕೊಳ್ಳುವುದು ಈ ಭಾಗದ ಜನ ನಂಬಿದ ಹರಕೆಗಳಲ್ಲಿ ಒಂದು. ಹುಲಿ ವೇಷ ಧರಿಸಿ ತಮ್ಮ ಮಗ ಹುಲಿಯ ಹಾಗೆ ಆಗಲಿ, ಆರೋಗ್ಯವಂತನಾಗಲಿ, ಉಜ್ವಲ ಭವಿಷ್ಯ ಪಡೆಯಲಿ ಎಂದು ಬಯಸಿ 5, 11, 21 ವರ್ಷ ಅಥವಾ ಜೀವಿತಾವಧಿಯಿರುವವರೆಗೂ ಹುಲಿವೇಷ ಬರೆಸುತ್ತೇವೆ ಎಂದು ತಂದೆ- ತಾಯಿಯರು ಹರಕೆ ಹೊರುತ್ತಾರೆ.

ಹುಲಿವೇಷ ಬರೆಯುವುದು ಒಂದು ವಿಶಿಷ್ಠ ಕಲೆ. ಇದನ್ನು ಲಕ್ಷ್ಮೇಶ್ವರರ ಚಿತ್ರಗಾರ ಕುಟುಂಬ ಕಳೆದ ನಾಲ್ಕು ತಲೆಮಾರುಗಳಿಂದ ಭಕ್ತಿ, ಶ್ರದ್ಧೆ, ನಂಬಿಕೆಯಿಂದ ಸಾಂಪ್ರದಾಯಕವಾಗಿ ಮಾಡಿಕೊಂಡು ಬರುತ್ತಿದೆ. ಕಿನ್ನಾಳ ಕಲೆಯನ್ನು ಕರಗತ ಮಾಡಿಕೊಂಡು ಇವರದ್ದು, ಈ ಭಾಗದಲ್ಲಿ ಹುಲಿ ವೇಷ ಬರೆಯುವ ಏಕೈಕ ಕುಟುಂಬ.

ಈ ಚಿತ್ರಗಾರ ಕುಟುಂಬ ತಮ್ಮದೇ ಶೈಲಿಯಲ್ಲಿ ಸಾಂಪ್ರದಾಯದ ಬಣ್ಣಗಳನ್ನು ಬಳಸಿ ಅಲಂಕಾರಿಕ ಚಿತ್ರಗಳನ್ನು, ಸುಳಿವುಗಳನ್ನು ಹಳದಿ, ಕೆಂಪು, ಹಸಿರು, ಕರಿ ಮುಖ್ಯ ಬಣ್ಣಗಳಾಗಿ ಬಳಸಿಕೊಂಡು ಹುಲಿವೇಷ ಬರೆಯುವುದರಲ್ಲಿ ಪರಿಣತರು. ಹುಲಿ ವೇಷಕ್ಕೆ ಹಳದಿ ಬಣ್ಣದ ಮೇಲೆ ನವಿಲಿನ ಚಿತ್ರ, ಹುಲಿಯ ಚಿತ್ರ, ಕುದುರೆಯ ಚಿತ್ರ, ಹಸ್ತ, ದೇವರ ಛತ್ರಿ, ಮೀನು, ಹಾವಿನ ಚಿತ್ರಗಳನ್ನು ಸೊಗಸಾಗಿ, ಆಕರ್ಷಕವಾಗಿ ಬಿಡಿಸುವಲ್ಲಿ ನೈಪುಣ್ಯತೆ ಪಡೆದಿದ್ದಾರೆ. ಕೊನೆಯಲ್ಲಿ ವೇಷಕ್ಕೆ ದೃಷ್ಟಿಯಾಗಬಾರದು ಎಂಬ ಉದ್ದೇಶದಿಂದ ಕೈಗೆ ನವಿಲುಗರಿ ಕಟ್ಟಲಾಗುತ್ತದೆ.

ಈ ಪ್ರತಿ ಚಿತ್ರಗಳೂ ಕೆಲ ಸಂದೇಶಗಳನ್ನು ಸಾರುತ್ತವೆ. ನವಿಲಿನ ಚಿತ್ರ ವೇಷಧಾರಿಯ ಕನಸುಗಳು ನನಸಾಗಲಿ, ಗರಿಗೆದರಲಿ ಎಂದು ಸೂಚಿಸಿದರೆ, ಹುಲಿಯ ಚಿತ್ರ ಹುಲಿಯ ಹಾಗೆ ಘರ್ಜಿಸಲಿ, ಬಲಶಾಲಿಯಾಗಲಿ ಎಂದು ಸಾರುತ್ತದೆ. ಅದರಂತೆ ಏಕ ಚಿತ್ತದಿಂದ ವೇಗವಾಗಿ ಬದುಕು ಯಶಸ್ವಿನ ಕಡೆಗೆ ಸಾಗಲೆಂಬುದನ್ನು ಕುದುರೆಯ ಚಿತ್ರ ಸಾರುತ್ತದೆ. ಇನ್ನು ಹಸ್ತ ಚಿತ್ರವು ದೇವರ ಆರ್ಶೀವಾದವು ಸದಾ ವೇಷಗಾರನ ಮೇಲಿರಲಿ ಎಂದು ಬಿಂಬಿಸಿದರೆ, ಮೀನಿನ ಚಿತ್ರ ಸದಾ ಚಲನಶೀಲನಾಗಿರಲಿ ಎಂದು ಸಾರುತ್ತದೆ. ಹಾವಿನ ಚಿತ್ರ ಯಾವುದೇ ಸೇಡು, ಕೆಡಕುಗಳು ತಾಗದಿರಲೆಂಬುದನ್ನು ಸಾರುತ್ತದೆ. 'ನಾಲ್ಕು ತಲೆಮಾರಿನಿಂದ ನಮ್ಮ ಕುಟುಂಬ ಹುಲಿವೇಷ ಬರೆಯುವುದನ್ನು ರೂಢಿಸಿಕೊಂಡು ಬಂದಿದೆ. ನಮ್ಮ ಹಿರಿಯರು ಅನುಸರಿಸಿಕೊಂಡು ಬಂದ ಪದ್ಧತಿಯಂತೆಯೇ ಈಗಲೂ ಸಂಪ್ರದಾಯಕ ಬಣ್ಣಗಳನ್ನು ಬಳಸಿ ಹುಲಿವೇಷ ಬರೆಯುತ್ತಿದ್ದೇವೆ. ಆ ಮೂಲಕ ದೇವರು ಕೊಟ್ಟ ಕಲೆಯನ್ನು ಉಪಯೋಗಿಸುತ್ತಿದ್ದೇವೆ' ಎಂದು ಹುಲಿವೇಷ ಕಲಾವಿದ ಪ್ರವೀಣ ಗಾಯಕರ ಹೇಳಿದರು.

> **ಹೀಗೆ ಹುಲಿವೇಷ ಬರೆಯುವುದರ ಹಿಂದೆ ದೊಡ್ಡ ಸಂಪ್ರದಾಯ, ಪರಂಪರೆ, ಉದ್ದೇಶ ಇದೆ. ಈ ವರ್ಷವೂ ಕೂಡ ಹರಕೆ ಹೊತ್ತ ನೂರಾರು ಜನರು ಹುಲಿವೇಷ ಬರೆಸಿಕೊಳ್ಳಲು ಗಾಯಕರ ಮನೆಗೆ ಧಾವಿಸುತ್ತಿದ್ದಾರೆ. ಹುಲಿವೇಷದಲ್ಲಿ ಕಿನ್ನಾಳ ಕಲೆ ತುಂಬಿಕೊಂಡಿದೆ. ಇದನ್ನು ಬರೆಯಲು ಪ್ರಾವೀಣ್ಯತೆ ಮತ್ತು ತನ್ಮಯತೆ ಅಗತ್ಯ**
> **-ನಾಗೇಶ, ಚಿತ್ರಗಾರ ಕಲಾವಿದ**

---

# ರಾಯಚೂರು ಏಮ್ಸ್ ಸ್ಥಾಪಿಸುವಂತೆ ಪ್ರತಿಭಟನೆ

## ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವುದಾಗಿ ಘೋಷಿಸುವಂತೆ' ಆಗ್ರಹಿಸಿ ಇಂದಿಗೂ ಪ್ರತಿಭಟನಾ ಮೆರವಣಿಗೆ ಧರಣಿ ಸತ್ಯಾಗ್ರಹ

• **ಉದಯವಾಹಿನಿ, ಸಿಂಧನೂರು**



ಉದಯವಾಹಿನಿ ಚಿತ್ರ

**ಧಾರವಾಡ ಜಿಲ್ಲೆ ಮಾತ್ರವೇ?**

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ರಾಯಚೂರಿನಲ್ಲಿಯೇ ಸ್ಥಾಪಿಸುವಂತೆ ಒತ್ತಾಯಿಸಿ ಸಿಂಧನೂರು ತಾಲ್ಲೂಕ ಸಮಿತಿ ವತಿಯಿಂದ ನಗರದ ಪ್ರವಾಸಿ ಮಂದಿರದಿಂದ ಜಾಥಾ ಮೂಲಕ ಘೋಷಣೆ ಕೂಗುತ್ತ ಗಾಂಧಿ ವೃತ್ತದಲ್ಲಿ ಪ್ರಾಸ್ಟೇಟ್ ನಡೆಸಿದರು ನಂತರ ತಹಶೀಲ್ದಾರ್ ಕಛೇರಿಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು

ನಂತರ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಏಮ್ಸ್ ಸಮಿತಿ ತಾಲ್ಲೂಕು ಸಂಚಾಲಕ ಡಿ ಎಚ್ ಕಂಬಳಿ ಅವರು ಏಮ್ಸ್ ಸ್ಥಾಪಿಸುವಂತೆ ರಾಯಚೂರಿನಲ್ಲಿ ನಡೆಸುತ್ತಿರುವ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಇಂದಿಗೆ 796ನೇ ದಿನಕ್ಕೆ ಮುಂದುವರೆದಿದ್ದು, ತಮ್ಮ ಸರಕಾರದ ವಿಳಂಬತನ, ಕಲ್ಯಾಣ ಕರ್ನಾಟಕ ಪ್ರದೇಶದ ವಿರೋಧಿ ನೀತಿಯನ್ನು ಖಂಡಿಸುತ್ತಾ, ತಾವು ಈ ನಮ್ಮ ಸುದೀರ್ಘ ಹೋರಾಟಕ್ಕೆ ಸ್ಪಂದಿಸಿ, ಕೂಡಲೇ ಅಧಿಸೂಚನೆ ಪ್ರಕಟಿಸಿ ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸುವುದಾ ಘೋಷಿಸುವಂತೆ' ಆಗ್ರಹಿಸಿ ಇಂದಿಗೂ ಪ್ರತಿಭಟನಾ ಮೆರವಣಿಗೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಉತ್ತರ ಕರ್ನಾಟಕವೆಂದರೆ ಕೇವಲ ಧಾರವಾಡ ಜಿಲ್ಲೆ ಮಾತ್ರವೇ? ಉತ್ತರ ಕರ್ನಾಟಕ ಹೆಸರಿನಲ್ಲಿ ಧಾರವಾಡ ಜಿಲ್ಲೆಯ ಪ್ರಬಲ ರಾಜಕೀಯ ಶಕ್ತಿಗಳು ನ ಮ್ಮ ಕಲ್ಯಾಣ ಕರ್ನಾಟಕ ಪ್ರದೇಶದ ಮೇಲೆ ನಿರಂತರ ದಬ್ಬಾಳಿಕೆ ನಡೆಸ ಇಲ್ಲಿಯವರೆಗೆ ಹುಬ್ಬಳ್ಳಿ-ಧಾರವಾಡದಲ್ಲಿ 8 ವಿಶ್ವವಿದ್ಯಾಲಯಗಳು, ಕೇಂದ್ರ ಸರ್ಕಾರದ ಬೃ ಹತ್ ಯೋಜನೆಗಳಾದ ಐಐಟಿ, ಟೆಕ್ಸ್‌ಟೈಲ್ ಪಾರ್ಕ್, ವಿಧಿವಿಜ್ಞಾನಗಳ ವಿಶ್ವವಿದ್ಯಾಲಯ ಅಂಥಹ ಬಹು ದೊಡ್ಡ ಸಂಸ್ಥೆಗಳು ಮತ್ತು ಇತರೆ ಸರ್ಕಾರದ ಎಲ್ಲಾ ಯೋಜನೆಗಳು ಗರಿಷ್ಠ ಮಟ್ಟದಲ್ಲಿ ಸ್ಥಾಪನೆಗೊಂಡಿವೆ. ಅಭಿವೃದ್ಧಿ ಸೂಚ್ಯಂಕದಲ್ಲಿ ಎತ್ತರದಲ್ಲಿದೆ.

ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸೂಚ್ಯಂಕ ಕನಿಷ್ಠ ಮಟ್ಟದಲ್ಲಿದೆ. ಎಲ್ಲಾ ಬೃಹತ್ ಯೋಜನೆಗಳು ಹುಬ್ಬಳ್ಳಿ-ಧಾರ ಮಾನ ತೆರೆದುಕೊಂಡು ಹೋಗದೆ ನಮ್ಮ ಕಲಾಣ ಕರ್ನಾಟಕದ ಪರಿಸ್ಥಿತಿ ಏನಾಗಬೇಕು? ನಮ್ಮದು ಹೆಸರಿಗಷ್ಟೆ -ಕಲ್ಯಾಣ ಕರ್ನಾಟಕವೇ..? ಹೀಗಾದರೆ ಪ್ರಾದೇಶಿಕ ಅಸಮಾನತೋಲನೆ ನಿವಾರಣೆ ಹೇಗೆ ಸಾಧ್ಯವಾಗುತ್ತದೆ ಎಂದು ತಾಲ್ಲೂಕು ತಹಶೀಲ್ದಾರ್ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಲಕ್ಷ್ಮಣ ಭೋವಿ. ಚಿಟ್ಟಿಬಾಬು. ಕರಿಯಗೌಡ ಮೌನೇಶ್ ದೋರೆ ಬಸವರಾಜ ಬಾದರ್ಲಿ. ಸುರೇಶ್ ಗೊಬ್ಬರ ಕಲ್. ದೌಲಸಾಬ ದೊಡ್ಡ ಮನೆ, ಸನ್ ರೈಸ್ ಕಾಲೇಜು ಪ್ರಾಚಾರ್ಯ ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಘೋಷಣೆಗೆ ಮಾತ್ರ ಸೀಮಿತ

**ಹೈದ್ರಾಬಾದ್ ಕರ್ನಾಟಕ ಪ್ರದೇಶ ಇಡೀ ಕರ್ನಾಟಕ ರಾಜ್ಯದಲ್ಲಿಯೇ ತೀರಾ ಹಿಂದುಳಿದಿದೆ ಎನ್ನುವ ಸುದೀರ್ಘ ಹೋರಾಟದ ಫಲವಾಗಿ ಕೇಂದ್ರ ಸರ್ಕಾರ 371(ಎ) ಕಲಂಗೆ ತಿದ್ದುಪಡಿ ತಂದು ವಿಶೇಷ ಸ್ಥಾನಮಾನ ಘೋಷಣೆ ಮಾಡಿದೆ. ಕೇವಲ ಘೋಷಣೆಗಳಿಗೆ ಮಾತ್ರ ಸೀಮಿತವಾಗಿದ್ದು,ನಮ್ಮ ಪ್ರದೇಶದ ಸರ್ವಾಂಗೀಣ ಆಭಿತ -ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪ್ರಾಮಾಣಿಕ ಅನುಷ್ಠಾನದಲ್ಲಿ ಬದ್ಧತೆಯನ್ನು ತೋರದೇ ಇರುವುದು ಖಂಡನೀಯ.**

---

## ಮಿನಿ ನ್ಯೂಸ್

### ನಾಗರಾಳ ಜಲಾಶಯ ಭರ್ತಿ ಸಾರ್ವಜನಿಕರು ಎಚ್ಚರ ವಹಿಸಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನಲ್ಲಿ ಸತತವಾಗಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ನಾಗರಾಳ ಜಲಾಶಯವು ಭರ್ತಿಯಾಗಿದ್ದು ಯಾವುದೇ ಸಂದರ್ಭದಲ್ಲಿ ನೀರು ಮುಲ್ಲಾಮಾರಿ ನದಿಗೆ ಬಿಡಲಾಗುವುದು ನದಿಯ ದಂಡೆಯಲ್ಲಿರುವ ಗ್ರಾಮಗಳ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು, ಯಾರು ಕೂಡ ನದಿಯ ದಂಡೆಯ ಕಡೆ ಹೋಗದಂತೆ ನಾಗರಾಳ ಜಲಾಶಯ ಸೇಕ್ಷನ್ ಆಫೀಸರ್ ವಿನಾಯಕ ಚವ್ಹಾಣ ತಿಳಿಸಿದ್ದಾರೆ. ತಾಲ್ಲೂಕಿನ ನಾಗರಾಳ ಜಲಾಶಯವು ಭರ್ತಿಯಾಗಿರುವುದರಿಂದ ರಾತ್ರಿ 108ಕ್ಯೂಸೇಕ್ ನೀರು ಮುಲ್ಲಾಮಾರಿ ನದಿಗೆ ಬಿಡಲಾಗಿದೆ,ಜಲಾಶಯದಲ್ಲಿ ಭರ್ತಿಯಾಗಲು 491.00ಮೀಟರ್ ಹೊಂದಿದ್ದು ಈಗಾಗಲೇ 490.03ಮೀಟರ್ ನೀರು ಸಂಗ್ರವಾಗಿದ್ದು,ಜಲಾಶಯ ಒಳಹರಿವು 150ಕ್ಯೂಸೇಕ್ ಹೊಂದಿದ್ದು ಯಾವುದೇ ಸಂದರ್ಭದಲ್ಲಿ ನೀರು ಮುಲ್ಲಾಮಾರಿ ನದಿಗೆ ಬಿಡಲಾಗುವುದು ಸಾರ್ವಜನಿಕರು ಎಚ್ಚರಿಕೆ ವಹಿಸಿ ನದಿಯ ದಂಡೆಯ ಹತ್ತಿರ ಹೋಗದಂತೆ ಕೋರಿದ್ದಾರೆ.

**ಮಳೆಯ ಪ್ರಮಾಣ:** ಚಿಂಚೋಳಿ 27.6ಮಿಮೀ,ನಿಡಗುಂದಾ 23.2ಮಿಮೀ, ಕುಂಚಾವರಂ ಮಳೆಯಾಗಿಲ್ಲ, ಚಿಮ್ಮನಚೋಡ 23.2ಮಿಮೀ, ಐನಾಪೂರ 15.6ಮಿಮೀ, ಸುಲೇಪೇಟ 37.6ಮಿಮೀ, ವಲಯವಾರು ಮಳೆಯಾಗಿದೆ.

### ಮಳೆ ಪ್ರಮಾಣ ಹೆಚ್ಚಳ ಬೆಳೆಗಳಲ್ಲಿರುವ ನೀರು ಹೊರಹಾಕಲು ರೈತರಿಗೆ ಸಲಹೆ

• **ಉದಯವಾಹಿನಿ, ಸೇಡಂ**

ತಾಲ್ಲೂಕಿನ ರೈತರ ಜಮೀನುಗಳಲ್ಲಿ ಬೆಳೆಗಳು ಚೆನ್ನಾಗಿದ್ದು ಇಂದಿನಿಂದ 22ರವರೆಗೆ ಮುಂಗಾರು ಮಳೆ ಪ್ರಮಾಣ ಹೆಚ್ಚಳವಾಗುತ್ತಿದ್ದು ರೈತರು ತಮ್ಮ ಜಮೀನುಗಳ ಬೆಳೆಗಳಲ್ಲಿರುವ ನಿಂತಿರುವ ನೀರು ಬಸ್ಸಿಗಾಲಿಗೆ ಮೂಲಕ ಹೊರ ಹೋಗಲು ರೈತರು ಮುಂದಾಗಬೇಕು ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ವೈ ಎಲ್ ಹಂಪಣ್ಣ ಅವರು ರೈತರಿಗೆ ಸಲಹೆ ನೀಡಿದ್ದಾರೆ.

### ಗುಂಡಿಮಯ ರಸ್ತೆ ಸಂಚಾರಕ್ಕೆ ಸಂಚಕಾರ

• **ಉದಯವಾಹಿನಿ, ಯಾದಗಿರಿ**

ನಗರ ಸೇರಿದಂತೆ ಜಿಲ್ಲೆಯಲ್ಲಿ ಈಚೆಗೆ ಸುರಿದ ಮಳೆಗೆ ಜಿಲ್ಲಾ ಮುಖ್ಯ ರಸ್ತೆ, ಗ್ರಾಮೀಣ ರಸ್ತೆಗಳು ಗುಂಡಿ ಬಿದ್ದು, ಸಂಚಾರಕ್ಕೆ ಸಂಚಕಾರ ತಂದಿವೆ. ಮೇ, ಜೂನ್ ತಿಂಗಳಲ್ಲಿ ಸುರಿದ ಮಳೆಗೆ ಗ್ರಾಮೀಣ ರಸ್ತೆಗಳು ಟಾರ್ ಕಿತ್ತು ಗುಂಡಿಗಳು ಬಿದ್ದು, ಅಲ್ಪ ಮಳೆಯಾದರೂ ನೀರು ನಿಂತು ಎಷ್ಟು ಆಳ ಇವೆ ಎನ್ನುವಷ್ಟರ ಮಟ್ಟಿಗೆ ಸವಾರರು ಭಯಪಡಿಸುತ್ತಿವೆ. ಟಂಟಂ, ಬೈಕ್ ಸೇರಿದಂತೆ ಇತರೆ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡುವಂತೆ ಆಗಿದೆ. ಹೆದ್ದಾರಿಗೆ ಹೊಂದಿಕೊಂಡ ರಸ್ತೆಗಳಿಗೆ ಮಣ್ಣು ಹಾಕಿದ್ದಲ್ಲದೆ ಡಾಂಬರೀಕರಣ ಮಾಡಿ ತೇಪೆ ಕೆಲಸವಾಗಿದೆ. ಜಿಲ್ಲೆಯಲ್ಲಿ 13 ರಾಜ್ಯ ಹೆದ್ದಾರಿ ರಸ್ತೆಗಳಿದ್ದು, 758.04 ಕಿಮೀ ವ್ಯಾಪ್ತಿ ಇದೆ. 1,259.99 ಗ್ರಾಮೀಣ ಭಾಗದ ಮುಖ್ಯ ರಸ್ತೆಗಳಿವೆ. ಇವುಗಳಲ್ಲಿ ಬಹುತೇಕ ಕಳೆದ ಒಂದು ವರ್ಷದಿಂದ ರಸ್ತೆಗಳು ದುರಸ್ತಿಯಾಗಿಲ್ಲ, ಹೀಗಾಗಿ ಮಳೆಗಾಲದಲ್ಲಿ ಮತ್ತಷ್ಟು ಹದಗೆಟ್ಟಿವೆ ಎನ್ನುವ ಆರೋಪಗಳು ಗ್ರಾಮೀಣ ಜನರಿಂದ ಕೇಳಿ ಬರುತ್ತಿವೆ. ಜಿಲ್ಲಾ ಕೇಂದ್ರದ ಸುತ್ತಲಿನ ಗುರುಸಣಗಿ, ನಾಯ್ಕಲ್, ಗಡ್ಡೆಸೂಗುರು, ಬದಲಾದ, ಬಂದಳ್ಳಿ, ವರ್ಕನಳ್ಳಿ, ಹತ್ತಿಕುಣಿ ರಸ್ತೆ, ಅಬ್ಬೆ ತುಮಕೂರು, ಮುದ್ನಾಳಗೆ ತೆರಳುವ ರಸ್ತೆ ಕೊರಕಲು ಬಿದ್ದಿವೆ. ರಸ್ತೆಯ ಒಂದು ಭಾಗದಿಂದ ಮತ್ತೊಂದು ಭಾಗದವರೆಗೆ ಗುಂಡಿಗಳು ಬಿದ್ದಿವೆ. ನಮ್ಮ ಗ್ರಾಮ ಭೀಮಾ ನದಿಗೆ ಹೊಂದಿಕೊಂಡಿದ್ದು, ಯಾದಗಿರಿ-ವಡಗೇರಾ ಮುಖ್ಯ ರಸ್ತೆಯಲ್ಲಿ ಮರಳು ತುಂಬಿದ ವಾಹನಗಳು ಅಕ್ರಮವಾಗಿ ಪ್ರವೇಶಿಸುತ್ತಿವೆ. ಇದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದಿದ್ದು, ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿವೆ' ಎಂದು ಬಬಲಾದ ನಿವಾಸಿ ರವಿ ಮುದಕನೋರ ಹೇಳುತ್ತಾರೆ.

### ಮುಸ್ಲಿಮರಿಲ್ಲದ ಗ್ರಾಮಗಳಲ್ಲಿ ಮೊಹರಂ ಸಂಭ್ರಮ

• **ಉದಯವಾಹಿನಿ, ಲಿಂಗಸುಗೂರು**

ಮೊಹರಂ ಮುಸ್ಲಿಮರ ಪವಿತ್ರ ಹಬ್ಬಗಳಲ್ಲಿ ಒಂದು ಆದರೆ, ತಾಲ್ಲೂಕಿನಲ್ಲಿ ಮುಸ್ಲಿಂ ಕುಟುಂಬಸ್ಥರೇ ಇಲ್ಲದ ಕುಪ್ಪಿಗುಡ್ಡ, ಹಾಲಭಾವಿ, ಜಲದುರ್ಗ ಸೇರಿದಂತೆ ಕೆಲವೆಡೆ ಹಿಂದೂಗಳೇ ಮೊಹರಂ ಆಚರಣೆ ಮಾಡುತ್ತಿದ್ದಾರೆ. ಇದು ಭಾವೈಕ್ಯತೆಗೆ ಸಾಕ್ಷಿಯಾಗಿದೆ. ನೂರಕ್ಕೆ ನೂರಷ್ಟು ಹಿಂದುಗಳೇ ವಾಸಿಸುವ ಕುಪ್ಪಿಗುಡ್ಡ, ಹಾಲಭಾವಿ, ಜಲದುರ್ಗ ಗ್ರಾಮಗಳ ಜನರು ದರ್ಗಾ ನಿರ್ಮಿಸಿ ಮೊಹರಂ ಆಚರಣೆಗೆ ಬೇಕಾಗುವ ಅಲಾಯಿ ದೇವರುಗಳನ್ನು ಸಿದ್ಧಪಡಿಸುತ್ತಾರೆ. ಕುರಾನ್ ಶ್ಲೋಕ್ ಪಠಣ ಮಾಡುವುದಕ್ಕೆ ಮಾತ್ರ ಅಕ್ಕಪಕ್ಕ ಗ್ರಾಮದ ಮುಸ್ಲಿಂ ಕುಟುಂಬಸ್ಥರನ್ನು ಆಹ್ವಾನಿಸುತ್ತಾರೆ. ದೇವರು ಹಿಡಿಯುವುದು, ದಟ್ಟೆ ಉಡಿಸುವ ಇತರೆ ಧಾರ್ಮಿಕ ಕಾರ್ಯಗಳನ್ನೂ ಹಿಂದುಗಳೇ ಆಚರಣೆ ಮಾಡುತ್ತ ಬಂದಿದ್ದಾರೆ. ಅಮಾವಾಸ್ಯೆ ಆದ ತಕ್ಷಣ ಚಂದ್ರ ಕಾಣಿಸುತ್ತಿದ್ದಂತೆ ಗ್ರಾಮಸ್ಥರು ಅಲಾಯಿ ಕುಣಿ ಅಗೆದು, ಮಸೀದಿ(ದರ್ಗಾ) ಗಳಲ್ಲಿ ಇರುವ ಅಲಾಯಿ ದೇವರುಗಳ ಮೂರ್ತಿಗಳನ್ನು ಪೂಜೆ ಮಾಡುತ್ತಾರೆ. ಮೊಹರಂಗೆ ನೇಮಕಗೊಂಡ ಮುಸ್ಲಿಂ ಮೌಲ್ವಿ ಬಾರದೇ ಹೋದರೂ ಸಾಂಪ್ರದಾಯಿಕ ಆಚರಣೆಗಳನ್ನು ಚಾಚೂ ತಪ್ಪದೇ ಮಾಡುವುದು ಈ ಗ್ರಾಮಗಳ ವಿಶೇಷ.

### ಜೀವಕ್ಕೆ ಆಪತ್ತು ತಂದ ಕಬ್ಬಿಣದ ರಾಡ್

• **ಉದಯವಾಹಿನಿ, ಉಡುಪಿ**

ಅಂಬಲಪಾಡಿ ಗಾಂಧಿನಗರದ ರಮಾನಂದ ಶೆಟ್ಟಿ ಅವರ ಮನೆಯ ಮುಂಬಾಗಿಲು ಮತ್ತು ಹಿಂಬಾಗಿಲಿಗೆ ಚಿಲಕವಲ್ಲದೇ ಹೆಚ್ಚಿನ ಭದ್ರತೆಗಾಗಿ ಕಬ್ಬಿಣದ ರಾಡ್ ಅಳವಡಿಸಿ ಬೀಗ ಹಾಕಲಾಗಿತ್ತು. ಇದರಿಂದಾಗಿ ಬೆಂಕಿ ಅವಘಡದ ಸಂದರ್ಭದಲ್ಲಿ ಹೊರಗಿನವರಿಗೆ ಬಾಗಿಲು ಮುರಿಯಲು ಕಷ್ಟವಾಗಿತ್ತು.ಬೊಬ್ಬೆ ಕೇಳಿ ಅಕ್ಕ ಪಕ್ಕದ ಮನೆಯವರು ಸ್ಥಳಕ್ಕೆ ತಲುಪಿ ಬಾಗಿಲು ಮುರಿಯಲು ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ಬಳಿಕ ಅಗ್ನಿಶಾಮಕ ದಳದವರು ಕಷ್ಟಪಟ್ಟು ಬಾಗಿಲು ಮುರಿದಿದ್ದಾರೆ ಎಂದು ಸ್ಥಳೀಯರು ತಿಳಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಮಕ್ಕಳು ಮನೆಗಳಿಗೆ ಒಂದು ಆನಂದ ಮತ್ತು ಸಂತೋಷ ತರುತ್ತಾರೆ. ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು. ನಿಮ್ಮ ಕೆಲಸದ ಪರಿಸರ ಇಂದು ಒಳ್ಳೆಯದಕ್ಕೆ ಬದಲಾಯಿಸಬಹುದು.

**ವೃಷಭ** ನಿಮ್ಮ ಮಗುವಿನ ಒಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಆಮಂತ್ರಣ ಸಂತೋಷದ ಮೂಲವಾಗಬಹುದು. ಅವನು(ಳು) ನಿಮ್ಮ ನಿರೀಕ್ಷೆಗಳನ್ನು ಪೂರೈಸುವುದು ನಿಮ್ಮ ಕನಸನ್ನು ನನಸಾಗಿಸಬಹುದು.

**ಮಿಥುನ** ನಿಮಗೆ ಹತ್ತಿರವಿರುವ ಯಾರಾದರೂ ಅತ್ಯಂತ ಅನಿರೀಕ್ಷಿತ ಮನಸ್ಥಿತಿಯಲ್ಲಿರುತ್ತಾರೆ. ಇಂದು ನೀವು ಕುರುಡು ಪ್ರೀತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಯಾವುದೇ ಹೊಸ ಪಾಲುದಾರಿಕೆಗಳಿಗೆ ಸಹಿ ಹಾಕಬೇಡಿ.

**ಕರ್ಕಾಟಕ** ತೊಂದರೆಗಳ ಬಗ್ಗೆ ಚಿಂತಿಸುವ ಮತ್ತು ಅವುಗಳನ್ನು ದೊಡ್ಡದಾಗಿಸುವ ನಿಮ್ಮ ಸ್ವಭಾವ ನಿಮ್ಮ ನೈತಿಕತೆಯನ್ನು ದುರ್ಬಲಗೊಳಿಸಬಹುದು. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ.

**ಸಿಂಹ** ನಿಮ್ಮ ಜೀವನವನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ಕನ್ಯಾ** ನಿಮ್ಮ ಕಠಿಣ ಪದಗಳು ಶಾಂತಿ ಹಾಳು ಮಾಡಿ ನಿಮ್ಮ ಪ್ರಿಯತಮೆಯ ಜೊತೆಗಿನ ಮಧುರ ಸಂಬಂಧವನ್ನು ಹಾಳು ಮಾಡಬಹುದಾದ್ದರಿಂದ ನಿಮ್ಮ ಮಾತುಗಳನ್ನು ನಿಯಂತ್ರಿಸಲು ಪ್ರಯತ್ನಿಸಿ.

**ತುಲಾ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು.

**ವೃಶ್ಚಿಕ** ಶಿಶುವಿನ ಅನಾರೋಗ್ಯ ನಿಮ್ಮನ್ನು ವ್ಯಸ್ತವಾಗಿಡುತ್ತದೆ. ನೀವು ತಕ್ಷಣ ಗಮನ ನೀಡುವ ಅಗತ್ಯವಿರುತ್ತದೆ. ನಿಮ್ಮಿಂದ ಸ್ವಲ್ಪ ಉದಾಸೀನತೆಯೂ ಸಮಸ್ಯೆಯನ್ನು ಉಲ್ಬಣಗೊಳಿಸುವುದರಿಂದ ಸರಿಯಾದ ಸಲಹೆ ತೆಗೆದುಕೊಳ್ಳಿ.

**ಧನಸ್ಸು** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ತರಾತುರಿಯಲ್ಲಿ ಹೂಡಿಕೆಗಳನ್ನು ಮಾಡಬೇಡಿ. ಎಲ್ಲಾ ಸಾಧ್ಯವಿರುವ ಕೋನಗಳಿಂದ ಹೂಡಿಕೆಯನ್ನು ಪರಿಶೀಲಿಸದೇ ಹೋದರೆ ನಷ್ಟ ಖಚಿತ.

**ಮಕರ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ವನ್ನು ಹಂಚಿಕೊಳ್ಳಿ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ. ಆದರೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು.

**ಕುಂಭ** ಮನೆಯ ಸಮಸ್ಯೆಗಳಿಗೆ ತಕ್ಷಣ ಗಮನ ನೀಡುವ ಅಗತ್ಯವಿರುತ್ತದೆ. ಸಂತೋಷಕ್ಕಾಗಿ ಹೊಸ ಸಂಬಂಧವನ್ನು ಎದುರುನೋಡಬಹುದು ನಿಮ್ಮ ವಿಶ್ವಾಸ ಬೆಳೆಯುತ್ತಿದೆ ಮತ್ತು ಪ್ರಗತಿ ಸ್ಪಷ್ಟವಾಗುತ್ತಿದೆ.

**ಮೀನ** ನಿಮ್ಮ ಸಂಗಾತಿಯ ಅನುಪಸ್ಥಿತಿ ಕಾಡುವ ಸಾಧ್ಯತೆಯಿದೆ. ಕೆಲಸದ ಒತ್ತಡ ಇನ್ನೂ ನಿಮ್ಮ ಮನಸ್ಸನ್ನು ಆವರಿಸುತ್ತದೆ ಹಾಗೂ ಇದು ಕುಟುಂಬ ಮತ್ತು ಸ್ನೇಹಿತರಿಗೆ ಯಾವುದೇ ಸಮಯವಿಲ್ಲದಂತೆ ಮಾಡುತ್ತದೆ.

## ಕಾರು ಅಪಘಾತ: ಒಬ್ಬರು ಸಾವು

• ಉದಯವಾಹಿನಿ, ಗಜೇಂದ್ರಗಡ

ಚಾಲಕನ ನಿಯಂತ್ರಣ ತಪ್ಪಿ ಕಾರು ಅಪಘಾತಕ್ಕೀಡಾಗಿ ಒಬ್ಬರು ಸ್ಥಳದಲ್ಲೇ ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ಸಮೀಪದ ರಾಜೂರ ಗ್ರಾಮದ ಹೊರ ವಲಯದಲ್ಲಿರುವ ಹಾಲಿನ ಶೇಖರಣಾ ಕೇಂದ್ರದ ಹತ್ತಿರ ನಡೆದಿದೆ. ಅಪಘಾತದಲ್ಲಿ ಸೂಡಿ ಗ್ರಾಮದ ಚಿದಂಬರ ಪಂಚಾಂಗ ಕರ್ತೃ ಗಣಪತಿಭಟ್ ಜೋಶಿ (74) ಮೃತಪಟ್ಟಿದ್ದು, ಮೃತರ ಮಗ ಕಿರಣ ಜೋಶಿ ಹಾಗೂ ಸೊಸೆ ವೈಷ್ಣವಿ ಅವರಿಗೆ ಗಾಯಗಳಾಗಿವೆ. ಮದುವೆ ಕಾರ್ಯ ಮುಗಿಸಿ ಲಿಂಗಸಗೂರಿನಿಂದ ಸೂಡಿಗೆ ಬರುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಚಾಲನೆ ವೇಳೆ ನಿದ್ರೆ ಮಂಪರಿನಿಂದಾಗಿ ಕಾರು ಅಪಘಾತಕ್ಕೀಡಾಗಿದೆ ಎನ್ನಲಾಗಿದೆ. ಗಜೇಂದ್ರಗಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಸೇತುವೆ ಕುಸಿತ: ಗ್ರಾಮಗಳ ಸಂಪರ್ಕ ಕಡಿತ

• ಉದಯವಾಹಿನಿ, ಉಡುಪಿ

ಕರಾವಳಿ ಜಿಲ್ಲೆಗಳಲ್ಲಿ ವರುಣಾರ್ಭಟಕ್ಕೆ ಸೃಷ್ಟಿಯಾಗಿರುವ ಅನಾಹುತ, ಅವಾಂತರಗಳು ಒಂದೆರಡಲ್ಲ. ಅಂಕೋಲಾ ತಾಲ್ಲೂಕಿನ ಶಿರೂರು ಬಳಿ ಹೆದ್ದಾರಿಯಲ್ಲಿ ಗುಡ್ಡ ಕುಸಿದು 7 ಜನರು ಸಾವನ್ನಪ್ಪಿರುವ ಘಟನೆ ಬೆನ್ನಲ್ಲೇ ಉಡುಪಿಯಲ್ಲಿ ನೂತನ ಸೇತುವೆಯೊಂದು ಕುಸಿದು ಬಿದ್ದು ಅಧ್ವಾನವುಂಟಾಗಿದೆ. ಉಡುಪಿ ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದಾಗಿ ವರ್ಷದ ಹಿಂದಷ್ಟೇ ನಿರ್ಮಿಸಲಾಗಿದ್ದ ಸೇತುವೆ ಕುಸಿದು ಬಿದ್ದಿದ್ದು, ಗ್ರಾಮಗಳ ಸಂಪರ್ಕವೇ ಕಡಿತಗೊಂಡಿದೆ.

ಕುಂದಾಪುರ ತಾಲ್ಲೂಕಿನ ಭರಣಕೊಳ್ಕಿಯಲ್ಲಿ ಹಾಲಾಡಿ, ಜೋರಾಡಿ, ಮದ್ದೂರು ಸಂಪರ್ಕ ಕಲ್ಪಿಸುವ ಸೇತುವೆ ಸಂಪೂರ್ಣ ಕುಸಿದು ಬಿದ್ದಿದ್ದು, ಗ್ರಾಮಸ್ಥರು, ವಿದ್ಯಾರ್ಥಿಗಳು ತೆರಳಲು ಮಾರ್ಗವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಒಂದು ವರ್ಷದ ಹಿಂದೆ 25 ಲಕ್ಷ ವೆಚ್ಚದಲ್ಲಿ ಈ ಸೇತುವೆ ನಿರ್ಮಾಣಗೊಂಡಿತ್ತು. ಕಳಪೆ ಕಾಮಗಾರಿಯಿಂದಾಗಿ ಒಂದೇ ಮಳೆಗೆ ಕುಸಿದು ಬಿದ್ದಿದೆ. ಈ ಭಾಗದ ಗ್ರಾಮಸ್ಥರು ಓಡಾಟಕ್ಕೆ ಇದೇ ಸೇತುವೆಯನ್ನು ಅವಲಂಭಿಸಿದ್ದಾರೆ. ಈಗ ಸೇತುವೆ ಬಿದ್ದುಹೋಗಿರುವ ಪರಿಣಾಮ ಸಂಚಾರಕ್ಕೆ ಅಸಾಧ್ಯವಾಗಿದೆ.

# ವನ್ಯಜೀವಿಗಳಿಗೆ ಕಂಟಕವಾದ ರೈಲು ಮಾರ್ಗ

### ಜನವರಿಯಿಂದ ಜುಲೈವರೆಗೂ 13 ಕಾಡುಕೋಣಗಳು ಸಾವನ್ನಪ್ಪಿದ್ದು ಪರಿಸರ ಪ್ರಿಯರಲ್ಲಿ ಹೆಚ್ಚಿದ ಆತಂಕ

• ಉದಯವಾಹಿನಿ ಹುಬ್ಬಳ್ಳಿ

ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯ ಹೊಸಪೇಟೆ-ವಾಸ್ಕೊ ಹಾಗೂ ಖಾನಾಪುರ-ಮೀರಜ್' ರೈಲ್ವೆ ಮಾರ್ಗದಲ್ಲಿ ಮೂರು ವರ್ಷಗಳಲ್ಲಿ 21 ಕಾಡೆಮ್ಮೆಗಳು ಜೀವ ಕಳೆದುಕೊಂಡಿವೆ. ಪ್ರಸಕ್ತ ವರ್ಷ ಜನವರಿಯಿಂದ ಜುಲೈವರೆಗೂ 13 ಕಾಡುಕೋಣಗಳು ಸಾವನ್ನಪ್ಪಿದ್ದು ಪರಿಸರ ಪ್ರಿಯರಲ್ಲಿ ಆತಂಕ ಹೆಚ್ಚಿದೆ.

ಅಳ್ನಾವರ (ಧಾರವಾಡ ಜಿಲ್ಲೆ), ಲೋಂಡಾ- ಖಾನಾಪುರ (ಬೆಳಗಾವಿ ಜಿಲ್ಲೆ) ಹಾಗೂ ತಿನಾಯ್ ಘಾಟ್-ಕ್ಯಾಸಲ್‌ರಾಕ್ (ಉತ್ತರ ಕನ್ನಡ ಜಿಲ್ಲೆ) ದಟ್ಟವಾದ ಅರಣ್ಯವಿರುವ 85 ಕಿ.ಮೀ. ರೈಲ್ವೆ ಮಾರ್ಗದಲ್ಲಿ 2014 ರಿಂದ 2021 ರವರೆಗೂ ಒಟ್ಟು 60 ವನ್ಯಜೀವಿಗಳು ಮೃತಪಪಟ್ಟಿವೆ. ಅವುಗಳಲ್ಲಿ 49 ಕಾಡುಕೋಣಗಳು ಸತ್ತಿವೆ.

**21 ಕಾಡು ಕೋಣಗಳ ಸಾವು**

ರೈಲ್ವೆ ಮಾರ್ಗದಲ್ಲಿ ಸಿಲುಕಿ ವನ್ಯಪ ರಾಣಿಗಳು ಜೀವ ಕಳೆದುಕೊಳ್ಳುವ ಘಟನೆಗಳು ಹೆಚ್ಚುತ್ತಿದ್ದು, ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ಅರಣ್ಯಾಧಿಕಾರಿ ಗಳು ವೈಜ್ಞಾನಿಕ ಅಧ್ಯಯನ ನಡೆಸಿಲ್ಲ. ರೈಲ್ವೆ ಮಾರ್ಗವು ದ್ವಿಪಥ (ಡಬ್ಲಿಂಗ್) ಆಗಿದ್ದರಿಂದ ವನ್ಯಜೀವಿಗಳು ಅದನ್ನು ಸಮರ್ಪಕವಾಗಿ ದಾಟುವುದು ಸಾಧ್ಯ ಆಗದಿರುವುದು ಇದಕ್ಕೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ. ಅರಣ್ಯದಲ್ಲಿ ಬೇಸಿಗೆ ಕಾಲದ ನೀರಿನ ಕೊರತೆ ಮತ್ತು ರೈಲ್ವೆ ಮಾರ್ಗದಲ್ಲಿ ಪ್ರಯಾಣಿಕರು ಎಸೆ ಯುವ ಆಹಾರ ಪದಾರ್ಥಗಳನ್ನು ತಿನ್ನಲು ಬರುವ ವನ್ಯಜೀವಿಗಳ ಪ್ರಾಣಕ್ಕೆ ಎರವಾಗುತ್ತಿರಬಹುದು.

> ಅರಣ್ಯ ಪ್ರದೇಶದಲ್ಲಿ ವೇಗ ನಿಯಂತ್ರಣ ನಿಯಮಗಳು ಅನುಷ್ಠಾನದಲ್ಲಿವೆ. ಧಾರವಾಡ ಮತ್ತು ಕ್ಯಾಸಲ್‌ರಾಕ್ ಮಧ್ಯೆ ರೈಲ್ವೆ ದ್ವಿಪಥ ಕಾಮಗಾರಿ ಮುಗಿದಿದ್ದು, ಕುಲೇಂ ಮಾರ್ಗದಲ್ಲಿ ಪ್ರಗತಿಯಲ್ಲಿದೆ. ಅರಣ್ಯ ಮಾರ್ಗದಲ್ಲಿ ಅವಘಡ ತಪ್ಪಿಸಲು ರೈಲ್ವೆ ಇಲಾಖೆಯು ತಾತ್ಕಾಲಿಕ ಮತ್ತು ಶಾಶ್ವತ ವೇಗ ನಿಯಂತ್ರಣ ನಿಯಮಗಳನ್ನು ಪಾಲನೆ ಮಾಡುತ್ತಿದೆ
>
> -ಮಂಜುನಾಥ ಕನಮಡಿ, ನೈರುತ್ಯ ರೈಲ್ವೆ ವಲಯದ ಮುಖ್ಯ ಸಾರ್ವಜನಿಕ ಅಧಿಕಾರಿ


ಉದಯವಾಹಿನಿ ಚಿತ್ರ

ಅರಣ್ಯ ಮಾರ್ಗದಲ್ಲಿ ರೈ ಲುಗಳು ಅತೀ ವೇಗವಾಗಿ ಸಂಚರಿಸುತ್ತಿರುವುದು ವನ್ಯಜೀವಿಗಳು ಪ್ರಾಣ ಕಳೆದುಕೊಳ್ಳುವುದಕ್ಕೆ ಮುಖ್ಯವಾದ ಕಾರಣ ಎಂದು ಅರಣ್ಯ ಅಧಿಕಾರಿಗಳು ಮತ್ತು ಪರಿಸರ ಪ್ರಿಯರು ಹೇಳುತ್ತಾರೆ.

ಅರಣ್ಯದಲ್ಲಿ ಹಾಗೂ ಗುಡ್ಡಗಳಿರುವ ಕಡೆ ರೈಲಿನ ವೇಗ ನಿಯಂತ್ರಣ ನಿಯಮಗಳನ್ನು ಪಾಲನೆ ಮಾಡುವಂತೆ ರೈಲ್ವೆ ಎಂಜಿನ್ ಚಾಲಕರಿಗೆ ಸೂಚಿಸುವಂತೆ ರೈಲ್ವೆ ಅಧಿಕಾರಿಗಳಿಗೆ ನಿಯೋಗದ ಮೂಲಕ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ. ಈ ರೈಲ್ವೆ ಮಾರ್ಗದಲ್ಲಿ ಪ್ರಾಣಿಗಳು ಸುಲಭವಾಗಿ ದಾಟುವುದಕ್ಕೆ ಕೆಳಸೇತುವೆಗಳು ಅಥವಾ ಸುರಕ್ಷಾ ಬೇಲಿಗಳನ್ನು ಮಾಡದ ಕಾರಣ ಅವಘಡಗಳು ಘಟಿಸುತ್ತಿವೆ' ಎಂದು ಹಿರಿಯ ಅರಣ್ಯಾಧಿಕಾರಿಯೊಬ್ಬರು ತಿಳಿಸಿದರು. ಲೋಂಡಾ-ಕ್ಯಾಸಲ್ ರಾಕ್‌ನಿಂದ ವಾಸ್ಕೊವರೆಗೂ ರೈಲ್ವೆ ಮಾರ್ಗ ದ್ವಿಪಥ ಕಾಮಗಾರಿ ಈ ವರ್ಷ ಪೂರ್ಣವಾದರೆ ರೈಲುಗಳ ಸಂಖ್ಯೆಯೂ ಹೆಚ್ಚಳವಾಗಿ ಇನ್ನೂ ಅಧಿಕ ಪ್ರಮಾಣದಲ್ಲಿ ವನ್ಯಜೀವಿಗಳು ಆಪತ್ತಿಗೆ ಸಿಲುಕಲಿವೆ' ಎಂದು ವನ್ಯಜೀವಿ ಕಾರ್ಯಕರ್ತರು ಮತ್ತು ಅರಣ್ಯ ಇಲಾಖೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಸದ್ಯ ಲೋಂಡಾ ಮಾರ್ಗದಲ್ಲಿ ಪ್ರತಿದಿನ 12 ಪ್ರಯಾಣಿಕರ ರೈಲುಗಳು ಸಂಚರಿಸುತ್ತಿವೆ. ಆದರೆ ಸರಕು ಸಾಗಿಸುವ ರೈಲುಗಳು ಹಾಗೂ ವಿಶೇಷ ರೈಲುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿವೆ.

#### ಪರ್ಯಾಯ ಮಾರ್ಗವೊಂದನ್ನು ಅಭಿವೃದ್ಧಿ ಮಾಡುವುದು ಅಗತ್ಯ

ವನ್ಯಜೀವಿ ಕಾರ್ಯಕರ್ತ ಗಿರಿಧರ್ ಕುಲಕರ್ಣಿ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದಾರೆ. 'ಲೋಂಡಾ-ತಿನಾಯ್‌ಘಾಟ್-ಕ್ಯಾಸಲ್‌ರಾಕ್-ವಾಸ್ಕೊ ರೈಲು ಮಾರ್ಗವು ದಟ್ಟ ಅರಣ್ಯದೊಳಗಿದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾ ರಾಜ್ಯಗಳನ್ನು ಸಂಪರ್ಕಿಸುವ ಈ ಮಾರ್ಗವು 'ಹುಲಿ ವಲಯ' (ಟೈಗರ್ ಕಾರಿಡಾರ್) ವಾಗಿ ಪ್ರಮುಖ್ಯತೆ ಪಡೆದಿದೆ. ಸೂಕ್ಷ್ಮ ಪರಿಸರದಲ್ಲಿ ವನ್ಯಜೀವಿಗಳು ಸುರಕ್ಷಿತವಾಗಿ ಸಂಚರಿಸುವುದು ಮುಖ್ಯವಾಗಿದೆ. ಈ ಮಾರ್ಗದ ವನ್ಯಜೀವಿಗಳಿಗೆ ಉಂಟಾಗುವ ಒತ್ತಡ ನಿವಾರಣೆಗೆ ಪರ್ಯಾಯ ಮಾರ್ಗವೊಂದನ್ನು ಅಭಿವೃದ್ಧಿ ಮಾಡುವುದು ಅಗತ್ಯವಿದೆ' ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

## ರೈತರಿಂದ ಮಣ್ಣು ಮತ್ತು ನೀರಿನ ಪರೀಕ್ಷೆ ಮುಖ್ಯ

• ಉದಯವಾಹಿನಿ, ಇಂಡಿ

ಮಣ್ಣುಗಳಲ್ಲಿಯ ಮುಖ್ಯ ಹಾಗೂ ಲಘು ಪೋಷಕಾಂಶಗಳ ಕೊರತೆ ಮತ್ತು ನೀರಿನಲ್ಲಿ ಲವಣಗಳು ಮತ್ತು ಕ್ಷಾರಗಳ ಕೊರತೆ ನೀಗಿಸಲು ರೈತರು ತಮ್ಮ ಹೊಲದಲ್ಲಿಯ ಮಣ್ಣು ಪರೀಕ್ಷೆಯ ಅಗತ್ಯತೆ ಇದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಶಿವಶಂಕರಮೂರ್ತಿ ಹೇಳಿದರು.

ಅವರು ಪಟ್ಟಣದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕರ್ನಾಟಕ ಆಂಗ್ಲ ಮಾಧ್ಯಮ ಶಾಲೆಯ ಸಹಯೋಗದಲ್ಲಿ ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಣ್ಣು ಮತ್ತು ನೀರು ಪರೀಕ್ಷೆಯ ಮಹತ್ವ ಕುರಿತು ನಡೆದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಮಣ್ಣು ನೈಸರ್ಗಿಕವಾಗಿ ದೊರೆತಂತಹ ಅತ್ಯಮೂಲ್ಯ ವಸ್ತು. ಭೂಮಿಯು ಸಸ್ಯಗಳಿಗೆ ಆಧಾರವನ್ನು ಕೊಡುವದರ ಜೊತೆಗೆ ಅದರ ಬೆಳವಣಿಗೆಗೆ ಅವಶ್ಯವಿರುವ ನೀರು ಮತ್ತು ಎಲ್ಲಾ ಪೋಷಕಾಂಶಗಳನ್ನು ನೀಡುತ್ತದೆ. ಆದ್ದರಿಂದ ಬೆಳೆಗಳ ಉತ್ತಮವಾದ ಬೆಳೆವಣಿಗಾಗಿ ಹಾಗೂ ಪೋಷಕಾಂಶ ಕೊರತೆ ನಿವಾರಿಸಲು ಪೋಷಕಾಂಶಗಳ ಪ್ರಮಾಣ ಮತ್ತು ರೂಪವನ್ನು ಮಣ್ಣು ಪರೀಕ್ಷೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂದರು.


ಉದಯವಾಹಿನಿ ಚಿತ್ರ


ಮಣ್ಣು ಮತ್ತು ನೀರು ಪರೀಕ್ಷೆ ವಿಜ್ಞಾನಿ ಡಾ. ಬಾಲಾಜಿ ನಾಯಕ ಮಾತನಾಡಿ ಉತ್ತಮ ಬೆಳೆಗೆ ಯೋಗ್ಯವಾದ ನೀರು ಅವಶ್ಯಕ,ಇಂದಿನ ಕೃಷಿಯಲ್ಲಿ ಅಸಮತೋಲನ ಅಸಮರ್ಪಕ ರಸಾಯನಿಕ ಗೊಬ್ಬರಗಳ ಬಳಕೆಯಿಂದ ವ್ಯವಸಾಯದಲ್ಲಿ ಬಳಸುವ ನೀರು ಯೋಗ್ಯವಾಗಿದೆಯೋ ಇಲ್ಲವೋ ಮತ್ತು ಅದರ ಗುಣಮಟ್ಟ ಪರೀಕ್ಷಿಸುವದು ಅಗತ್ಯ ಎಂದರು. ಕೃಷಿ ವಿಜ್ಞಾನ ಕೇಂದ್ರದ ಡಾ. ಪ್ರಕಾಶ, ಮುಖ್ಯಗುರುಗಳಾದ ಎ.ಎಸ್.ಬೋರಾಮಣಿ, ಶಿಕ್ಷಕಿ ಸುರೇಖಾ ಭೈರಶೆಟ್ಟಿ ಮತ್ತಿತರಿದ್ದರು.

> ಒಂದೇ ವ್ಯವಸಾಯ ಜಮೀನಿನಲ್ಲಿ ನಿರಂತರವಾಗಿ ಬೆಳೆ ಬೆಳೆಯುವರಿಂದ ಮಣ್ಣಿನಲ್ಲಿರುವ ಪೋಷಕಾಂಶಗಳೆಲ್ಲ ಬೆಳೆಗಳ ಬೆಳವಣಿಗೆಗಾಗಿ ಉಪಯೋಗವಾಗಿ ಮಣ್ಣಿನಲ್ಲಿ ಪೋಷಕಾಂಶಗಳ ಪ್ರಮಾಣ ಕ್ಷೀಣಿಸುತ್ತಾ ಬರುತ್ತದೆ. ಬೆಳೆ ಬೆಳೆದ ನಂತರ ಕೃಷಿ ಚಟುವಟಿಕೆಗಳಾದ ಮಾಗಿ ಉಳುಮೆ ಮುಂತಾದವುಗಳನ್ನು ಕೈ ಕೊಳ್ಳದಿದ್ದರೆ ಭೂಮಿಯ ಮೇಲ್ಪದರ ಗಟ್ಟಿಯಾಗಿ ಮಣ್ಣಿನ ಭೌತಿಕ ರಾಸಾಯನಿಕ ಹಾಗೂ ಜೈವಿಕ ಕ್ರಿಯೆಗಳಲ್ಲಿ ವ್ಯತ್ಯಾಸ ಕಂಡು ಬಂದು ಮಣ್ಣು ನಿಷ್ಕ್ರೀಯವಾಗುತ್ತದೆ. ಈ ನಿಟ್ಟಿನಲ್ಲಿ ಮಣ್ಣು ಪರೀಕ್ಷೆ ಅಗತ್ಯ
>
> -ಡಾ. ಹೀನಾ, ವಿಜ್ಞಾನಿ

## ಹಿಂದೂ ಮುಸ್ಲಿಂ ಭಾವೈಕ್ಯತೆ ಹಬ್ಬ ಮೊಹರಂ

• ಉದಯವಾಹಿನಿ, ಯಡ್ರಾಮಿ

ನಾಡಿನಲ್ಲಿ ಹಿಂದೂ ಮತ್ತು ಮುಸ್ಲಿಂ ಬಾಂದವರು ಹಲವಾರು ಹಬ್ಬಗಳು ಆಚರಣೆಯನ್ನು ಮಾಡುತ್ತಾರೆ ಆದರೆ ಅವು ಅವರ ಧರ್ಮದ ನಿಯಮದಂತೆ ಆಚರಿಸುವರು ಆದರೆ ಈ ಮೊಹರಂ ಹಬ್ಬ ಹಿಂದೂ ಮತ್ತು ಮುಸ್ಲಿಂ ಸೇರಿ ಇಬ್ಬರು ಖುಷಿಯಾಗಿ ಸಡಗರ ಸಂಭ್ರಮದಿಂದ ಆಚರಣೆಯನ್ನು ಮಾಡುತ್ತಾರೆ ಇನ್ನು ವಿಶೇಷ ಎಂದರೆ ಕೆಲವು ಹಳ್ಳಿಯಲ್ಲಿ ಮುಸ್ಲಿಂ ಬಾಂದವರು ಇಲ್ಲದಿದ್ದರೂ ಹಿಂದೂಗಳು ಈ ಹಬ್ಬ ಆಚರಣೆಯನ್ನು ಮಾಡುತ್ತಾರೆ ಅದಕ್ಕೆ ಇದು ಹಿಂದೂ ಮುಸ್ಲಿಂ ಭಾವೈಕ್ಯತೆ ಹಬ್ಬ ಎಂದು ಕರಿಯಬಹುದು ಎಂದು ಯಡ್ರಾಮಿ ತಾಲ್ಲೂಕಿನ ಸುಕ್ಷೇತ್ರ ಸಾಥಕೇಡ ಗ್ರಾಮದ ಶ್ರೀ ರಾಜಬಕ್ಷ ಯಮನೂರ ದೇವಸ್ಥಾನದ ಪೀಠಧಿಪತಿಗಳಾದ ಈರಣ್ಣ ಮುತ್ಯಾ ಅವರು ದೇವರ ದರ್ಶನಕ್ಕೆ ಬರುವ ಭಕ್ತರ ಕುರಿತು ಹಮ್ಮಿಕೊಳ್ಳಲಾದ ಮೊಹರಂ ಕಾರ್ಯಕ್ರ ಮದಲ್ಲಿ ಮಾತನಾಡಿದರು. ಈ ಒಂದು ಗ್ರಾಮದಲ್ಲಿ ಬಹಳ ವಿಶೇಷತೆಯಿಂದ ಕುಡಿರುತ್ತದೆ ವಿವಿಧ ಜಿಲ್ಲೆ ಮತ್ತು ರಾಜ್ಯದಿಂದ ಭಕ್ತರು ಬರುತ್ತಾರೆ ತಾವು ಬೇಡಿಕೊಂಡಿರೋ ಅರಕೆ ಪೂರೈಸಿದರೆ ಅರಕೆಯನ್ನು ವಿವಿಧ ರೂಪದಲ್ಲಿ ಮುಟ್ಟಿಸುವರು ಒಂದು ವಾರದವರೆಗೆ ಬರುವ ಭಕ್ತರಿಗೆ ಪ್ರಸಾದ ಸೇವೆ ಇರುತ್ತದೆ ಇಲ್ಲಿ ಬರುವ ಭಕ್ತರು ಹಲಗೆಯ ತಾಳಕ್ಕೆ ಮೊಹರಂ ನೃತ್ಯ ಮಾಡುವರು ಕೆಲವರು ಮೊಹರಂ ಹಾಡುಗಳು ಹಾಡಿ ಸಂಭ್ರಮವಾಗಿ ಆಚರಣೆಯನ್ನು ಮಾಡುವರು. ಒಟ್ಟನಲ್ಲಿ ಇದು ಉತ್ತರ ಕರ್ನಾಟಕದ ವಿಶೇಷ ಹಬ್ಬವಾಗಿದೆ.



ಉದಯವಾಹಿನಿ ಚಿತ್ರ

## ವಿಭಾಗೀಯ ಸೇವಾ ಪ್ರಶಸ್ತಿಗೆ ರುದ್ರವಾಡಗಿ ಭಾಜನ: ಸನ್ಮಾನ

• ಉದಯವಾಹಿನಿ, ಮುದ್ದೇಬಿಹಾಳ

ಮುದ್ದೇಬಿಹಾಳ ವಾಣಿಜ್ಯ ತೆರಿಗೆಗಳ ಇಲಾಖೆಯ ಪರಿವೀಕ್ಷಕ ಬಿ ಎಂ ರುದ್ರವಾಡಗಿ ಅವರಿಗೆ 2023/24 ನೇ ಸಾಲಿನಲ್ಲಿ ವಾಣಿಜ್ಯ ತೆರಿಗೆಗಳ ಬೆಳಗಾವಿ ವಿಭಾಗೀಯ ಸರಕು ಸೇವಾ ತರಿಗೆ ಇಲಾಖೆಯಲ್ಲಿ ಸಲ್ಲಿಸಿರುವ ಅತ್ಯುತ್ತಮ ಸೇವೆಯನ್ನು ಗುರುತಿಸಿ ವಿಭಾಗೀಯ ಸೇವಾ ಪ್ರಶಸ್ತಿಗೆ ಭಾಜನರಾಗಿದ್ದಾರೆ ಜುಲೈ 12 ರಂದು ಪ್ರಶಸ್ತಿ ಪಡೆದ ಬಿ.ಎಂ. ರುದ್ರವಾಡಗಿ ಅವರಿಗೆ ಸೋಮವಾರ ಮುದ್ದೇಬಿಹಾಳ ಪಟ್ಟಣದ ಗಣ್ಯ ವರ್ತಕರು ಮುದ್ದೇಬಿಹಾಳ ಕಚೇರಿಯಲ್ಲಿ ಸನ್ಮಾನಿಸಿ ಗೌರವಿಸಿದರು

ಈ ವೇಳೆ ಮಾತನಾಡಿದ ಗಣ್ಯ ವರ್ತಕ ಬಿಜೆಪಿ ಪಕ್ಷದ ಮುಖಂಡ ಪ್ರಭು ಕಡಿ ಮಾತನಾಡಿ ತೆರಿಗೆ ಇಲಾಖೆಯಲ್ಲಿ ಕಳೆದ 36 ವರ್ಷಗಳಿಂದ ಅವಿರತವಾಗಿ ಸೇವೆ ಸಲ್ಲಿಸುತ್ತಿರುವ ಬಿ. ಎಂ. ರುದ್ರವಾಡಗಿ ಅವರಿಗೆ ಅತ್ಯುತ್ತಮ ವಿಭಾಗೀಯ ಸೇವಾ ಪ್ರಶಸ್ತಿ ಪಡೆದದ್ದು ನಮಗೆಲ್ಲಾ ಹರ್ಷದಾಯಕ ವಿಷಯವಾಗಿದೆ ಇದು ನಮ್ಮ ತಾಲ್ಲೂಕಿಗೆ ಗೌರವವನ್ನು ಹೆಚ್ಚಿಸಿದೆ ಎಂದು ಹಾರೈಸಿದರು. ಮುದ್ದೇಬಿಹಾಳ ವಾಣಿಜ್ಯ ತೇರಿಗೆ ಇಲಾಖೆಯ ಅಧಿಕಾರಿ ಸಂತೋಷ ಗೋಲಾಯಿ ಮಾತನಾಡಿ ಬಿ.ಎಂ. ರುದ್ರವಾಡಗಿ ಅವರಂತಹ ಪ್ರಾಮಾಣಿಕತೆ ಪರೀಕ್ಷಕರನ್ನು ಕಾಣಲು ಸಾಧ್ಯವಿಲ್ಲ ಅವರಿಗೆ ಕಚೇರಿಯೇ ಮನೆ ಇದ್ದಂತೆ ಕಚೇರಿ ಕಾರ್ಯಕ್ಕೆ ರಾತ್ರಿ ಎಷ್ಟೇಯಾದರೂ ಬಂದು ಕೆಲಸವನ್ನು ಮಾಡುವ ಪ್ರಾಮಾಣಿಕ ಅಧಿಕಾರಿ ಅಂತಹವರಿಗೆ ಈ ಪ್ರಶಸ್ತಿ ಒಲಿದು ಬಂದದ್ದು ಪ್ರಶಸ್ತಿಗೆ ಗೌರವ ಬಂದಿದೆ ಎಂದರು.


ಉದಯವಾಹಿನಿ ಚಿತ್ರ

ಸನ್ಮಾನ ಸ್ವೀಕರಿಸಿ ಮಾತನಾಡಿದ ಬಿ ಎಂ ರುದ್ರವಾಡಗಿ ವಿಭಾಗೀಯ ಸೇವಾ ಪ್ರಶಸ್ತಿ ನಮ್ಮ ಕರ್ತವ್ಯ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂದರು. ಈ ವೇಳೆ ಗಣ್ಯ ವರ್ತಕರಾದ ಮಹೇಂದ್ರ ಓಸ್ವಾಲ್, ಮಾಣಿಕಚಂದ ದಂಡಾವತಿ, ಅಭಿನಂದನ ಕಡೆಹಳ್ಳಿ, ಹೀರಾಚಂದ ಓಸ್ವಾಲ್, ಅಶೋಕ ರೇವಡಿ, ಸೋಮ ನಗೌಡ ಸಾಲವಾಡಗಿ, ಚನ್ನಪ್ಪ ಗೋನಾಳ, ಶಿವು ಪುರಾಣಿಕಮಠ ಹಾಗೂ ಸಿಬ್ಬಂದಿಗಳಾದ ಅಮಿತ ಲಾಯದಗುಂದಿ, ಶಂಕರ ಪತ್ತಾರ, ಯಸೀನ್ ಹಣಗಿ,ವಿರೇಶ ಹಂಪನಗೌಡರ, ರಮೇಶ ಭಜಂತ್ರಿ ಮತ್ತಿತರರು ಉಪಸ್ಥಿತರಿದ್ದರು.

## ಮಗುವಿನ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಮಹತ್ವದು

• ಉದಯವಾಹಿನಿ, ಮುದ್ದೇಬಿಹಾಳ

ಮನೆಯಲ್ಲಿ ಸಂಸ್ಕಾರ ಮತ್ತು ಸಂಪ್ರದಾಯವಿದ್ದಾಗ ಮಾತ್ರವೇ ಮಗುವಿನ ಕಲಿಕೆ ಉತ್ತಮವಾಗಲು ಸಾಧ್ಯವೆಂದು ವಿದ್ಯಾ ಭಾರತಿ ದಕ್ಷಿಣ ಮಧ್ಯ ಕ್ಷೇತ್ರ ಶಿಶು ವಾಟಿಕಾ ಸಹ ಪ್ರಮುಖರಾದ ತಾರಾ ಕಾಳಿಚರಣ ಹೇಳಿದರು.

ಪಟ್ಟಣದ ಜ್ಞಾನ ಭಾರತಿ ವಿದ್ಯಾ ಮಂದಿರದಲ್ಲಿ ಮಾತೃ ಭಾರತಿ ಪರಿಷತ್ ವತಿಯಿಂದ ಆಯೋಜಿಸಿರುವ ಜನನಿ ಸಮಾಗಮ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿದರು.

ಮಗುವಿನ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಮಹತ್ವದು ಮಗುವಿನ ಕಲಿಕೆಯಲ್ಲಿ ತಾಯಿಯು ಅರ್ಧದಷ್ಟು ಪ್ರಮುಖ ಪಾತ್ರವನ್ನು ವಹಿಸುತ್ತಾಳೆ. ಆಚಾರ ಸಂಸ್ಕೃತಿ, ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುವಲ್ಲಿ ಹೆಣ್ಣಿನಿಂದ ಮಾತ್ರ ಸಾಧ್ಯವಾಗುತ್ತದೆ. ಅದಕ್ಕಾಗಿಯೆ ತೊಟ್ಟಿಲನ್ನು ತೂಗುವ ಕೈ ದೇಶವನ್ನು ಆಳಲು ಮಾತ್ರ ಸಾಧ್ಯವಾಗುತ್ತದೆ. ಸರ್ವ ಶಕ್ತಿ ಸಾಮರ್ಥ್ಯ ಹೆಣ್ಣಿನಲ್ಲಿ ಇರುವುದರಿಂದ ಮಾತ್ರವೇ ಭೂಮಿ, ನೀರು, ವಿದ್ಯೆ, ಶಕ್ತಿ ಇತ್ಯಾದಿಯಲ್ಲಿ ಮಾತ್ರ ಶಕ್ತಿ ಅಡಗಿದೆಯೆಂದರು.


ಉದಯವಾಹಿನಿ ಚಿತ್ರ

**ಜನನಿ ಸಮಾಗಮ ಕಾರ್ಯಕ್ರಮ**

ಸಂಸ್ಥೆಯ ಅಧ್ಯಕ್ಷರಾದ ಬಿ.ಪಿ.ಕುಲಕರ್ಣಿ ಮಾತೃ ಭಾರತಿ ಸಂಯೋಜನೆಯ ಕುರಿತಾಗಿ ಶಾಲೆಯಲ್ಲಿ ಅನುಕೂಲಕರವಾದ ವಾತಾವರಣ ಮೂಡಿಸಲು ವ್ಯವಸ್ಥೆ ಮಾಡಿ ಕೊಡಲಾಗುತ್ತದೆಂದು ತಿಳಿಸಿದರು. ಮಾತೃ ಭಾರತಿ ಪರಿಷತ್ತಿನ ಅಧ್ಯಕರಾದ ಶ್ರೀದೇವಿ ಪತ್ತಾರ ಅಧ್ಯಕ್ಷತೆ ವಹಿಸಿದ್ದರು, ಮಾತೃ ಭಾರತಿ ಪರಿಷತ್ತಿನ ಪದಾಧಿಕಾರಿಗಳಾದ ವಿಜಯಲಕ್ಷ್ಮೀ ಸಾಸನೂರ, ರೇಖಾ ಹುದ್ದಾರ, ಬಸಮ್ಮ ಕೆಂಧೂಳಿ, ಗಿರಿಜಾ ಮುದ್ದೇಬಿಹಾಳ, ಲಾಲಬಿ ಮುಜಾವರ, ಕಾವೇರಿ ಜೋಶಿ, ಅನಿತಾ ಕರಣಿ, ರಶ್ಮಿ ಲಿಂಗದಳ್ಳಿ, ಶಾರದ ಹಿರೇಮಠ, ಗಾಯತ್ರಿ ಹಡಲಗೇರಿ,ಪರವೀನ ನದಾಫ್, ಶಾಹಿನ ನಾಲತವಾಡ, ಆಂಗ್ಲ ಮಾಧ್ಯಮ ಮುಖ್ಯ ಗುರುಮಾತೆ ರಂಜಿತಾ ಹೆಗಡೆ, ಕೀರ್ತಿ ತಳಗೇರಿ, ಭಾಗ್ಯ ಸಿದ್ದಪೂರ ಸೇರಿದಂತೆ ಇತರರು ಹಾಜರಿದ್ದರು. ಪ್ರಾಥಮಿಕ ಮುಖ್ಯ ಗುರುಮಾತೆ ಸರಸ್ವತಿ ಮಡಿವಾಳರ ಸ್ವಾಗತಿಸಿದರು. ಶಾರದಾ ಗಸ್ತಿಗಾರ ಪ್ರಾರ್ಥಿಸಿದರು ಅನ್ನಪೂರ್ಣ ನಾಗರಾಳ ಪ್ರಾಸ್ತಾವಿಕ ನುಡಿದರು.

## ಕಾರವಾರದಲ್ಲಿ ಗುಡ್ಡ ಕುಸಿತ: 9 ಜನರ ದುರ್ಮರಣ, ಇಬ್ಬರು ನಾಪತ್ತೆ

• ಉದಯವಾಹಿನಿ, ಉತ್ತರಕನ್ನಡ

ಉತ್ತರ ಕನ್ನಡ ಜಿಲ್ಲೆಯಲ್ಲಿ ಘೋರ ದುರಂತವೊಂದು ಸಂಭವಿಸಿದ್ದು, ಅಂಕೋಲಾ ತಾಲ್ಲೂಕಿನ ಶಿರೂರು ಬಳಿ ಗುಡ್ಡ ಕುಸಿತದಿಂದ ಮಂದಿ ಮಣ್ಣಿನಡಿ ಸಿಲುಕಿ 7 ಜನರು ಸಾವನ್ನಪ್ಪಿದ್ದ ಘಟನೆಗೆ ಸಂಬಂಧಿಸಿದಂತೆ, ಇದೀಗ 9 ಜನರು ಈ ಒಂದು ಘಟನೆಯಲ್ಲಿ ಸಾವನ್ನಪ್ಪಿದ್ದಾರೆ. ಇಬ್ಬರು ನಾಪತ್ತೆಯಾಗಿದ್ದು 7 ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಹೌದು ಉತ್ತರ ಕನ್ನಡ ಜಿಲ್ಲೆಯಲ್ಲಿ ಘೋರ ದುರಂತವೊಂದು ಸಂಭವಿಸಿದ್ದು, ಭಾರೀ ಮಳೆಗೆ ಗುಡ್ಡ ಕುಸಿದು ಏಳು ಮಂದಿ ಸಾವನ್ನಪಿದ್ದಾರೆ ಎಂದು ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾಹಿತಿ ನೀಡಿದ್ದಾರೆ. ಆದರೆ ಇದೀಗ ಮೃತರ ಸಂಖ್ಯೆ 9ಕ್ಕೆ ಏರಿದೆ.


ಉದಯವಾಹಿನಿ ಚಿತ್ರ

**ಜಿಲ್ಲೆಯಲ್ಲಿ ಘೋರ ದುರಂತ**

ಕಾರವಾರದಲ್ಲಿ ಗುಡ್ಡ ಕುಸಿದು 9 ಮಂದಿ ಜೀವಂತ ಸಮಾಧಿಯಾಗಿದ್ದು, 9 ಮಂದಿಯಲ್ಲಿ 7 ಮಂದಿ ದುರ್ಮರಣ ಹೊಂದಿದ್ದು, ಇಬ್ಬರು ನಾಪತ್ತೆಯಾಗಿದ್ದಾರೆ.

ಅಂಕೋಲ ತಾಲ್ಲೂಕಿನ ಶಿರೂರು ಗ್ರಾಮದ ಬಳಿ ಈ ಘಟನೆ ನಡೆದಿದೆ. ಗುಡ್ಡ ಕುಸಿತದಿಂದ ಗಂಗಾವಳಿ ನದಿಗೆ ಟ್ಯಾಂಕರ್ ಬಿದ್ದಿದೆ.ಈ ವೇಳೆ ಚಾಲಕ ಮತ್ತು ಕ್ಲೀನರ್ ಟೀ ಕುಡಿದಿದ್ದ ವೇಳೆ ಗುಡ್ಡ ಕುಸಿತ ಉಂಟಾಗಿದೆ. ಇದೆ ಸಂದರ್ಭದಲ್ಲಿ ಟ್ಯಾಂಕರ್ ಚಾಲಕ ಕ್ಲೀನರ್ ಸೇರಿ 9 ಜನರ ಮೇಲೆ ಗುಡ್ಡ ಕುಸಿದಿದೆ. ಗುಡ್ಡ ಕುಸಿತದಿಂದ ಹೆದ್ದಾರಿಯಲ್ಲಿ ವಾಹನ ಸಂಚಾರ ಬಂದ್ ಆಗಿದೆ. ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಇದೀಗ ಮೃತದೇಹಗಳಿಗೆ ಕಾರ್ಯಾಚರಣೆ ಮುಂದುವರೆದಿದೆ.

## ಮುಂದಿನ ಶೈಕ್ಷಣಿಕ ವರ್ಷಕ್ಕೆ ವಸತಿ ನಿಲಯ ಪೂರ್ಣಕ್ಕೆ ಸೂಚನೆ

• ಉದಯವಾಹಿನಿ, ಜಗಳೂರು

ಮುಂದಿನ ಶೈಕ್ಷಣಿಕ ವರ್ಷ ಆರಂಭಕ್ಕೆ ವಸತಿ ನಿಲಯ ಕಟ್ಟಡ ಪೂರ್ಣಗೊಳಿಸಬೇಕು ಎಂದು ಶಾಸಕ ಬಿ ದೇವೇಂದ್ರಪ್ಪ ತಿಳಿಸಿದರು. ಜಗಳೂರು ಪಟ್ಟಣದಲ್ಲಿ ಎಸ್ ಎಸ್ ಲೇಔಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯ ಕಟ್ಟಡ ನಿರ್ಮಾಣ ಭೂಮಿ ಪೂಜೆ ನೇರವೆರಿಸಿ ಮಾತನಾಡಿದರು.

ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಡಿಯಲ್ಲಿ ಡಾ ಬಾಬು ಜಗಜೀವನ್ ರಾಂ ಛತ್ರವಾಸ್ ಯೋಜನೆಯಲ್ಲಿ 4 ಕೋಟಿ 33 ಲಕ್ಷಗಳಲ್ಲಿ ಕಾಮಗಾರಿ ನಡೆಯಲಿದ್ದು ಅಪ್ಪಾಜಿ ಬಿಲ್ಡರ್ಸ್ ಬೆಂಗಳೂರು ಇವರು ಮುಂದಿನ ವರ್ಷಕ್ಕೆ ವಸತಿ ನಿಲಯ ಪೂರ್ಣಗೊಳಿಸಿ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು ಅಲ್ಲದೆ ಶೀಘ್ರವೇ ಕಟ್ಟಡ ನಿರ್ಮಾಣ ಮಾಡಬೇಕೆಂದು ಕಳಪೆ ಕಾಮಗಾರಿ ಮಾಡದೆ ಗುಣಮಟ್ಟ ಕಟ್ಟಡವನ್ನು ಇಲಾಖೆ ನೀಡಬೇಕೆಂದು ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಹಲವು ಸಮಸ್ಯೆಗಳು ಇರುವುದು ಪತ್ರಕರ್ತರು ಗಮನಕ್ಕೆ ತಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಸರಿಯಾಗಿ ಎಲ್ಲಾ ಸಮಸ್ಯೆಗಳನ್ನು ನಿವಾರಿಸಬೇಕು ಅಲ್ಲದೇ ವಿದ್ಯಾರ್ಥಿಗಳಿಗೆ ಉತ್ತಮ ಊಟ ತಿಂಡಿ ಹಾಗೂ ಮೂಲಭೂತ ಸೌಲಭ್ಯಗಳು ಒದಗಿಸಬೇಕು ಎಂದು ಸೂಚಿಸಿದರು.


ಉದಯವಾಹಿನಿ ಚಿತ್ರ

# ಮುಗಿಯದ ರಸ್ತೆ ಕಾಮಗಾರಿ: ನಿಲ್ಲದ ತೊಡಕು

### ಹಲವು ಬಾರಿ ಅಧಿಕಾರಿಗಳಿಗೆ ಮೌಖಿಕ ದೂರು ನೀಡಲಾಗಿದೆ, ಆದರೆ ಪ್ರಯೋಜನವಾಗಲಿಲ್ಲ

• ಉದಯವಾಹಿನಿ, ಶಿರ್ವ

ಇಲ್ಲಿಂದ ಕಟಪಾಡಿ, ಉಡುಪಿಗೆ ಸಾಗುವ ಪ್ರಮುಖ ಹೆದ್ದಾರಿ ಪಂಜಿಮಾರು ರಸ್ತೆಯ ಇಕ್ಕೆಲಗಳಲ್ಲಿ ಮೋರಿ ನಿರ್ಮಾಣ ಮಾಡಿ, ರಸ್ತೆಗೆ ಮಣ್ಣು ಹಾಕಿ ಸಮತಟ್ಟು ಮಾಡುವ ಕಾಮಗಾರಿ ಎಂಟು ತಿಂಗಳಿಂದ ನಡೆಯುತ್ತಿದ್ದು ಈ ಮೂಲಕ ಸಾಗುವವರು ತೀರಾ ತೊಂದರೆಗೆ ಒಳಗಾಗಿದ್ದಾರೆ.

ಹೆದ್ದಾರಿ ಅಗೆದು ಮೋರಿ ಹಾಕಿ ಹೊಸ ರಸ್ತೆ ನಿರ್ಮಾಣಕ್ಕೆ ಕಾಮಗಾರಿ ನಡೆಯುತ್ತಿದೆ ಮಳೆ ಆರಂಭಗೊಂಡ ನಂತರ ರಸ್ತೆ ಸಂಪೂರ್ಣ ಕೆಸರಿನಿಂದ ಕೂಡಿದ್ದು 200ಮೀ ಉದ್ದದಲ್ಲಿ ಹೊಂಡಗಳೇ ಕಾಣಿಸುತ್ತಿವೆ. ಮಣ್ಣಿನ ರಸ್ತೆ ಮೇಲೆ ಹಾಕಿರುವ ಜಲ್ಲಿಯ ಪುಡಿ ಮಳೆ ನೀರಿನಲ್ಲಿ ಕೊಚ್ಚಿಹೋಗಿ ಚರಂಡಿ ಸೇರಿದೆ. ಹೊಂಡಗಳನ್ನು ತಪ್ಪಿಸಿಕೊಂಡು ಹೋಗಲು ವಾಹನ ಸವಾರರು ಸರ್ಕಸ್ ಮಾಡಬೇಕಾಗಿದೆ.


ಉದಯವಾಹಿನಿ ಚಿತ್ರ

**ರಸ್ತೆ ಅಪಘಾತಕ್ಕೆ ಆಹ್ವಾನ**

ಹಲವು ಬಾರಿ ಅಧಿಕಾರಿಗಳಿಗೆ ಮೌಖಿಕ ದೂರು ನೀಡಲಾಗಿದೆ. ಆದರೆ ಪ್ರಯೋಜನವಾಗಲಿಲ್ಲ. ಮಳೆಗಾಲಕ್ಕೆ ಮೊದಲು ಗುತ್ತಿಗೆದಾರರು ಕಾಮಗಾರಿಗೆ ವೇಗ ನೀಡದ್ದರಿಂದ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಸ್ಥಳೀಯರು ದೂರಿದ್ದಾರೆ.

'ಇಲ್ಲಿ ಕೆಲವೊಮ್ಮೆ ವಾಹನಗಳು ಕೆಸರಿನಲ್ಲಿ ಹೂತುಹೋಗಿ ಸಮಸ್ಯೆ ಉಂಟಾಗಿದೆ.

ರಾತ್ರಿ ವೇಳೆಯಂತೂ ಮಳೆ ಸುರಿಯುತ್ತಿದ್ದರೆ ಹೊಂಡ ಎಲ್ಲಿದೆ, ನೀರು ಎಲ್ಲಿ ನಿಂತಿದೆ ಎಂದು ತಿಳಿಯದೆ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಈಚೆಗೆ ರಸ್ತೆಗೆ ಜಲ್ಲಿ ಹಾಕಿ ಸಮತಟ್ಟು ಮಾಡಿದರೂ ನಿರಂತರ ಮಳೆಗೆ ಮತ್ತೆ ಸಮಸ್ಯೆ ಆಗಿದೆ' ಎಂದು ಅವರು ದೂರುತ್ತಾರೆ.

ಪಂಜಿಮಾರು ಮುಖ್ಯ ರಸ್ತೆಯ ಸ್ಥಿರಮೇಶ್ ಪೂಜಾರಿ ಗ್ರಾಮಸ್ಥಎಂಟು ತಿಂಗಳು ಕಳೆದರೂ ಗುತ್ತಿಗೆದಾರರು ಪಂಜಿಮಾರು ಸಮೀಪ ರಸ್ತೆಯ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂಬುದು ಬೇಸರದ ವಿಷಯ. ಮಳೆಗಾಲದಲ್ಲಿ ಇಲ್ಲಿ ಸಮಸ್ಯೆ ಆಗಬಹುದು ಎಂದು ತಿಳಿದಿದ್ದರೂ ಕಾಳಜಿ ವಹಿಸಲಿಲ್ಲ.

ಹೀಗಾಗಿ ಈ ರಸ್ತೆ ಅಪಘಾತಕ್ಕೆ ಆಹ್ವಾನ ನೀಡುತ್ತಿದೆ. ಕೆ.ಆರ್. ಪಾಟ್ಕರ್ ಶಿರ್ವ ಗ್ರಾಮ ಪಂಚಾಯಿತಿ ಸದಸ್ಯಮಳೆ ಆರಂಭಗೊಂಡ ನಂತರ ಈ ರಸ್ತೆಯಲ್ಲಿ ಸಂಚಾರಿಸಲು ಆಗುತ್ತಿಲ್ಲ. ಅಧಿಕಾರಿಗಳ ಬಳಿ ಅನೇಕ ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನ ಆಗಲಿಲ್ಲ. ಮಳೆಗಾಲ ಮುಗಿಯುವವರೆಗೂ ಕಾಮಗಾರಿ ಪೂರ್ಣಗೊಳ್ಳುವುದು ಅನುಮಾನ.

#### ವಾಹನ ಸವಾರರು ಸರ್ಕಸ್

ಹೊಂಡವನ್ನು ಮುಚ್ಚಲು ಆಗಾಗ ಜಲ್ಲಿಕಲ್ಲು ಹಾಕಿ ಸಮತಟ್ಟು ಮಾಡಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ಮತ್ತಷ್ಟು ಸಮಸ್ಯೆ ಆಗುತ್ತಿದೆ. ಈ ದಾರಿಯಲ್ಲಿ ಹೊರ ಜಿಲ್ಲೆ ಹಾಗೂ ಹೊರ ರಾಜ್ಯದ ಪ್ರವಾಸಿಗಳ ವಾಹನಗಳು ಹೆಚ್ಚು ಓಡಾಡುತ್ತವೆ. ಅವರಿಗೆ ಹೆಚ್ಚು ಪ್ರಯಾಸ ಆಗುತ್ತದೆ. ವೇಗವಾಗಿ ಬಂದು ದಿಢೀರ್ ಬ್ರೇಕ್ ಹಾಕುವುದರಿಂದ ಅಪಘಾತಗಳು ಸಂಭವಿಸುತ್ತವೆ. ಕಾಮಗಾರಿ ನಡೆಯುವ ಬಗ್ಗೆ ಹಾಗೂ ರಸ್ತೆ ಹದಗೆಟ್ಟಿರುವ ಬಗ್ಗೆ ಫಲಕಗಳನ್ನು ಅಳವಡಿಸಿದರೆ ಸ್ವಲ್ಪ ಎಚ್ಚರ ವಹಿಸಲು ಸಾಧ್ಯ, ಎಂದು ಸವಾರರು ಹೇಳುತ್ತಾರೆ.

## ವೈದ್ಯರ ಕೊರತೆ: ತಪ್ಪದ ಜನರ ಗೋಳು

• ಉದಯವಾಹಿನಿ, ಹಾನಗಲ್

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಹೆಚ್ಚಿದ್ದು, ಇರುವ ವೈದರಷ್ಟೇ ಒತ್ತಡದಲ್ಲಿ ಜನರಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ತಪಾಸಣೆ ಹಾಗೂ ಚಿಕಿತ್ಸೆ ಪಡೆಯಲು ಜನರು ಗಂಟೆಗಟ್ಟಲೇ ಸರದಿಯಲ್ಲಿ ನಿಂತು ಸುಸ್ತಾಗುತ್ತಿದ್ದಾರೆ. ಮಕ್ಕಳು ಹಾಗೂ ವೃದ್ಧರ ಪಾಡು ಹೇಳತೀರದ್ದಾಗಿದೆ. ಆಸ್ಪತ್ರೆಯಲ್ಲಿ 4 ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದೆ. ಆದರೆ, ಸದ್ಯ ಒಬ್ಬ ವೈದ್ಯರಷ್ಟೇ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದಂತೆ 14 ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 9 ವೈದ್ಯರಷ್ಟೇ ಕೆಲಸ ಮಾಡುತ್ತಿದ್ದಾರೆ.

ಐವರು ವೈದ್ಯರ ಕೊರತೆ ಆರೋಗ್ಯ ಸೇವೆ ಮೇಲೆ ಪರಿಣಾಮ ಬೀರಿದೆ. ಮಳೆಗಾಲ, ಚಳಿಗಾಳ ಹಾಗೂ ಬೇಸಿಗೆ ಕಾಲದಲ್ಲಿ ಚರ್ಮರೋಗ ಸಮಸ್ಯೆಗಳು ಹೆಚ್ಚಿರುತ್ತದೆ. ಇಂಥ ಸಂದರ್ಭದಲ್ಲಿ ಜನರು ಆಸ್ಪತ್ರೆಗೆ ಬರುತ್ತಿದ್ದು, ಚರ್ಮ ರೋಗ ತಜ್ಞರು ಇಲ್ಲದಿದ್ದರಿಂದ ಜನರು ಪರದಾಡುತ್ತಿದ್ದಾರೆ. ಬೇರೆ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳ ಮೊರೆ ಹೋಗುತ್ತಿದ್ದಾರೆ. ಎಲುಬು ಹಾಗೂ ಕೀಲು ವೈದ್ಯರ ಕೊರತೆಯೂ ಇದೆ. ಕೈ, ಕಾಲಿಗೆ ಪೆಟ್ಟಾದವರು ಹಾಗೂ ಎಲುಬು-ಕೀಲು ಸಮಸ್ಯೆಯಿಂದ ಬಳಲುತ್ತಿರುವವರು ಖಾಸಗಿ ಆಸ್ಪತ್ರೆಗೆ ಹೋಗುವ ಸ್ಥಿತಿ ಇದೆ.ಆಸ್ಪತ್ರೆಯಲ್ಲಿ ಕಚೇರಿ ಸೂಪರಿಂಟೆಂಡೆಂಟ್ ಹುದ್ದೆ ಖಾಲಿ ಇದ್ದು, ಹಲವು ಕೆಲಸಗಳಿಗೆ ಹಿನ್ನಡೆ ಆಗಿದೆ. ಎಫ್‌ಡಿಎ ಹಾಗೂ ಎಸ್‌ಡಿಎ ಹುದ್ದೆಗಳೂ ಖಾಲಿ ಇವೆ. ಶುಶ್ರೂಷಕ ವಿಭಾಗದ ಸೂಪರಿಂಟೆಂಡೆಂಟ್ ಹುದ್ದೆಯೂ ಖಾಲಿ ಇದೆ. ಪ್ರಯೋಗಾಲಯದ ಟೆಕ್ನಾಲಜಿಸ್ಟ್ ಹುದ್ದೆಯೂ ಖಾಲಿಯಿದೆ. 33 ಸಹಾಯಕ ಹುದ್ದೆಗಳಲ್ಲಿ 31 ಹುದ್ದೆ ಖಾಲಿ ಇರುವುದು ಸ್ವಚ್ಛತೆ ಹಾಗೂ ಇತರೆ ಕೆಲಸಗಳ ಮೇಲೆ ಪರಿಣಾಮ ಬೀರಿದೆ.


ಉದಯವಾಹಿನಿ ಚಿತ್ರ

#### ತಿಂಗಳಲ್ಲಿ 25 ಸಾವಿರ ಜನರ ಭೇಟಿ

ಹಾನಗಲ್ ತಾಲ್ಲೂಕಿನಲ್ಲಿ ಡೆಂಗಿ, ತೀವ್ರ ಜ್ವರ ಹಾಗೂ ಇತರೆ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಒಂದೇ ತಿಂಗಳಿನಲ್ಲಿ ಆಸ್ಪತ್ರೆಗೆ 25 ಸಾವಿರ ಜನ ಭೇಟಿ ನೀಡಿ, ಚೀಟಿ ಮಾಡಿಸಿಕೊಂಡು ಚಿಕಿತ್ಸೆ ಪಡೆದುಕೊಂಡಿದ್ದಾರೆ.

# ರಿಪಬ್ಲಿಕನ್ ಪಕ್ಷದ ಉಪಾಧ್ಯಕ್ಷ ಅಭ್ಯರ್ಥಿ ಸ್ಥಾನಕ್ಕೆ ಜೆ.ಡಿ. ವ್ಯಾನ್ಸ್ ನಾಮಕರಣ

## ಯಾರಿದು ಉಷಾ ವ್ಯಾನ್ಸ್ ಅಮೆರಿಕ ಉಪಾಧ್ಯಕ್ಷ ಚುನಾವಣಾ ಅಭ್ಯರ್ಥಿಯ ಪತ್ನಿಗೆ ಏಕಿಷ್ಟು ಮಹತ್ವ?

**ವಾಷಿಂಗ್ಟನ್:** 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆ ಹಲವು ಕಾರಣಗಳಿಂದಾಗಿ ಭಾರತೀಯರ ಗಮನ ಸೆಳೆದಿದೆ. ಇದೀಗ ಟ್ರಂಪ್ ಅವರ 'ಉಪಾಧ್ಯಕ್ಷ ಆಯ್ಕೆ' ಕೂಡಾ ಭಾರತೀಯರಲ್ಲಿ ಸಂತಸ ಹೆಚ್ಚಿಸಿದೆ. ಏಕೆಂದರೆ, ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು, ರಿಪಬ್ಲಿಕನ್ ಪಕ್ಷದ ಉಪಾಧ್ಯಕ್ಷ ಅಭ್ಯರ್ಥಿ ಸ್ಥಾನಕ್ಕೆ ಜೆ. ಡಿ. ವ್ಯಾನ್ಸ್ ಅವರ ಹೆಸರನ್ನು ನಾಮಕರಣ ಮಾಡಿದ್ದಾರೆ. ಒಹಾಯೋ ರಾಜ್ಯದ ರಿಪಬ್ಲಿಕನ್ ಪಕ್ಷದ ಸೆನೆಟರ್ ಅಗಿರುವ ಜೆ. ಡಿ. ವ್ಯಾನ್ಸ್ ಅವರ ಪತ್ನಿ ಭಾರತೀಯ ಮೂಲದವರು ಅನ್ನೋದೇ ವಿಶೇಷ. ಜೆ. ಡಿ. ವ್ಯಾನ್ಸ್ ಅವರ ಹೆಸರನ್ನ ಟ್ರಂಪ್ ಘೋಷಣೆ ಮಾಡುವ ವೇಳೆ ವ್ಯಾನ್ಸ್ ಅವರ ಪತ್ನಿ ಉಷಾ ಚಿಲುಕೂರಿ ವ್ಯಾನ್ಸ್ ಕೂಡಾ ಸಮಾರಂಭದಲ್ಲಿ ಹಾಜರಿದ್ದರು. ಈ ಮೂಲಕ ಉಷಾ ಅವರು ಎಲ್ಲರ ಗಮನ ಸೆಳೆದರು.

**ಕಾಲೇಜಿನಲ್ಲಿ ಜೆಡಿ ವ್ಯಾನ್ಸ್‌ಗೆ ಉಷಾ ಮುಖಾಮುಖಿ**

2013ರಲ್ಲಿ ಯೇಲ್ ಕಾನೂನು ಶಾಲೆಗೆ ಸೇರ್ಪಡೆಗೊಂಡ ಉಷಾ ಅವರು ಇಲ್ಲಿಯೇ ಜೆ. ಡಿ. ವ್ಯಾನ್ಸ್ ಅವರನ್ನು ಮೊದಲ ಬಾರಿಗೆ ಕಂಡರು. ಕಾಲೇಜು ಶಿಕ್ಷಣದ ಬಳಿಕ ಇಬ್ಬರೂ ಕೂಡಾ ಒಟ್ಟಿಗೇ ಕೆಲಸ ಮಾಡಿದರು. 2014ರಲ್ಲಿ ಕಾನೂನು ಪದವಿ ಪಡೆದ ಬಳಿಕ ಮದುವೆಯಾದರು.




ಉಷಾ ಅವರು ಯೇಲ್ ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಷಯದಲ್ಲಿ ಬಿಎ ಪದವಿ ಪಡೆದಿದ್ದಾರೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಆಧುನಿಕ ಇತಿಹಾಸ ವಿಚಾರದಲ್ಲಿ ಎಂಫಿಲ್ ಪದವಿಯನ್ನೂ ಪಡೆದಿದ್ದಾರೆ. ವ್ಯಾನ್ಸ್ ಹಾಗೂ ಉಷಾ ದಂಪತಿಗೆ ಮೂವರು ಮಕ್ಕಳು. ಇವಾನ್ ಹಾಗೂ ವಿವೇಕ್ ಎಂಬ ಇಬ್ಬರು ಪುತ್ರರು ಹಾಗೂ ಮಿರಾಬೆಲ್ ಎಂಬ ಹೆಸರಿನ ಪುತ್ರಿ ಇದ್ದಾರೆ.

**ಪತಿಯ ರಾಜಕೀಯ ಓಟಕ್ಕೆ ಪತ್ನಿಯ ಸಾಥ್**

ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದ ಜೆ. ಡಿ. ವ್ಯಾನ್ಸ್ ಅವರಿಗೆ ಅವರ ಪತ್ನಿ ಉಷಾ ಬೆಂಬಲವಾಗಿ ನಿಂತರು. ಪತಿಯ ಜೊತೆಗೆ ಎಲ್ಲಾ ರಾಜಕೀಯ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗಿಯಾಗುವ ಉಷಾ, ತಮ್ಮ ಪತಿಗೆ ಸಲಹೆ ಸೂಚನೆ ನೀಡೋದು, ಸಹಕಾರ ನೀಡುವ ಕೆಲಸ ಮಾಡುತ್ತಾರೆ. ಜೆ. ಡಿ. ವ್ಯಾನ್ಸ್ ತಮ್ಮ ಪತ್ನಿಯನ್ನು ನನ್ನೆಲ್ಲಾ ಕೆಲಸ ಕಾರ್ಯಗಳ ಸಂಗಾತಿ ಎಂದು ವರ್ಣಿಸುತ್ತಾರೆ.

2016 ರಿಂದ 2022ರವರೆಗೆ ವ್ಯಾನ್ಸ್ ಪರವಾಗಿ ಅವರ ಎಲ್ಲಾ ರಾಜಕೀಯ ಪ್ರಚಾರಗಳಲ್ಲೂ ಉಷಾ ಸಕ್ರಿಯವಾಗಿ ಭಾಗಿಯಾಗಿದ್ದರು. 2018ರಲ್ಲಿ ಉಷಾ ಅವರು ಒಹಾಯೋದಲ್ಲಿ ರಿಪಬ್ಲಿಕನ್ ಪಕ್ಷದ ಸದಸ್ಯೆಯಾಗಿಯೂ ನೋಂದಾಯಿತರಾಗಿದ್ದರು. ಜೆ. ಡಿ. ವ್ಯಾನ್ಸ್ ಅವರು ತಮ್ಮ ಪತ್ನಿ ತಮಗೆ ನೀಡುತ್ತಿರುವ ಬೆಂಬಲ ಹಾಗೂ ನೆರವಿನ ಕುರಿತಾಗಿ ಬಹಿರಂಗವಾಗಿಯೇ ಧನ್ಯವಾದ ಅರ್ಪಣೆ ಮಾಡುತ್ತಾರೆ.

### ಉಷಾ ಅವರ ಹಿನ್ನೆಲೆ ಏನು?

ಉಷಾ ಅವರ ಪೋಷಕರು ಮೂಲತಃ ಭಾರತ ದೇಶದ ಆಂಧ್ರ ಪ್ರದೇಶ ರಾಜ್ಯದವರು. ಉಷಾ ಅವರು ಜನಿಸುವ ಮುನ್ನವೇ ಅವರ ತಂದೆ - ತಾಯಿ ಅಮೆರಿಕಗೆ ವಲಸೆ ಹೋಗಿದ್ದರು. ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಉಷಾ ಅವರ ಜನನವಾಯ್ತು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಕ್ಯಾಲಿಫೋರ್ನಿಯಾದ ಸಮೀಪದ ಸ್ಯಾನ್ ಡಿಯಾಗೋದಲ್ಲಿ ಅವರು ಬಾಲ್ಯ ಕಳೆದರು. ಉಷಾ ಅವರ ಲಿಂಕ್ಡ್ ಇನ್ ಪ್ರೊಫೈಲ್‌ನಲ್ಲಿ ಇರುವ ಮಾಹಿತಿ ಪ್ರಕಾರ ಅವರು ರಾಂಚೊ ಪೆನಾಸ್ಕ್ವಿಟೊಸ್ ಎಂಬಲ್ಲಿ ಇರುವ ಮೌಂಟ್ ಕಾರ್ಮೆಲ್ ಹೈ ಸ್ಕೂಲ್‌ನಲ್ಲಿ ಶಿಕ್ಷಣ ಪಡೆದಿದ್ದಾರೆ.


ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಓರ್ವ ಹೆಣ್ಣು ಇರುತ್ತಾಳೆ ಎಂಬ ಮಾತಿದೆ. ಅಮೆರಿಕದ ಅಧ್ಯಕ್ಷೀಯ ಚುನಾವಣೆ ವೇಳೆ ರಿಪಬ್ಲಿಕನ್ ಪಕ್ಷದ ಉಪಾಧ್ಯಕ್ಷ ಅಭ್ಯರ್ಥಿಯಾಗಿ ನಾಮಕರಣಗೊಂಡಿರುವ ಜೆ. ಡಿ. ವ್ಯಾನ್ಸ್ ಅವರಿಗೆ ಈ ಮಾತು ಸೂಕ್ತವಾಗಿ ಅನ್ವಯ ಆಗುತ್ತೆ. ವ್ಯಾನ್ಸ್ ಅವರ ಪತ್ನಿ ಉಷಾ ಚಿಲುಕೂರಿ ವ್ಯಾನ್ಸ್ ಅವರು ಭಾರತೀಯ ಮೂಲದವರಾಗಿದ್ದು, ತಮ್ಮ ಪತಿಯ ರಾಜಕೀಯ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿದ್ದಾರೆ.

- ಒಹಾಯೋ ರಾಜ್ಯದ ರಿಪಬ್ಲಿಕನ್ ಪಕ್ಷದ ಸೆನೆಟರ್ ಅಗಿರುವ ಜೆ. ಡಿ. ವ್ಯಾನ್ಸ್
- ವ್ಯಾನ್ಸ್ ಅವರ ಪತ್ನಿ ಭಾರತೀಯ ಮೂಲದ ಉಷಾ ಚಿಲುಕೂರಿ ವ್ಯಾನ್ಸ್

# ಉಕ್ರೇನ್ ಯುದ್ಧ ನಿಲ್ಲಿಸಲು ರಷ್ಯಾ ಮೇಲೆ ಒತ್ತಡ ಹಾಕಲು ಮನವಿ

**ಮಿಲ್ವಾಕೀ:** ಭಾರತವು ರಷ್ಯಾದೊಂದಿಗೆ ದೀರ್ಘಕಾಲದ ಸಂಬಂಧವನ್ನು ಹೊಂದಿದೆ ಎಂದು ಗಮನಿಸಿದ ಅಮೆರಿಕ ಮಾಸ್ಕೋದೊಂದಿಗಿನ ಆ ಸಂಬಂಧವನ್ನು ಬಳಸಿಕೊಳ್ಳಲು ನವದೆಹಲಿಯನ್ನು ಉತ್ತೇಜಿಸಿದೆ ಮತ್ತು ಉಕ್ರೇನ್ ವಿರುದ್ಧದ ಅಕ್ರಮ ಯುದ್ಧವನ್ನು ಕೊನೆಗೊಳಿಸುವಂತೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಒತ್ತಾಯಿಸುವಂತೆ ಕೇಳಿಕೊಂಡಿದೆ. ವಿದೇಶಾಂಗ ಇಲಾಖೆ ವಕ್ತಾರ ಮ್ಯಾಥ್ಯೂ ಮಿಲ್ಲರ್ ತಮ ದೈನಂದಿನ ಸುದ್ದಿಗೋಷ್ಠಿಯಲ್ಲಿ ಈ ಹೇಳಿಕೆಗಳನ್ನು ನೀಡಿದರು.ಭಾರತವು ರಷ್ಯಾದೊಂದಿಗೆ ದೀರ್ಘಕಾಲದ ಸಂಬಂಧವನ್ನು ಹೊಂದಿದೆ. ಇದು ಪ್ರಸಿದ್ಧವಾಗಿದೆ ಎಂದು ನಾನು ಭಾವಿಸುತ್ತೇನೆ.

ನಾವು ಭಾರತ ಸರ್ಕಾರದ ಮೇಲೆ ಪ್ರಭಾವ ಬೀರುವುದನ್ನು ಮುಂದುವರಿಸುತ್ತೇವೆ, ಇದು ರಷ್ಯಾದೊಂದಿಗಿನ ಅವರ ಸಂಬಂಧಕ್ಕೆ ಬಂದಾಗ ನಮ ಪ್ರಮುಖ ಪಾಲುದಾರ ಭಾರತ ಎನ್ನುವುದನ್ನು ಮರೆಯುವುದಿಲ್ಲ ಎಂದು ಮಿಲ್ಲರ್ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಜುಲೈ 9 ರಂದು ಪ್ರಧಾನಿ ನರೇಂದ್ರ ಮೋದಿ ರಷ್ಯಾವನ್ನು ತೊರೆದ ಕೂಡಲೇ ಮಿಲ್ಲರ್ ಇದೇ ರೀತಿಯ ಹೇಳಿಕೆಗಳನ್ನು ನೀಡಿದ್ದರು.




ಉಕ್ರೇನ್ ಸಂಘರ್ಷದ ನಡುವೆ ಪಶ್ಚಿಮ ದೇಶಗಳು ನಿಕಟವಾಗಿ ವೀಕ್ಷಿಸುತ್ತಿರುವ 22 ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆಗಾಗಿ ಮೋದಿ ಜುಲೈ 8-9 ರಿಂದ ಎರಡು ದಿನಗಳ ಕಾಲ ರಷ್ಯಾದಲ್ಲಿದ್ದರು. 2022 ರಲ್ಲಿ ಮಾಸ್ಕೋ, ಕೈವ್ ನಡುವೆ ಯುದ್ಧ ಪ್ರಾರಂಭವಾದ ನಂತರ ಇದು ಪ್ರಧಾನಿಯವರ ಮೊದಲ ರಷ್ಯಾ ಭೇಟಿಯಾಗಿದೆ. ಜುಲೈ 9 ರಂದು ಪುಟಿನ್ ಅವ ರೊಂದಿಗಿನ ಮಾತುಕತೆಯ ಸಂದರ್ಭದಲ್ಲಿ, ಪ್ರಧಾನಿ ಮೋದಿ ಅವರು ಅಧ್ಯಕ್ಷ ಪುಟಿನ್ ಅ ವರಿಗೆ ಯುಕ್ರೇನ್ ಸಂಘರ್ಷಕ್ಕೆ ಪರಿಹಾರವು ಯುದ್ಧಭೂಮಿಯಲ್ಲಿ ಸಾಧ್ಯವಿಲ್ಲ ಮತ್ತು ಬಾಂಬ್ ಮತ್ತು ಗುಂಡುಗಳ ನಡುವೆ ಶಾಂತಿ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು.

> ರಷ್ಯಾದೊಂದಿಗೆ ಆ ಸಂಬಂಧವನ್ನು ಬಳಸಿಕೊಳ್ಳಲು ನಾವು ಭಾರತವನ್ನು ಪ್ರೋತ್ಸಾಹಿಸಿದ್ದೇವೆ, ದೀರ್ಘಾವಧಿಯ ಸಂಬಂಧ ಮತ್ತು ಅವರು ಹೊಂದಿರುವ ವಿಶಿಷ್ಟ ಸ್ಥಾನ, ಅಧ್ಯಕ್ಷ ಪುಟಿನ್ ಅವರ ಅಕ್ರಮ ಯುದ್ಧವನ್ನು ಕೊನೆಗೊಳಿಸಲು, ಈ ಸಂಘರ್ಷಕ್ಕೆ ನ್ಯಾಯಯುತವಾದ ಶಾಂತಿ, ಶಾಶ್ವತ ಶಾಂತಿಯನ್ನು ಕಂಡುಕೊಳ್ಳಲು ಒತ್ತಾಯಿಸಲು ಭಾರತವನ್ನು ಕೇಳಿಕೊಂಡಿದ್ದೇವೆ ಎಂದಿದ್ದಾರೆ.

ಭಾರತವು ರಷ್ಯಾದೊಂದಿಗೆ ತನ್ನ ವಿಶೇಷ, ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಸಮರ್ಥವಾಗಿ ಸಮರ್ಥಿಸಿಕೊಂಡಿದೆ ಮತ್ತು ಉಕ್ರೇನ್ ಸಂಘರ್ಷದ ಹೊರತಾಗಿಯೂ ಸಂಬಂಧಗಳಲ್ಲಿ ಆವೇಗವನ್ನು ಉಳಿಸಿಕೊಂಡಿದೆ. 2022 ರಲ್ಲಿ ಉಕ್ರೇನ್‌ನ ಮೇಲೆ ರಷ್ಯಾದ ಆಕ್ರಮಣವನ್ನು ಭಾರತ ಇನ್ನೂ ಖಂಡಿಸಿಲ್ಲ, ಸಂಭಾಷಣೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷದ ಪರಿಹಾರಕ್ಕಾಗಿ ಸತತವಾಗಿ ಪಿಚ್ ಮಾಡಿದೆ.

# ಇನ್ಫೋಸಿಸ್ ಅಭಿವೃದ್ಧಿಪಡಿಸಿರುವ ಆದಾಯ ತೆರಿಗೆ ಪೋರ್ಟಲ್‌ನಲ್ಲಿ ದೋಷ

**ನವದೆಹಲಿ:** ಇನ್ಫೋಸಿಸ್ ಅಭಿವೃದ್ಧಿಪಡಿಸಿರುವ ಆದಾಯ ತೆರಿಗೆ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷಗಳು ಕಾಣಿಸಿಕೊಂಡಿವೆ. ಪ್ರಸಕ್ತ ಸಾಲಿನ ಆದಾಯ ತೆರಿಗೆ ರಿಟರ್ನ್(ಐಟಿಆರ್) ಪಾವತಿಸಲು ಜು.31 ಕೊನೆಯ ದಿನವಾಗಿರುವ ಸಂದರ್ಭದಲ್ಲೇ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿರುವುದು ಚಾರ್ಟರ್ಡ್ ಅಕೌಂಟೆಂಟ್‌ಗಳಲ್ಲಿ ಹತಾಶೆ ಮೂಡಿಸಿದೆ. ಕೆಲವು ಸಿಎ ಗಳು ಇನ್ಫೋಸಿಸ್ ಸಂಸ್ಥೆಯನ್ನು ಸಾಮಾಜಿಕ ಜಾಲ ತಾಣದಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ.




ಸಂಸ್ಥೆ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ವಾ ರಕ್ಕೆ 70 ಗಂಟೆ ಕೆಲಸ ಮಾಡುವ ಸಲಹೆಯನ್ನು ಹಾಸ್ಯ ಮಯವಾಗಿ ಉಲ್ಲೇಖಿಸಿದ್ದಾರೆ.

ಮೂರ್ತಿ ಅವರು ಸಲಹೆ ನೀಡಿದಂತೆಯೇ ಅವರು ಮತ್ತು ಇತರ ತೆರಿಗೆ ವತ್ತಿಪರರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಲು ಪ್ರಾರಂಭಿಸಿದ್ದಾರೆ ಎಂದು ಅವರು ವ್ಯಾಖ್ಯಾನ ಮಾಡಿದ್ದಾರೆ. ಆದಾಗ್ಯೂ, ಆದಾಯ ತೆರಿಗೆ ಪೋರ್ಟಲ್ ಸರಾಗವಾಗಿ ನಡೆಯಲು ದಿನಕ್ಕೆ ಕನಿಷ್ಠ ಒಂದು ಗಂಟೆ ಕೆಲಸ ಮಾಡಲು ಮೂರ್ತಿ ಅವರು ತಮ ಇನ್ಫೋಸಿಸ್ ತಂಡವನ್ನು ಕೇಳಬಹುದೇ ಎಂದು ಕೆಲವರು ಪ್ರಶ್ನಿಸಿದ್ದಾರೆ. ನಾರಾಯಣ ಮೂರ್ತಿ ಸಾರ್, ನಿಮ ಸಲಹೆಯ ಮೇರೆಗೆ ನಾವು, ತೆರಿಗೆ ವತ್ತಿಪರರು ವಾರಕ್ಕೆ 70 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಲು ಪ್ರಾರಂಭಿಸಿದ್ದೇವೆ. ಆದಾಯ ತೆರಿಗೆ ಪೋರ್ಟಲ್ ಅನ್ನು ಸುಗಮವಾಗಿ ನಡೆಸಲು ನಿಮ ಇನ್ಫೋಸಿಸ್ ತಂಡಕ್ಕೆ ವಾರಕ್ಕೆ ಕನಿಷ್ಠ ಒಂದು ಗಂಟೆ ಕೆಲಸ ಮಾಡಲು ಹೇಳಿ. ಮುಂಚಿತವಾಗಿ ಧನ್ಯವಾದಗಳು ಎಕ್ಸ್ ಬಳಕೆದಾರ ಬರೆದಿದ್ದಾರೆ.

ಅವರ ಈ ಪೋಸ್ಟ್ 93,000 ಕ್ಕೂ ಹೆಚ್ಚು ವೀಕ್ಷಣೆಗಳನ್ನು ಮತ್ತು ನೂರಾರು ಕಾಮೆಂಟ್‌ಗಳು ಮತ್ತು ಇಷ್ಟಗಳನ್ನು ಸಂಗ್ರಹಿಸಿದೆ. ಸಾಮಾಜಿಕ ಮಾಧ್ಯಮ ಬಳಕೆದಾರರು ಬಸು ಅವರ ಭಾವನೆಗಳನ್ನು ಪ್ರತಿಧ್ವನಿಸಿದರು, ವಾರ್ಷಿಕ ಮಾಹಿತಿ ಹೇಳಿಕೆ, ತೆರಿಗೆ ಮಾಹಿತಿ ಹೇಳಿಕೆ ಡೌನ್‌ಲೋಡ್ ಮಾಡುವಲ್ಲಿನ ಸಮಸ್ಯೆಗಳನ್ನು ಉಲ್ಲೇಖಿಸಿ, ತೆರಿಗೆ ರಿಟರ್ನ್ಸ್ ಸಲ್ಲಿಸಲು ಪೋರ್ಟಲ್ ನಿರ್ಣಾಯಕವಾಗಿದೆ.

# ಉಗ್ರರೊಂದಿಗೆ ಗುಂಡಿನ ಚಕಮಕಿ; 4 ಯೋಧರು ಹುತಾತ್ಮ

**ಜಮ್ಮು:** ಕಳೆದ ರಾತ್ರಿ ಕಾಶ್ಮೀರದ ದೋಡಾ ಜಿಲ್ಲೆಯ ದೇಸಾ ಅರಣ್ಯ ಪ್ರದೇಶದ ಧರಿ ಗೋಟೆ ಉರರಬಾಗಿಯಲ್ಲಿ ರಾತ್ರಿ ಉಗ್ರರು ಹಾಗೂ ಸೇನಾಪಡೆ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ಸೇನಾಧಿಕಾರಿ, ಮೂವರು ಯೋಧರು ಹುತಾತರಾಗಿದ್ದಾರೆ. ಐವರು ಯೋಧರು ಗಂಭೀರವಾಗಿ ಗಾಯಗೊಂಡಿದ್ದಾರೆ. ರಾಷ್ಟ್ರೀಯ ರೈಫಲ್ಸ್ ಪಡೆ ಮತ್ತು ಜಮು ಮತ್ತು ಕಾಶೀರ ಪೊಲೀಸರ ವಿಶೇಷ ತಂಡ ಕಾರ್ಯಾಚರಣೆ ವೇಳೆ ಉಗ್ರರು ದಾಳಿ ನಡೆಸಿದ್ದಾರೆ. 7.45 ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವೇಳೆ 20 ನಿಮಿಷಕ್ಕೂ ಹೆಚ್ಚು ಕಾಲ ನಡೆದ ಗುಂಡಿನ ಚಕಮಕಿಯಲ್ಲಿ ಬಬ್ಬರು ಸೇನಾ ಅಧಿಕಾರಿ ಸೇರಿದಂತೆ ನಾಲ್ವರು ಯೋಧರು ಹಾಗೂ ಒಬ್ಬ ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದರು ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು ಆದರೆ ನಾಲ್ವರು ಹುತಾತರಾಗಿದ್ದಾರೆ.

ಘಟನಾ ಸ್ಥಳಕ್ಕೆ ಹೆಚ್ಚುವರಿ ಯೋಧರ ಪಡೆ ಕಳುಹಿಸಲಾಗಿದೆ. ಭಯೋತ್ಪಾದಕರು ಆಡಗಿರುವ ಬಗ್ಗೆ ಮಾಹಿತಿಯ ನಂತರ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು. ರಿಯಾಸಿ ಜಿಲ್ಲೆಯ ಭಯೋತ್ಪಾದಕರ ಅಡಗುತಾಣದಿಂದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

30 ಸುತ್ತುಗಳ ಎಕೆ-47, ಎಕೆ-47 ರೈಫಲ್‌ನ ಒಂದು ವ್ಯಾಗಜೀನ್, ಒಂದು ಎಚ್‌ಇ-36 ಹ್ಯಾಂಡ್ ಗ್ರೆನೇಡ್ ಸೇರಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ 35 ದಿನಗಳಲ್ಲಿ ದೋಡಾ ಪ್ರದೇ ಶದಲ್ಲಿ ಇದು ನಾಲ್ಕನೇ ಎನ್‌ಕೌಂಟರ್ ಆಗಿದೆ. ಘ ಟನೆಯಲ್ಲಿ ಮೂವರು ಉಗ್ರರು ಹತರಾಗಿದ್ದಾರೆ.

# ವಿಐಪಿಯ ಮುಖ್ಯಸ್ಥ ಮುಖೇಶ್ ಸಹಾನಿ ತಂದೆಯ ಹತ್ಯೆ

**ಪಾಟ್ನಾ:** ಬಿಹಾರದಲ್ಲಿ ಇಂಡಿಯಾ ಒಕ್ಕೂಟದ ಅಂಗ ಪಕ್ಷವಾಗಿದ್ದ ವಿಕಾ ಸಶೀಲ್ ಇನ್ಸಾನ್ ಪಾರ್ಟಿ ಮುಖ್ಯಸ್ಥ ಮುಖೇಶ್ ಸಹಾನಿ ಅವರ ತಂದೆ ಯನ್ನು ಬರ್ಬರವಾಗಿ ಕೊಲೆ ಮಾಡ ಲಾದೆ. ಬಿಹಾರದ ದರ್ಬಂಗಾ ಜಿಲ್ಲೆಯಲ್ಲಿ ತಮ ಪೂರ್ವಜರ ಮನೆಯಲ್ಲಿ ಜಿತನ್ ಸಹಾನಿ ಅವರು ಬರ್ಬರವಾಗಿ ಹತ್ಯೆಯಾಗಿದ್ದಾರೆ. ಮಂಗಳವಾರ ಬೆ ಳಗ್ಗೆ ಹಾಸಿಗೆಯ ಮೇಲೆ ಜಿತನ್ ಸಹಾನಿ ಅವರ ಛಿದ್ರಗೊಂಡ ಶವ ಪತ್ತೆಯಾಗಿದೆ. ಹಿರಿಯ ಪೊಲೀಸ್ ಅಧಿಕಾರಿ ಜಗನ್ನಾಥ್ ರೆಡ್ಡಿ ತಿಳಿಸಿದ್ದಾರೆ.



ಮಾಜಿ ಸಚಿವ ಮುಖೇಶ್ ಸಹಾನಿ ವಿಕಾಸಶೀಲ್ ಇನ್ಸಾನ್ ಪಾರ್ಟಿಯನ್ನು ಮುನ್ನಡೆಸುತ್ತಿದ್ದಾರೆ, ಇದು ಒಬಿಸಿ ಸಮುದಾಯದಲ್ಲಿ ಬಲವಾದ ಬೆಂಬಲವನ್ನು ಹೊಂ ದಿದೆ. ವಿಐಪಿ ಪ್ರಸ್ತುತ ಇಂಡಿಒ ಕ್ಕೂಟದಲ್ಲಿ ಆರ್‌ಜೆಡಿ ಮತ್ತು ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದೆ. ಯಾರೋ ಕಳ್ಳತನದ ಯೋಜನೆಯೊಂದಿಗೆ ಸಹಾನಿಗಳ ಮನೆಗೆ ನುಗ್ಗಿ ಜಿತನ್ ಸಹಾನಿಯನ್ನು ವಿರೋಧಿಸಿದಾಗ ಕೊಂದಿದ್ದಾರೆ ಎಂದು ಪ್ರಾಥಮಿಕ ತನಿಖೆ ಸೂಚಿಸುತ್ತದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಮನೀಶ್ ಚಂದ್ರ ಚೌಧರಿ ತಿಳಿಸಿದ್ದಾರೆ.

ಆಘಾತಕಾರಿ ಅಪರಾಧದ ತನಿಖೆಗಾಗಿ ಮೂವರು ಸದಸ್ಯರ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ ಎಂದು ಹಿರಿಯ ಅಧಿಕಾರಿ ರೆಡ್ಡಿ ಹೇಳಿದ್ದಾರೆ. ಜಿತನ್ ಸಹಾನಿ ಅವರ ಮನೆಯಲ್ಲಿ ನಡೆದ ಹತ್ಯೆಯ ಬಗ್ಗೆ ಪ್ರಮುಖ ಪ್ರತಿಪಕ್ಷ ಆರ್‌ಜೆಡಿ ನಿತೀಶ್ ಕುಮಾರ್ ಸರ್ಕಾರವನ್ನು ತೀವ್ರವಾಗಿ ಟೀಕಿಸಿದೆ. ಈ ಘಟನೆ ರಾಜ್ಯವನ್ನು ಬೆಚ್ಚಿಬೀಳಿಸಿದೆ ಎಂದು ಆರ್‌ಜೆಡಿ ವಕ್ತಾರ ಶಕ್ತಿ ಯಾದವ್ ಹೇಳಿದ್ದಾರೆ. ಬಿಹಾರದಲ್ಲಿ ಏನಾ ಗುತ್ತಿದೆ? ಒಂದು ದಿನವೂ ಕೊಲೆಯ ಸುದ್ದಿಯಿಲ್ಲ. ಬುದ್ಧಿಹೀನ ಸರಕಾರ ಅಧಿಕಾರದಲ್ಲಿದೆ. ವ್ಯವಸ್ಥೆ ಕುಸಿದಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉಪಮುಖ್ಯಮಂತ್ರಿ, ಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಘಟನೆಯನ್ನು ದುರದಷ್ಟಕರ ಎಂದು ಬಣ್ಣಿಸಿ ದ್ದಾರೆ. ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರದ ಪರವಾಗಿ ನಾನು ಭರವಸೆ ನೀಡಲು ಬಯಸುತ್ತೇನೆ. ಯಾರೇ ತಪ್ಪಿತಸ್ಥರನ್ನು ಕಂಬಿ ಹಿಂದೆ ಹಾಕಲಾಗುವುದು. ಸರ್ಕಾರವು ಮುಕೇಶ್ ಸಹಾನಿ ಅವರ ಕುಟುಂಬದೊಂದಿಗೆ ದಢವಾಗಿ ನಿಂತಿದೆ ಎಂದು ಅವರು ಹೇಳಿದರು.

# ಪದವಿಗಳಿಂದ ಪ್ರಯೋಜನವಿಲ್ಲ, ಪಂಕ್ಚರ್ ಅಂಗಡಿ ತೆರೆಯಿರಿ

**ಗುನಾ:** ಚೆನ್ನಾಗಿ ಓದಿ, ಪದವಿ ಪೂರೈಸಿ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುತ್ತದೆ' ಎಂದು ವಿದ್ಯಾರ್ಥಿಗಳಿಗೆ ಹಿರಿಯರು ಸಲಹೆ ನೀಡುವುದು ಸಾಮಾನ್ಯ. ಆದರೆ ಮಧ್ಯಪ್ರದೇಶದಲ್ಲಿ ರಾಜಕಾರಣಿಯೊಬ್ಬರು, 'ಓದಿದರೆ ಉದ್ಧಾರ ಆಗೊಲ್ಲ. ಅದರ ಬದಲಿ ಪಂಕ್ಚರ್ ಅಂಗಡಿ ತೆರೆಯಿರಿ' ಎಂದು ಸಲಹೆ ನೀಡುವ ಮೂಲಕ ವಿವಾದ ಸೃಷ್ಟಿಸಿದ್ದಾರೆ.

ಗುನಾ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಪನ್ನಲಾಲ್ ಶಾಕ್ಯಾ, 'ಮೋಟಾರ್ ಸೈಕಲ್ ಪಂಕ್ಚರ್ ರಿಪೇರಿ ಅಂಗಡಿಗಳನ್ನು ತೆರೆಯುವಂತೆ' ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ. ಪದವಿಗಳನ್ನು ಪಡೆಯುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳಿದ್ದಾರೆ. ಗುನಾ ವಿಧಾನಸಭೆ ಕ್ಷೇತ್ರದಲ್ಲಿ 'ಪಿಎಂ ಕಾಲೇಜ್ ಆಫ್ ಎಕ್ಸಲೆನ್ಸ್' ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಅವರು ಭಾನುವಾರ ಇಂದೋ ರ್‌ನಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯದ 55 ಜಿಲ್ಲೆಗಳಲ್ಲಿ ಪಿಎಂ ಕಾಲೇಜ್ ಆಫ್ ಎಕ್ಸಲೆನ್ಸ್ ಅನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಗುನಾ ಸೇರಿದಂತೆ ಆಯಾ ಜಿಲ್ಲೆಗಳಲ್ಲಿ ಪ್ರತ್ಯೇಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ನಾವು ಪಿಎಂ ಕಾಲೇಜ್ ಆಫ್ ಎಕ್ಸಲೆನ್ಸ್ ಅನ್ನು ಆರಂಭಿಸುತ್ತಿದ್ದೇವೆ. ಈ ಕಾಲೇಜು ಪದವಿಗಳಿಂದ ಏನೂ ಆಗುವುದಿಲ್ಲ ಎಂಬ ಒಂದು ಬುದ್ಧಿ ಮಾತನ್ನು ಮನಸ್ಸಿನಲ್ಲಿಟ್ಟುಕೊಳ್ಳಲು ನಾನು ಎಲ್ಲರಿಗೂ ಮನವಿ ಮಾಡುತ್ತೇನೆ. ಬದಲಿಗೆ, ಕನಿಷ್ಠ ಜೀವನೋಪಾಯ ನಡೆಸಲು ಮೋಟಾರ್ ಸೈಕಲ್ ಪಂಕ್ಚರ್ ರಿಪೇರಿ ಅಂಗಡಿಯನ್ನು ತೆರೆಯಿರಿ ಎಂದು ಗುನಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಶಾಸಕ ಪನ್ನಾಲಾಲ್ ಶಾಕ್ಯ ಹೇಳಿದರು. ಭಾನುವಾರ ಇಂದೋರ್‌ನಲ್ಲಿ ನಡೆದ ಗಿಡ ನೆಡುವ ಬೃಹತ್ ಅಭಿಯಾನದಲ್ಲಿ 24 ಗಂಟೆಗಳ ಅವಧಿಯಲ್ಲಿ 11 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡುವ ಮೂಲಕ ವಿಶ್ವದಾಖಲೆ ನಿರ್ಮಿಸಲಾಗಿದೆ. ಇದನ್ನು ಉಲ್ಲೇಖಿಸಿದ ಶಾಕ್ಯಾ, ಜನರು ಗಿಡಗಳನ್ನು ನೆಡುತ್ತಿದ್ದಾರೆ, ಆದರೆ ಅವುಗಳಿಗೆ ನೀರುಣಿಸಲು ಆಸಕ್ತಿ ತೋರಿಸುವುದಿಲ್ಲ ಎಂದು ಟೀಕಿಸಿದರು.




> ನದಿಗಳು ಮತ್ತು ಚರಂಡಿಗಳ ಉದ್ದಕ್ಕೂ ಇರುವ ಸರ್ಕಾರಿ ಭೂಮಿಯನ್ನು ವ್ಯಾಪಕವಾಗಿ ಒತ್ತುವರಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಜನರು ಅಡ್ಡ ಪರಿಣಾಮಗಳ ಬಗ್ಗೆ ಕಾಳಜಿ ವಹಿಸದೆ ಎಲ್ಲವನ್ನೂ ತಿನ್ನುತ್ತಿದ್ದಾರೆ ಎಂದು, ಸೂಕ್ತ ರೀತಿಯ ಶಿಸ್ತು ಬದ್ಧ ಜೀವನ ಶೈಲಿ ಅಳವಡಿಸಿಕೊಳ್ಳುತ್ತಿಲ್ಲ
>
> - ಪನ್ನಲಾಲ್ ಶಾಕ್ಯಾ, ಶಾಸಕ

### ಪಂಚತತ್ವವನ್ನು ಉಳಿಸುವ ಪ್ರಯತ್ನ ಬೇಕು

ಮಾನವ ದೇಹವನ್ನು ರೂಪಿಸುವ ಪಂಚತತ್ವವನ್ನು (ಭೂಮಿ, ಗಾಳಿ, ನೀರು, ಸೌರಶಕ್ತಿ, ಆಕಾಶವನ್ನು ಒಳಗೊಂಡಿರುವ ಐದು ಅಂಶಗಳು) ಉಳಿಸಲು ಪ್ರಯತ್ನಿಸಬೇಕು ಎಂದು ಅವರು ಸಲಹೆ ನೀಡಿದರು. ಮಾಲಿನ್ಯ ಮತ್ತು ಪರಿಸರದ ಬಗ್ಗೆ ಜನರಲ್ಲಿ ಕಾಳಜಿ ಇದೆ. ಆದರೆ ಯಾರೂ ಪಂಚತತ್ವಗಳನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ. ನಾವು ಇಂದು ನೆಟ್ಟ ಮರಗಳನ್ನು ನಾವು ಎಷ್ಟು ದಿನ ರಕ್ಷಿಸುತ್ತೇವೆ ಮತ್ತು ಅವು ಬೆಳೆದು ನಿಲ್ಲುವಂತೆ ನೋಡಿಕೊಳ್ಳುತ್ತೇವೆ ಎಂದು ಅವರು ಪ್ರಶ್ನಿಸಿದರು.

# ಮಾರಿಷಿಯಸ್‌ಗೆ ಬೆಂಬಲ ಅಚಲ: ಭಾರತ

**ಪೋರ್ಟ್ ಲೂಯಿಸ್:** ಚಾಗೋಸ್ ದ್ವೀಪಸಮೂಹಕ್ಕೆ ಸಂಬಂಧಿಸಿದ ಸಮಸ್ಯೆ ವಿಚಾರವಾಗಿ ಮಾರಿಷಿಯಸ್‌ಗೆ ತಾನು ನೀಡಿರುವ ಬೆಂಬಲ ಅಚಲವಾದುದು ಎಂದು ಭಾರತ ಮಂಗಳವಾರ ಹೇಳಿದೆ.

ದ್ವಿಪಕ್ಷೀಯ ಸಂಬಂಧ ವೃದ್ಧಿಗಾಗಿ ಮಾರಿಷಿಯಸ್‌ಗೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್, ಭಾರತದ ಈ ನಿಲುವನ್ನು ದ್ವೀಪ ರಾಷ್ಟ್ರಕ್ಕೆ ತಿಳಿಸಿದರು. ಪ್ರಧಾನಿ ಪ್ರವಿಂದಕುಮರ್ ಜುಗ್ನಾಥ್ ಅವರೊಂದಿಗೆ ದ್ವಿಪಕ್ಷೀಯ ಸಭೆಯಲ್ಲಿ ಈ ಕುರಿತು ಮಾತನಾಡಿದ ಜೈಶಂಕರ್, 'ಮಾರಿಷಿಯಸ್‌ನೊಂದಿಗೆ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಭಾರತ ಎದುರು ನೋಡುತ್ತದೆ. ಚಾಗೋಸ್ ದ್ವೀಪಸಮೂಹ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಮಾರಿಷಿಯಸ್‌ಗೆ ನೀಡಿರುವ ಬೆಂಬಲವನ್ನು ಭಾರತ ಮುಂದುವರಿಸಲಿದೆ' ಎಂದರು.

ಭಾರತದ ಈ ನಿಲುವಿಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವ ಮನೀಷ್ ಗಾಬಿನ್, 'ಮಾರಿಷಿಯಸ್‌ಗೆ ಭಾರತ ನೀಡಿರುವ ಬೆಂಬಲವನ್ನು ಮುಂದುವರಿಸುವುದಾಗಿ ಮತ್ತೊಮ್ಮೆ ದೃಢಪಡಿಸಿರುವ ಜೈಶಂಕರ್ ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸುತ್ತೇವೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

# ಉಕ್ರೇನ್ ಯುದ್ಧಕ್ಕೆ ಅಂತ್ಯ: ಭಾರತಕ್ಕೆ ಅಮೆರಿಕ ಮನವಿ

**ಮಿಲ್ವಾಕಿ:** ರಷ್ಯಾ ಜೊತೆಗಿನ ತನ್ನ ಸುದೀರ್ಘ ಬಾಂಧವ್ಯದ ಆಧರಿಸಿ ಉಕ್ರೇನ್ ವಿರುದ್ಧ ನಡೆಸುತ್ತಿರುವ 'ಕಾನೂನು ಬಾಹಿರ ಯುದ್ಧ'ವನ್ನು ನಿಲ್ಲಿಸುವಂತೆ ಅಧ್ಯಕ್ಷ ಬ್ಲಾದಿಮಿರ್ ಪುಟಿನ್ ಅವರ ಮೇಲೆ ಒತ್ತಡಹೇರಬೇಕು ಎಂದು ಅಮೆರಿಕ ಆಗ್ರಹಪಡಿಸಿದೆ.

ಅಮೆರಿಕ ರಕ್ಷಣಾ ಇಲಾಖೆಯ ವಕ್ತಾರ ಮ್ಯಾಥ ಮಿಲ್ಲರ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ಮಾತು ಹೇಳಿದರು. ಉಕ್ರೇನ್ ವಿರುದ್ಧದ ಯುದ್ಧ ಅಂತ್ಯಗೊಳಿಸಲು, ಶಾಂತಿ ಸ್ಥಾಪಿಸಲು ಒತ್ತು ನೀಡಬೇಕು. ಈ ಮೂಲಕ ರಷ್ಯಾವು ಉಕ್ರೇನ್‌ನ ಭೌಗೋಳಿಕ ಗಡಿ ಮತ್ತು ಸಾರ್ವಭೌಮತೆ ಗೌರವಿಸಲು ಒತ್ತಡ ಹೇರಬೇಕು ಎಂದು ಹೇಳಿದರು.

ಅಮೆರಿಕದ ಬಹುಮುಖ್ಯ ಪಾಲುದಾರರಾದ ಭಾರತ ಸರ್ಕಾರದಿಂದ ನಾವು ಇದನ್ನೇ ಬಯಸುತ್ತೇವೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಪ್ರವಾಸದಿಂದ ನಿರ್ಗಮಿಸಿದ ಹೊತ್ತಿನಲ್ಲೂ ಅವರು ಇದೇ ಮಾತು ಹೇಳಿದ್ದರು. ರಷ್ಯಾ ಪ್ರವಾಸದಲ್ಲಿ ಅಧ್ಯಕ್ಷ ಬ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾಗಿದ್ದ ಮೋದಿ ಅವರು, ಯುದ್ಧಭೂಮಿಯಲ್ಲಿ ಉಕ್ರೇನ್ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲಾಗದು. ಬಾಂಬ್, ಗುಂಡಿನ ದಾಳಿ ಜೊತೆಗೆ ಶಾಂತಿ ಸ್ಥಾಪನೆ ಯತ್ನ ನಡೆಯದು ಎಂದು ಹೇಳಿದ್ದರು.

# ಪರಿಸರ ಕಾನೂನಿಗೆ ಸಂಬಂಧಿಸಿದಂತೆ ವಿದ್ಯಾರ್ಜನೆ ಮಾಡುವ ಉದ್ದೇಶ

## ಶಬರಿಮಲೆ ಪ್ರಧಾನ ಅರ್ಚಕರ ಪೂಜೆಗೆ ನೆರವಾಗಲು ದೇಶದ ಹೈಪ್ರೊಫೈಲ್ ಹುದ್ದೆ ಬಿಟ್ಟುಬಂದ ಯುವಕ

**ತಿರುವನಂತಪುರಂ:** ಹಿಂದೂ ಪುರಾಣ ಪ್ರಸಿದ್ಧ ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯದ ಪ್ರಧಾನ ಅರ್ಚಕರಾದ (ತಂತ್ರಿ) ಕಂಟರಾರು ರಾಜೀವಾರು ಅವರಿಗೆ, ಪೂಜಾ ವಿಧಿವಿಧಾನದಲ್ಲಿ ನೆರವಾಗಲು ಅವರ ಪುತ್ರ, ಸ್ಕಾಟ್‌ಲ್ಯಾಂಡ್ ನಲ್ಲಿ ವಿದ್ಯಾಭ್ಯಾಸ ಮಾಡಿ ಬಂದು, ದೇಶದ ಹೈಪ್ರೊಫೈಲ್ ಹುದ್ದೆ ಬಿಟ್ಟು ಬಂದು ಶಾಸ್ತ್ರವನ್ನು ಕಲಿಯುತ್ತಿದ್ದಾರೆ.

ಮುಂಬರುವ ಆಗಸ್ಟ್ 16 ರಂದು ಚಿಂಗಂ ಮಾಸಿಕ ಪೂಜೆಯ ನಿಮಿತ್ತ ಶಬರಿಮಲೆ ದೇವಾಲಯದ ಬಾಗಿಲು ತೆರೆಯಲಿದೆ. 16 ರಿಂದ 21ರವರೆಗೆ ದೇವಾಲಯ ತೆರೆಯಲಿದ್ದು, ಭಕ್ತಾದಿಗಳಿಗೆ ಆಗಸ್ಟ್ 21 ರ ರಾತ್ರಿ 10ಗಂಟೆಯವರೆಗೆ ದರ್ಶನವನ್ನು ಪಡೆದುಕೊಳ್ಳಬಹುದಾಗಿದೆ.

ಆಗಸ್ಟ್ ತಿಂಗಳ ಪೂಜೆಯ ವೇಳೆ ಹಾಲೀ ಪ್ರಧಾನ ಅರ್ಚಕರು ತಮ್ಮ ಮಗನಿಗೆ ದೇವಾಲಯದ ಪೂ ಜೆಯ ಜವಾಬ್ದಾರಿಯನ್ನು ಹಸ್ತಾಂತರಿಸಲಿದ್ದಾರೆ ಎಂದು ವರದಿಯಾಗಿತ್ತು. ಈ ಗಿನ ತಂತ್ರಿಗಳಾದ ರಾಜೀವಾರು ಈ ವಿಚಾರವನ್ನು ಅಲ್ಲಗಳೆದಿದ್ದಾರೆ ಎಂದು ಮನೋರಮಾ ಪತ್ರಿಕೆ ವರದಿ ಮಾಡಿದೆ. ನನ್ನ ಮಗ ಹಿಂದಿನಿಂದಲೂ ನನಗೆ ಪೂಜೆಗೆ ನೆರವಾಗುತ್ತಿದ್ದ, ಈ ವರ್ಷದ ಪೂಜೆ ಗೂ ಅದನ್ನು ಅವನು ಮುಂದುವರಿಸಿಕೊಂಡು ಹೋಗುತ್ತಾನೆ. ನಮ್ಮ ತಲೆಮಾರಿನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಲು ಪೂರ್ಣ ಪ್ರಮಾಣದಲ್ಲಿ ಇಲ್ಲೇ ಬ್ರಹ್ಮದತ್ತ ಇರಲಿದ್ದಾರೆ ಎಂದು ತಂತ್ರಿ ಗಳಾದ ಕಂಡರಾರು ರಾಜೀವಾರು ಹೇಳಿದ್ದಾರೆ. ಶಬರಿಮಲೆ ಅಯ್ಯಪ್ಪ ದೇವಾಲಯದ ಪೂಜೆ ನಮ್ಮ ಕುಟುಂಬಕ್ಕೆ ಬಂದ ಸೌಭಾಗ್ಯ, ಇದನ್ನು ಮುಂದುವರಿಸಿಕೊಂಡು ಹೋಗುವುದು ನಮ್ಮ ಕುಟುಂಬದ ಕರ್ತವ್ಯ. ಹಾಗಾಗಿ, ಪ್ರಧಾನ ತಂತ್ರಿಗಳಾದ ನನ್ನ ತಂದೆಗೆ ಪೂಜೆಗೆ ನೆರವಾಗಲು ಪೂರ್ಣ ಸಮಯ ಇಲ್ಲೇ ಇರುತ್ತೇನೆ, ಧರ್ಮಶಾಸ್ತ್ರವನ್ನು ಕಲಿಯುತ್ತೇನೆ ಎಂದು ಬ್ರಹ್ಮದತ್ತ ಕಂಟರಾರು ಹೇಳಿದ್ದರು.



ಕುಟುಂಬಕ್ಕೆ ಬಂದ ಸೌಭಾಗ್ಯ

### ಮಾಸಿಕ ಪೂಜೆಗಾಗಿ ತೆರೆ

ಇದೇ ಬರುವ ಆಗಸ್ಟ್ 16ರಂದು ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯ ಚಿಂಗಂ ಮಾಸಿಕ ಪೂಜೆಗಾಗಿ ತೆರೆಯಲಿದೆ. ಆ ವೇಳೆ, ದೇವಾಲಯದ ಹಾಲೀ ಪ್ರಧಾನ ತಂತ್ರಿಗಳಾದ ಕಂಟರಾರು ರಾಜೀವಾರು ತಮ್ಮ ಜಬಾಬ್ದಾರಿಯನ್ನು ತಮ್ಮ ಮಗನಿಗೆ ಹಸ್ತಾಂತರಿಸಲಿದ್ದಾರೆ ಎಂದು ಸುದ್ದಿಯಾಗಿತ್ತು. ಇದನ್ನು ತಂತ್ರಿಗಳು ನಿರಾಕರಿಸಿದ್ದಾರೆ.

> ಕಂಟರಾರು ರಾಜೀವಾರು ಅವರು ತಮ್ಮ ಪುತ್ರ ಬ್ರಹ್ಮದತ್ತ ಕಂಟರಾರು ಅವರಿಗೆ ಪೂಜೆಯ ಉಸ್ತು ವಾರಿಯನ್ನು ನೀಡಲಿದ್ದಾರೆ ಎನ್ನುವ ಸುದ್ದಿಯ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದ್ದಾರೆ. ಈ ರೀತಿಯ ಸುದ್ದಿಗಳನ್ನು ಯಾರು ಹಬ್ಬಿಸುತ್ತಾರೆ ಎನ್ನುವುದೇ ಆ ಶ್ಚರ್ಯ. ಮಗ ನಿಗೆ ಪೂಜೆಯ ಜವಾಬ್ದಾರಿಯನ್ನು ಹಸ್ತಾಂತರಿಸುವ ಯಾವ ಆಲೋಚನೆಯೂ ಸದ್ಯಕ್ಕೆ ಇಲ್ಲ ಎಂದು ತಂತ್ರಿಗಳು ಹೇಳಿದ್ದಾರೆ.

ಜಾಗತಿಕ ಪರಿಸರ ಕಾನೂನಿನಲ್ಲಿ ಮಾಸ್ಟರ್ ಆಫ್ ಲಾ ಪದವೀಧರಾಗಿರುವ ಬ್ರಹ್ಮದತ್ತ, ಗ್ಲಾಸ್ಗೋ ಸ್ಕಾಟ್‌ಲ್ಯಾಂಡ್ ನಲ್ಲಿರುವ ಸ್ಟ್ರಾತ್ ಕ್ಲೈಡ್ ವಿಶ್ವವಿದ್ಯಾಲಯದಲ್ಲಿ ಪದವಿಯನ್ನು ಪಡೆದಿದ್ದಾರೆ. ಇದಾದ ನಂತರ, ಹೈದರಾಬಾದ್‌ನಲ್ಲಿ ಡಿಲಾಯಿಟ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು.

ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಎಲ್‌ಎಲ್‌ಬಿ ಮುಗಿಸಿದ ನಂತರ, ಕೇರಳದ ಕೊಟ್ಟಾಯಂನಲ್ಲಿ ವಕೀಲ ಸಂಸ್ಥೆಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇದಾದ ನಂತರ, ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳಿ ಮೂರು ವರ್ಷಗಳ ಇಂಟರ್ನ್ಶಿಪ್, ಸ್ಕಾಟ್‌ಲ್ಯಾಂಡ್ ನಲ್ಲಿ ಮಾಡಿದ್ದರು.

ಪರಿಸರ ಕಾನೂನಿಗೆ ಸಂಬಂಧಿಸಿದಂತೆ ವಿದ್ಯಾರ್ಜನೆ ಮಾಡುವುದು ನನ್ನ ಉದ್ದೇಶವಾಗಿತ್ತು. ಈಗ, ನನ್ನ ತಂದೆಯವರಿಂದ ಪೂಜಾ ವಿಧಿವಿಧಾನಗಳನ್ನು ಕಲಿಯುತ್ತಿದ್ದೇನೆ. ಆ ಮೂಲಕ, ತಂದೆಯ ಮಾರ್ಗದರ್ಶನದಲ್ಲಿ ಪ್ರಧಾನ ಅರ್ಚಕ ಸ್ಥಾನ ನಿಭಾಯಿಸುವುದು ನನ್ನ ಗುರಿ ಎಂದು ಬ್ರಹ್ಮದತ್ತ ಕಂಟರಾರು ಹೇಳಿದ್ದಾರೆ. ಶಬರಿಮಲೆ ದೇವಾಲಯದ ಪೂಜೆಯ ಜವಾಬ್ದಾರಿ ಕಂಡರಾರು ಮತ್ತು ತಾಜಮೋನ್ ಕುಟುಂಬದ ನಡುವೆ ವರ್ಷಕ್ಕೊಮ್ಮೆ ಹಸ್ತಾಂತರವಾಗುತ್ತದೆ.

# ಮಿನಿ ನ್ಯೂಸ್

## ಅರ್ಹತೆ ಆಧರಿಸಿ ಉದ್ಯೋಗಕ್ಕಾಗಿ ಪ್ಯಾಲಿ; ಹಿಂಸಾಚಾರ

**ಢಾಕಾ:** ಅರ್ಹತೆ ಆಧರಿಸಿಯೇ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿ ರಾಜಧಾನಿ ಢಾಕಾದಲ್ಲಿ ಮಂಗಳವಾರ ನಡೆದ ಬೃಹತ್ ರ‍್ಯಾಲಿ ವೇಳೆ ನಡೆದ ಸಂಘರ್ಷದಲ್ಲಿ 400ಕ್ಕೂ ಅಧಿಕ ಮಂದಿ ಪ್ರತಿಭಟನಕಾರರು, ಪೊಲೀಸರು ಗಾಯಗೊಂಡಿದಾರೆ. ಪ್ರತಿಭಟನೆ ಕೈಬಿಟ್ಟು ತರಗತಿಗಳಿಗೆ ಹಾಜರಾಗುವಂತೆ ಬಾಂಗ್ಲಾದೇಶ ಪ್ರಧಾನಿ ಹಾಗೂ ಸುಪ್ರೀಂಕೋರ್ಟ್ ಸೂಚಿಸಿತ್ತು. ಇದರ ಹೊರತಾಗಿಯೂ, ಢಾಕಾದ ಎರಡು ವಿಶ್ವವಿದ್ಯಾಲಯಗಳಲ್ಲಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ವೇಳೆ ಆಡಳಿತ ಪಕ್ಷದ ವಿದ್ಯಾರ್ಥಿ ಕಾರ್ಯಕರ್ತರು ಬಡಿಗೆ, ಕಲ್ಲು, ಭರ್ಜಿ ಹಾಗೂ ಪೆಟ್ರೋಲ್ ತುಂಬಿದ ಬಾಟಲ್‌ಗಳನ್ನು ಎಸೆದು ದಾಳಿ ನಡೆಸಿದರು ಎಂದು ಪ್ರತಿಭಟನಕಾರರು ತಿಳಿಸಿದರು.

ಈ ವೇಳೆ ಹಿಂಸಾಚಾರವು ತೀವ್ರ ಸ್ವರೂಪಕ್ಕೆ ತಿರುಗಿತು. ಘಟನೆ ಬಳಿಕ ಗಾಯಗೊಂಡ 297 ಮಂದಿಯನ್ನು ಢಾಕಾ ವೈದ್ಯಕೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದು, 12 ಮಂದಿ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಬಚ್ಚು ಮಿಯಾ ತಿಳಿಸಿದರು. 'ಜಹಾಂಗೀರ್ ನಗರ ವಿಶ್ವವಿದ್ಯಾಲಯದಲ್ಲಿ ಗಾಯಗೊಂಡ 111 ಮಂದಿಯನ್ನು ವಿವಿಯ ಆವರಣದಲ್ಲಿರುವ ಕ್ಲಿನಿಕ್‌ನಲ್ಲಿ ಚಿಕಿತ್ಸೆ ನೀಡಿ, ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಯಿತು' ಎಂದರು. 1971ರಲ್ಲಿ ಪಾಕಿಸ್ತಾನದ ವಿರುದ್ಧ ಯುದ್ಧದಲ್ಲಿ ಹೋರಾಡಿದ ಯೋಧರ ಮಕ್ಕಳು ಸೇರಿದಂತೆ ನಿರ್ದಿಷ್ಟ ಗುಂಪುಗಳಿಗೆ ಸರ್ಕಾರಿ ಉದ್ಯೋಗದ ನೇಮಕಾತಿ ವೇಳೆ ಶೇ 50ರಷ್ಟು ಮೀಸಲಾತಿ ನಿಗದಿಗೊಳಿಸಿ ಬಾಂಗ್ಲಾದೇಶ ಸರ್ಕಾರ ಆದೇಶ ಹೊರಡಿಸಿತ್ತು. ಈ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ವಿದ್ಯಾರ್ಥಿ ಸಂಘಟನೆಗಳು, 'ಅರ್ಹತೆ'ಗೆ ಅನುಗುಣವಾಗಿ ನೇಮಕಾತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಆಗ್ರಹಿಸಿ ಕಳೆದೊಂದು ವಾರದಿಂದ ಪ್ರತಿಭಟನೆ ನಡೆಸುತ್ತಿವೆ.

## ಇದೀಗ ಅಧಿಕೃತ; ಟ್ರಂಪ್ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಡೊನಾಲ್ಡ್ ಟ್ರಂಪ್ ಅವರನ್ನು ಔಪಚಾರಿಕವಾಗಿ ಆಯ್ಕೆ ಮಾಡಲಾಗಿದೆ. ಡೊನಾಲ್ಡ್ ಟ್ರಂಪ್ ನಾಮನಿರ್ದೇಶನದ ಕುರಿತು ಸೋಮವಾರ ನಡೆದ ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ಘೋಷಿಸಲಾಗಿದೆ. ಇದರೊಂದಿಗೆ 2016ರಲ್ಲಿ ಅಮೆರಿಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಟ್ರಂಪ್ ಅವರು ಮತ್ತೆ ಅಧಿಕೃತವಾಗಿ ಚುನಾವಣಾ ಅಖಾಡಕ್ಕಿಳಿದಿದ್ದಾರೆ. 2016ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ 78 ವರ್ಷದ ಟ್ರಂಪ್, 2020ರಲ್ಲಿ ಜೋ ಬೈಡನ್ ವಿರುದ್ಧ ಸೋಲು ಕಂಡಿದ್ದರು. ಈಗ ಸತತ ಮೂರನೇ ಬಾರಿಗೆ ರಿಪಬ್ಲಿಕನ್ ಪಕ್ಷದಿಂದ ನಾಮನಿರ್ದೇಶನಗೊಂಡಿದ್ದಾರೆ.

## 40ಕ್ಕೂ ಹೆಚ್ಚು ಮಹಿಳೆಯರನ್ನು ಹತ್ಯೆಗೈದಿದ್ದ ಹಂತಕನ ಬಂಧನ

**ನೈರೋಬಿ:** ಕಳೆದ ಎರಡು ವರ್ಷಗಳಲ್ಲಿ 42 ಮಹಿಳೆಯರನ್ನು ಹತ್ಯೆ ಮಾಡಿದ್ದ ಶಂಕಿತ ಸರಣಿ ಹಂತಕನನ್ನು ಬಂಧಿಸಲಾಗಿದೆ ಎಂದು ಕೀನ್ಯಾದ ಪೊಲೀಸರು ತಿಳಿಸಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ನೈರೋಬಿಯ ಪ್ರದೇಶವೊಂದರ ಕ್ವಾರಿಯಲ್ಲಿ ಒಂಬತ್ತು ಮಹಿಳೆಯರ ಛಿದ್ರಗೊಂಡ ಶವಗಳು ಪತ್ತೆಯಾಗಿದ್ದವು. ಪ್ರಕರಣ ತನಿಖೆ ನಡೆಸಿದ ಪೊಲೀಸರು ಹಂತಕನನ್ನು ಬಂಧಿಸಿದ್ದಾರೆ ಎಂದು ವರದಿಯಾಗಿದೆ.

ಹಂತಕನನ್ನು 33 ವರ್ಷದ ಕಾಲಿನ್ಸ್ ಜುಮೈಸಿ ಖಲುಶಾ ಎಂದು ಗುರುತಿಸಲಾಗಿದೆ. ಈತ ಹೆಂಡತಿ ಸೇರಿದಂತೆ ಇತರೆ ಮಹಿಳೆಯರನ್ನು ಆಮಿಷವೊಡ್ಡಿ, ದೌರ್ಜನ್ಯ ನಡೆಸಿ ಹತ್ಯೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸ್ ಇಲಾಖೆಯ ನಿರ್ದೇಶಕ ಮೊಹಮ್ಮದ್ ಐ. ಅಮೀನ್ ತಿಳಿಸಿದ್ದಾರೆ. 2022ರಿಂದ ಇದುವರೆಗೆ (2 ವರ್ಷಗಳಲ್ಲಿ) 42 ಮಹಿಳೆಯರನ್ನು ಹತ್ಯೆ ಮಾಡಿರುವುದಾಗಿ ಕಾಲಿನ್ಸ್ ಒಪ್ಪಿಕೊಂಡಿದ್ದಾನೆ. ಪ್ರಕರಣ ಸಂಬಂಧ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ. ಮೃತಪಟ್ಟ ಮಹಿಳೆಯರು 18ರಿಂದ 30 ವರ್ಷದೊಳಗಿನವರಾಗಿದ್ದಾರೆ. ಈ ಸರಣಿ ಹತ್ಯೆ ಪ್ರಕರಣ ಕೀನ್ಯಾದ ಜನರನ್ನು ಬೆಚ್ಚಿಬೀಳಿಸಿತ್ತು.

## ಲೋಕೊ ಪೈಲಟ್, ಗಾರ್ಡ್‌ಗಳ ಕುಂದುಕೊರತೆ ಪರಿಹಾರಕ್ಕಾಗಿ ಅಸ್ತಿತ್ವಕ್ಕೆ

**ನವದೆಹಲಿ:** ಲೋಕೊ ಪೈಲಟ್‌ಗಳ ಹಾಗೂ ಗಾರ್ಡ್‌ಗಳ ಕುಂದುಕೊರತೆ ಪರಿಹಾರಕ್ಕಾಗಿ ರೈಲ್ವೆ ಮಂಡಳಿ ಉನ್ನತ ಸಮಿತಿಯೊಂದನ್ನು ರಚಿಸಿ ಆದೇಶಿಸಿದೆ. ಇದು ಲೋಕೊ ಪೈಲಟ್‌ಗಳ, ಗಾರ್ಡ್‌ಗಳ ಬಹುದಿನದ ಬೇಡಿಕೆಯಾಗಿತ್ತು. ಮಂಡಳಿ ನಿರ್ಧಾರವನ್ನು ಲೋಕೊಪೈಲಟ್‌ಗಳ, ಗಾರ್ಡ್‌ಗಳ ಸಂಘ ಸ್ವಾಗತಿಸಿದೆ.

ಸಮಿತಿಯಲ್ಲಿ ರೈಲ್ವೆಯ ವಿವಿಧ ವಲಯಗಳಿಂದ ನೇಮಿಸಲ್ಪಡುವ (ಕಾರ್ಯಕಾರಿ ನಿರ್ದೇಶಕರು) ಐವರು ಸದಸ್ಯರಿರುತ್ತಾರೆ. ಜುಲೈ 11ರಂದು ಈ ನಿರ್ಧಾರ ಹೊರ ಬಿದ್ದಿದ್ದು ಸಮಿತಿ ಅಸ್ತಿತ್ವಕ್ಕೆ ಬಂದಿದೆ.

ಲೋಕೊ ಪೈಲಟ್‌ಗಳ, ಗಾರ್ಡ್‌ಗಳ ಸೇವಾ ದಕ್ಷತೆ ಸುಧಾರಣೆ, ವೇತನ, ಪರಿಹಾರಗಳು ಸೇರಿದಂತೆ ಇನ್ನಿತರ ಬೇಡಿಕೆಗಳ ಮೇಲೆ ಈ ಸಮಿತಿ ಅಧ್ಯಯನ ನಡೆಸಿ ವರದಿಗಳನ್ನು ಸಲ್ಲಿಸಲಿದೆ.

ಈ ಮೊದಲು ಲೋಕೊ ಪೈಲಟ್‌ಗಳ ಹಾಗೂ ಗಾರ್ಡ್‌ಗಳ ಕುಂದುಕೊರತೆ ಪರಿಹಾರಕ್ಕೆ ರೈಲ್ವೆಯಲ್ಲಿ ಪ್ರತ್ಯೇಕ ಮಂಡಳಿ ಅಥವಾ ಸಮಿತಿ ಇರಲಿಲ್ಲ.

## ಹಣ ಅಕ್ರಮ ವರ್ಗಾವಣೆ ಪ್ರಕರಣ ಕೋರ್ಟ್‌ಗೆ ಹಾಜರಾದ ಸೆಂಥಿಲ್

**ಚೆನ್ನೈ:** ಹಣ ಅಕ್ರಮ ವರ್ಗಾವಣೆಯಲ್ಲಿ ಕಳೆದ ವರ್ಷ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧಿತರಾಗಿರುವ ತಮಿಳುನಾಡಿನ ಮಾಜಿ ಸಚಿವ ವಿ. ಸೆಂಥಿಲ್ ಬಾಲಾಜಿ ಮಂಗಳವಾರ ಸೆಷನ್ಸ್ ಕೋರ್ಟ್‌ನ ಮುಂದೆ ಹಾಜರಾದರು. ಈ ವೇಳೆ ತಮ್ಮ ಬ್ಯಾಂಕ್ ಖಾತೆಗೆ ಸಂ ಬಂಧಿಸಿದಂತೆ 2022ರ ಫೆ. 22ರಂದು ಕರೂರ್‌ನ ಸಿಟಿ ಯೂನಿಯನ್ ಬ್ಯಾಂಕ್ ಲಿಮಿಟೆಡ್‌ನ ವ್ಯವಸ್ಥಾಪಕರಿಗೆ ಬರೆದಿದ್ದ ಪತ್ರದ ಪ್ರತಿಯನ್ನು ಪಡೆದುಕೊಂಡರು. ಜಾರಿ ನಿರ್ದೇಶನಾಲಯವು ತನಿಖೆ ವೇಳೆ ಈ ಪತ್ರವನ್ನು ಸಂಗ್ರಹಿಸಿತ್ತು.

ನಂತರ ಸೆಂಥಿಲ್ ಅವರನ್ನು ಜುಲೈ 18ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಸೆಷನ್ಸ್ ಕೋರ್ಟ್ ನ್ಯಾಯಾಧೀಶ ಎಸ್. ಅಲ್ಲಿ ಅವರು ಆದೇಶ ನೀಡಿದರು. ಈ ಹಿಂದಿನ ಎಐಎಡಿಎಂಕೆ ಸರ್ಕಾರದಲ್ಲಿ ನಡೆದ 'ಉದ್ಯೋಗಕ್ಕಾಗಿ ನಗದು' ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಾಲಾಜಿ ಅವರನ್ನು ಕಳೆದ ವರ್ಷ ಜೂನ್ 14 ರಂದು ಇ.ಡಿ ಬಂಧಿಸಿತ್ತು.

## ಸುಧಾ ಮೂರ್ತಿ ಜೊತೆ ಮಹೇಶ್ ಬಾಬು ಪತ್ನಿ

ಅಂಬಾನಿ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮದುವೆ ಅದ್ದೂರಿಯಾಗಿ ಜರುಗಿದೆ. ಇದೀಗ ಮದುವೆಯಲ್ಲಿ ಭಾಗಿಯಾದ ಇನ್ಫೋಸಿಸ್ ಫೌಂಡೇಶನ್‌ನ ಮಾಜಿ ಅಧ್ಯಕ್ಷೆ ಮತ್ತು ರಾಜ್ಯಸಭಾ ಸಂಸದೆ ಸುಧಾ ಮೂರ್ತಿ ಜೊತೆಗಿನ ಫೋಟೋ ಹಂಚಿಕೊಂಡು, ಈ ಕ್ಷಣವನ್ನು ಮರೆಯುವುದಿಲ್ಲ ಎಂದು ಮಹೇಶ್ ಬಾಬು ಪತ್ನಿ ನಮ್ರತಾ ಶಿರೋಡ್ಕರ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಸುಧಾ ಮೂರ್ತಿ ಜೊತೆಗಿನ ಫೋಟೋ ಶೇರ್ ಮಾಡಿ, ಈ ಕ್ಷಣವನ್ನು ಎಂದಿಗೂ ಮರೆಯುವುದಿಲ್ಲ ಎಂದು ನಮ್ರತಾ ಶಿರೋಡ್ಕರ್ ಬರೆದುಕೊಂಡಿದ್ದಾರೆ.



ಈ ಬುದ್ಧಿವಂತ ಮಹಿಳೆಯ ಬಗ್ಗೆ ತುಂಬಾ ಕೇಳಿದ್ದೆ, ಅವರನ್ನು ಭೇಟಿಯಾದ ನಂತರ ನನ್ನ ನಂಬಿಕೆಯು ನಿಜವಾಯಿತು. ರೋಮಾಂಚಕ, ಜೀವನದಲ್ಲಿ ನೀಡಲು ತುಂಬಾ ಪ್ರೀತಿಯಿದೆ ಎನಿಸಿತು ಎಂದು ಮಹೇಶ್ ಬಾಬು ಪತ್ನಿ ನಮ್ರತಾ ಬಣ್ಣಿಸಿದ್ದಾರೆ.

ನನ್ನ ಅಜ್ಜಿ, ಮತ್ತು ಈಗ ನನ್ನ ಪತಿ ಮತ್ತು ಮಗಳ ಬಗ್ಗೆ ಅವರ ಮೆಚ್ಚುಗೆಯು ನನ್ನನ್ನು ವಿನಮ್ರಗೊಳಿಸಿತು. ಈ ನೆನಪುಗಳನ್ನು ಎಂದಿಗೂ ಸ್ಮರಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ. ಅನಂತ್ ಮತ್ತು ರಾಧಿಕಾ ಮದುವೆಗೆ ಸುಧಾ ಮೂರ್ತಿ ಕೂಡ ಹಾಜರಿ ಹಾಕಿದ್ದರು. ಈ ವೇಳೆ, ಸುಧಾ ಮೂರ್ತಿ ಅವರನ್ನು ತೆಲುಗು ನಟ ಮಹೇಶ್ ಬಾಬು ಪತ್ನಿ ನಮ್ರತಾ ಶಿರೋಡ್ಕರ್ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

## ಮ್ಯಾಕ್ಸ್ ಆಟ ಶುರು

ಬಹುನಿರೀಕ್ಷಿತ ಚಿತ್ರ 'ಮ್ಯಾಕ್ಸ್' ಜು.16 ಟೀಸರ್ ಬಿಡುಗಡೆ ಮಾಡಿ ಎಲ್ಲೆಡೆ ಸದ್ದು ಮಾಡುತ್ತಿದೆ. ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿರುವ ಕಿಚ್ಚ ಸುದೀಪ್ ಅವರನ್ನು ಕಂಡು ಅಭಿಮಾನಿಗಳು ಉತ್ಸುಕರಾಗಿದ್ದಾರೆ. ಟೀಸರ್ ನಲ್ಲಿನ ಆಕ್ಷನ್ ದೃಶ್ಯಗಳು ಮೈ ಜುಂ ಎನ್ನಿಸುವಂತಿದ್ದು ಮಾಸ್ ಅಭಿಮಾನಿಗಳ ಕಣ್ಣನ ಸೆಳೆದಿದೆ. ಪ್ಯಾನ್ ಇಂಡಿಯಾ ಚಿತ್ರವಾದ 'ಮ್ಯಾಕ್ಸ್' ಒಂದು ಮಾಸ್ ಚಿತ್ರವಾಗಿದ್ದು, ಟೀಸರ್‌ನಲ್ಲಿರುವ ಡೈಲಾಗ್ ತುಣುಕುಗಳು ಈಗಾಗಲೇ ಭರ್ಜರಿ ಸದ್ದು ಮಾಡಿ, ಸಿನಿ ಪ್ರೇಕ್ಷಕರು ಚಿತ್ರದ ಬರುವಿಕೆಯನ್ನು ಎದುರು ನೋಡುವಂತೆ ಮಾಡಿದೆ. ಬಾ ಬಾ ಬ್ಲ್ಯಾಕ್ ಶಿಪ್ ಹ್ಯಾವ್ ಯೂ ಎನಿ ಕ್ಲ್ಯೂ ಎಂಬ ಕಿಚ್ಚನ ಡೈಲಾಗ್ ಹೇಳುವ ಮೂಲಕ ಸುದೀಪ್ ಮಸ್ತ್ ಆಗಿ ಎಂಟ್ರಿ ಕೊಟ್ಟಿದ್ದಾರೆ. ವಿಜಯ್ ಕಾರ್ತಿಕೇಯ ನಿರ್ದೇಶನದ ಆಕ್ಷನ್ ಥ್ರಿಲ್ಲರ್ 'ಮ್ಯಾಕ್ಸ್' ಚಿತ್ರದಲ್ಲಿ ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್, ವರಲಕ್ಷ್ಮೀ ಶರತ್ ಕುಮಾರ್, ಸಂಯುಕ್ತ ಹೊರನಾಡು, ಪ್ರಮೋದ್ ಶೆಟ್ಟಿ ಮುಂತಾದವರು ಬಣ್ಣ ಹಚ್ಚಿದ್ದಾರೆ. ಈ ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಕಲೈಪುಲಿ ಎಸ್ ತನು ವಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಹಾಗೂ ಕಿಚ್ಚ ಸುದೀಪ್ ಕಿಚ್ಚ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.



ಮಾಸ್ ಆಗಿ ಎಂಟ್ರಿ ಕೊಟ್ಟ ಕಿಚ್ಚ



## ಮನೋರಥಂಗಳ್ ಟ್ರೈಲರ್ ಔಟ್

ಮಲಯಾಳಂನ ಅಚ್ಚುಮೆಚ್ಚಿನ ಬರಹಗಾರ, ಚಿತ್ರಕಥೆಗಾರ ಮತ್ತು ನಿರ್ದೇಶಕ ಎಂ.ಟಿ ವಾಸುದೇವನ್ ನಾಯರ್ ಅವರ ಹುಟ್ಟುಹಬ್ಬದ (ಜು.15) ಪ್ರಯುಕ್ತ 'ಮನೋರಥಂಗಳ್' ಸಿನಿಮಾದ ಟ್ರೈಲರ್ ಬಿಡುಗಡೆ ಆಗಿದೆ. 9 ಕಥೆಗಳಿರುವ ಈ ಆಂಥಾಲಜಿಗೆ 8 ಮಂದಿ ನಿರ್ದೇಶಕರು ಆಕ್ಷನ್ ಕಟ್ ಹೇಳಿದ್ದಾರೆ. ಎಂಟಿ ವಾಸುದೇವನ್ ನಾಯರ್ ಕಥೆ ಬರೆದಿದ್ದಾರೆ. ಮಲಯಾಳಂ ಚಿತ್ರರಂಗದ ಸ್ಟಾರ್ ನಟರ ದಂಡೇ ಈ ಸಿನಿಮಾದಲ್ಲಿದೆ. ಸದ್ಯ ಬಿಡುಗಡೆ ಆಗಿರುವ 'ಮನೋರಥಂಗಳ್' ಸಿನಿಮಾ ಆಗಸ್ಟ್ ತಿಂಗಳಲ್ಲಿ ಒಟಿಟಿಯಲ್ಲಿ ಬಿಡುಗಡೆ ಆಗಲಿದೆ. ಹಾಗಾದರೆ, ಯಾವೆಲ್ಲ ಸಣ್ಣ ಕಥೆಗಳು ಈ ಸಿನಿಮಾದಲ್ಲಿ ಅಡಕವಾಗಿವೆ? ಯಾರೆಲ್ಲ ಸ್ಟಾರ್ ನಟರಿದ್ದಾರೆ? ನಿರ್ದೇಶಕರು ಯಾರು ಎಂಬ ಮಾಹಿತಿ ಇಲ್ಲಿದೆ. ವಿಶೇಷ ಏನೆಂದರೆ, ಈ ಚಿತ್ರದ ಟ್ರೈಲರ್ ಕಮಲ್ ಹಾಸನ್ ಸಹ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿಯೂ ಅವರದ್ದು ವಿಶೇಷ ಪಾತ್ರವಿದೆ.


ಚಿತ್ರದಲ್ಲಿ ಕಮಲ್ ಹಾಸನ್ , ಮೋಹನ್ ಲಾಲ್ ಮಮ್ಮುಟ್ಟಿ, ಫಹಾದ್ ಫಾಸಿಲ್, ಪಾರ್ವತಿ ತಿರುವೋತ್ತು, ಹರೀಶ್ ಉತ್ತಮನ್, ಬಿಜು ಮೆನನ್, ಶಾಂತಿ ಕೃಷ್ಣ, ಜಾಯ್ ಮ್ಯಾಥ್ಯೂ, ಮಧು, ಆಸಿಫ್ ಅಲಿ, ನದಿಯಾ ಮೊಯ್ದು, ಕೈಲಾಸ, ಇಂದ್ರನ್ಸ್, ನೆಡುಮುಡಿ ವೇಣು, ರಣಜಿ ಪಣಿಕ್ಕರ್, ಸುರಭಿ ಲಕ್ಷ್ಮಿ, ಸಿದ್ದಿಕ್, ಇಶಿತ್ ಯಾಮಿನಿ, ನಾಸೀರ್, ಇಂದ್ರಜಿತ್, ಅಪರ್ಣಾ ಬಾಲಮುರಳಿ ಬಣ್ಣ ಹಚ್ಚಿದ್ದಾರೆ.




## ನಿವೇದಿತಾ ಗೌಡಗೆ ಕ್ವಾಟ್ಲೆ ಕೊಟ್ಟ ಸಹೋದರ

ರ್‍ಯಾಂಪರ್ ಚಂದನ್ ಶೆಟ್ಟಿ ಜೊತೆಗಿನ ದಾಂಪತ್ಯಕ್ಕೆ ಅಂತ್ಯ ಹಾಡಿದ ಬಳಿಕ ನಿವೇದಿತಾ ಗೌಡ ಸೋಷಿಯಲ್ ಮೀಡಿಯಾದಲ್ಲಿ ಸಖತ್ ಆಕ್ಟೀವ್ ಆಗಿದ್ದಾರೆ.

ಇದೀಗ ರೀಲ್ಸ್ ಮಾಡುವ ಬದಲು ಹಾಡುವ ಪ್ರಯತ್ನ ಮಾಡ್ತಿರೋ ನಿವೇದಿತಾಗೆ ಸಹೋದರ ಕ್ವಾಟ್ಲೆ ಕೊಟ್ಟಿದ್ದಾರೆ. ಇದರ ತುಣುಕನ್ನು ನಟಿ ಸಾಮಾಜಿಕ ಜಾಲತಾಣದಲ್ಲಿ ಶೇರ್ ಮಾಡಿದ್ದಾರೆ. ಡಿವೋರ್ಸ್ ನಂತರ ಸಿನಿಮಾ ಕೆಲಸ ಮತ್ತು ಮನೆಯತ್ತ ನಟಿ ಹೆಚ್ಚು ಗಮನ ಕೊಡುತ್ತಿದ್ದಾರೆ.ಬಿಡುವಿನ ವೇಳೆಯಲ್ಲಿ, ಹಾಡುತ್ತಿದ್ದ ಅಕ್ಕನನ್ನು ಸಹೋದರ ಸಖತ್ ಆಗಿ ಕಾಡಿಸಿದ್ದಾರೆ. ಇಂಗ್ಲೀಷ್‌ನಲ್ಲಿ ಹಾಡಲು ಕುಳಿತ ನಿವೇದಿತಾಗೆ ಸಹೋದರ ಹೇಗೆಲ್ಲಾ ಕ್ವಾಟ್ಲೆ ಕೊಟ್ಟಿದ್ದಾರೆ. ಇಬ್ಬರ ಮಾತು ಹೇಗಿತ್ತು ಎಂದು ವಿಡಿಯೋ ಶೇರ್ ಮಾಡಿ ಎಲ್ಲಾ ಸಹೋದರರು ಕಿರಿಕಿರಿ ಎಂದು ನಟಿ ಕ್ಯಾಪ್ಷನ್ ನೀಡಿದ್ದಾರೆ. ನಿವೇದಿತಾ ಇನ್ಸ್ಟಾಗ್ರಾಂ ಖಾತೆಯಲ್ಲಿ ಈ ವಿಡಿಯೋ ಶೇರ್ ಮಾಡ್ತಿದ್ದಂತೆ ಬಗೆ ಬಗೆಯ ಕಾಮೆಂಟ್‌ಗಳು ಹರಿದು ಬಂದಿದೆ. ಒಳ್ಳೆಯ ಸಿಂಗರ್ ಚಂದನ್‌ಗೆ ಡಿವೋರ್ಸ್ ಕೊಟ್ಟು ಈಗ ಶೆಟ್ರಿಗೆ ಇಂಗ್ಲೀಷ್‌ನಲ್ಲಿ ಸ್ಪರ್ಧೆ ಕೊಡೋಕೆ ಬರುತ್ತಿದ್ದಾರೆ ಎಂದು ನಿವೇದಿತಾಗೆ ನೆಟ್ಟಿಗರು ಕಾಲೆಳೆದಿದ್ದಾರೆ. ಇನ್ನೂ ಚಂದನ್ ಶೆಟ್ಟಿ ನಟನೆಯ 'ಕ್ಯಾಂಡಿಕ್ರಶ್' ಸಿನಿಮಾ ಮತ್ತು ಸೃಜನ್ ಲೋಕೇಶ್ ನಟನೆಯ 'ಜಿಎಸ್‌ಟಿ' ಸಿನಿಮಾದಲ್ಲಿ ನಿವೇದಿತಾ ಗೌಡ ನಾಯಕಿಯಾಗಿ ನಟಿಸಿದ್ದಾರೆ.





## ವೈಯಕ್ತಿಕ ಜೀವನದ ಬಗ್ಗೆ ಮೌನ ಮುರಿದ ಸ್ಯಾಮ್

ಸೌತ್ ನಟಿ ಸಮಂತಾ ಮತ್ತೆ ಸಿನಿಮಾಗಳಲ್ಲಿ ಆಕ್ಟೀವ್ ಆಗಿದ್ದಾರೆ. ಮಯೋಸಿಟಿಸ್ ಕಾಯಿಲೆಯಿಂದ ಕೊಂಚ ಚೇತರಿಸಿಕೊಂಡಿದ್ದಾರೆ

ಇದೀಗ ಸಂದರ್ಶನವೊಂದರಲ್ಲಿ ಡಿವೋರ್ಸ್ ಮತ್ತು ಆರೋಗ್ಯದ ಸ್ಥಿತಿ ಬಗ್ಗೆ ಸಮಂತಾ ಮಾತನಾಡಿದ್ದಾರೆ. ನಮ್ಮ ಜೀವನದ ಬಗ್ಗೆ ನಾವು ಕೆಲವು ವಿಷಯಗಳನ್ನು ಬದಲಾಯಿಸಬಹುದೆಂದು ನಾವೆಲ್ಲರೂ ಬಯಸುತ್ತೇವೆ. ಆದರೆ ನನ್ನಲ್ಲಿರುವ ವಿಷಯಗಳನ್ನು ನಾನು ಅನುಭವಿಸಬೇಕೇ ಎಂದು ನಾನು ಕೆಲವೊಮ್ಮೆ ಆಶ್ಚರ್ಯ ಪಡುತ್ತೇನೆ. ಆದರೆ ಹಿಂತಿರುಗಿ ನೋಡಿದಾಗ ನನಗೆ ಬೇರೆ ದಾರಿ ಇಲ್ಲ ಎಂಬ ಭಾವನೆ ಮೂಡುತ್ತದೆ ಎಂದಿದ್ದಾರೆ ಸಮಂತಾ. ಯಾವುದೇ ಸಮಸ್ಯೆಯಿಂದ ಹೊರಗೆ ಬರುವ ತನಕ ಹೋರಾಡಬೇಕು. ಇಂತಹ ಸಮಯದಲ್ಲಿಯೂ ನಾನು ಎಂದಿಗಿಂತಲೂ ಬಲಶಾಲಿಯಾಗಿರಬೇಕೆಂದು ಭಾವಿಸುತ್ತೇನೆ. ನಾನು ಬೆಂಕಿಯ ಹಾದಿಯಲ್ಲಿ ಸಾಗಿದ್ದೇನೆ ಎಂದಿದ್ದಾರೆ. ಡಿವೋರ್ಸ್ ಕುರಿತು ನಟಿ ಪರೋಕ್ಷವಾಗಿ ಮಾತನಾಡಿದ್ದಾರೆ.


ನನ್ನ ವೈಯಕ್ತಿಕ ಬೆಳವಣಿಗೆಗೆ ಅಧ್ಯಾತ್ಮ ಅವಿಭಾಜ್ಯ ಅಂಶವಾಗಿದೆ. ಇದು ನನ್ನ ಜೀವನದಲ್ಲಿ ನೆರವಾಗಿದೆ. ಅಧ್ಯಾತ್ಮವು ಉತ್ತಮ ಸ್ನೇಹಿತ ಮತ್ತು ಶಕ್ತಿಯ ಮೂಲವಾಗಿದೆ ಎಂದು ನಂಬುತ್ತೇನೆ ಎಂದು ಸಮಂತಾ ಮಾತನಾಡಿದ್ದಾರೆ. ಅಂದಹಾಗೆ, ನಟ ನಾಗಚೈತನ್ಯ ಜೊತೆಗಿನ ದಾಂಪತ್ಯಕ್ಕೆ 2021ರಲ್ಲಿ ಸಮಂತಾ ಅಂತ್ಯ ಹಾಡಿದರು. 2022ರಲ್ಲಿ ಮಯೋಸಿಟಿಸ್ ಕಾಯಿಲೆಗೆ ತುತ್ತಾದ ಬಳಿಕ ನಟನೆಯಿಂದ ಬ್ರೇಕ್ ಪಡೆದರು.

ನಾನು ಬೆಂಕಿಯ ಹಾದಿಯಲ್ಲಿ ಸಾಗಿದ್ದೇನೆ


## ಶಾರುಖ್‌ಗೆ ವಿಲನ್ ಆದ ಅಭಿಷೇಕ್

ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ಈಗ ಹೊಸ ಚಿತ್ರವೊಂದನ್ನು ಒಪ್ಪಿಕೊಂಡಿದ್ದಾರೆ. ಶಾರುಖ್ ಖಾನ್ ನಟನೆಯ 'ಕಿಂಗ್' ಸಿನಿಮಾದಲ್ಲಿ ಖಡಕ್ ವಿಲನ್ ಆಗಿ ಅಬ್ಬರಿಸುತ್ತಿದ್ದಾರೆ. ಅಮಿತಾಭ್ ಬಚ್ಚನ್‌ಗೆ ಬಾಲಿವುಡ್‌ನಲ್ಲಿ ಸಕಸ್ ಸಿಕ್ಕಂತೆ. ಪುತ್ರ ಅಭಿಷೇಕ್‌ಗೆ ಯಶಸ್ಸು ಸಿಗಲಿಲ್ಲ. ಯಾವುದೇ ಪಾತ್ರ ಕೊಟ್ಟರೂ ಆ ಪಾತ್ರಕ್ಕೆ ಬಿಗ್ ಬಿ ಪುತ್ರ ನ್ಯಾಯ ಒದಗಿಸುತ್ತಾರೆ. ಹಾಗಾಗಿ ಹೊಸ ಪಾತ್ರಗಳ ಪ್ರಯೋಗದಲ್ಲಿದ್ದಾರೆ. ಸಕ್ಸಸ್‌ಗಾಗಿ ಖಳನಟನಾಗಲು ಮುಂದಾಗಿದ್ದಾರೆ. ಶಾರುಖ್ ಖಾನ್ ನಿರ್ಮಿಸಿ, ನಟಿಸುತ್ತಿರುವ 'ಕಿಂಗ್' ಸಿನಿಮಾದಲ್ಲಿ ಮಗಳು ಸುಹಾನಾ ಖಾನ್‌ರನ್ನು ಲಾಂಚ್ ಮಾಡ್ತಿದ್ದಾರೆ. 200 ಕೋಟಿ ರೂ. ವೆಚ್ಚದಲ್ಲಿ ಸಿನಿಮಾ ನಿರ್ಮಾಣವಾಗುತ್ತಿದೆ. ಇದೇ ಸಿನಿಮಾದಲ್ಲಿ ಅಭಿಷೇಕ್‌ಗೆ ಉತ್ತಮ ಪಾತ್ರವಿದೆಯಂತೆ. ವಿಲನ್ ಆದ್ರೂ ನಟನೆಗೆ ಸ್ಕೋಪ್ ಇರುವ ಪಾತ್ರ ಇದಾಗಿದೆ. ಸದ್ಯ ಈ ಸುದ್ದಿ ಕೇಳಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ಸುಜಯ್ ಘೋಷ್ ನಿರ್ದೇಶನದ 'ಕಿಂಗ್' ಚಿತ್ರಕ್ಕೆ ಈ ವರ್ಷದ ಕೊನೆಯಲ್ಲಿ ಚಾಲನೆ ಸಿಗಲಿದೆ. ನಾಯಕಿಯಾಗಿ ಬರುತ್ತಿರುವ ಸುಹಾನಾ ಖಾನ್ ತಮ್ಮ ಪಾತ್ರದ ತಯಾರಿಯಲ್ಲಿದ್ದಾರೆ. ಅದಕ್ಕಾಗಿ ಸೂಕ್ತ ತರಬೇತಿ ಕೂಡ ಪಡೆಯುತ್ತಿದ್ದಾರೆ.

ಒಟ್ಟಿನಲ್ಲಿ ಶಾರುಖ್, ಸುಹಾನಾ, ಅಭಿಷೇಕ್‌ರನ್ನು ಬೆಳ್ಳಿಪರದೆಯಲ್ಲಿ ಒಟ್ಟಾಗಿ ನೋಡಲು ಅಭಿಮಾನಿಗಳು ಉತ್ಸುಕರಾಗಿದ್ದಾರೆ.



## ಪಾಕಿಸ್ತಾನದಲ್ಲಿ ಜೂನಿಯರ್ ಬುಮ್ರಾ: ವಿಡಿಯೋ ವೈರಲ್



ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಕರಾರುವಾಕ್ ದಾಳಿ ಸಂಘಟಿಸುವ ಮೂಲಕ ಟೀಮ್ ಇಂಡಿಯಾ ವೇಗಿ ಜಸ್‌ಪ್ರೀತ್ ಬುಮ್ರಾ ಸಂಚಲನ ಸೃಷ್ಟಿಸಿದ್ದರು. ಈ ಸಂಚಲನದೊಂದಿಗೆ ಅವರ ಅಭಿಮಾನಿಗಳ ಸಂಖ್ಯೆಯಲ್ಲೂ ಏರಿಕೆಯಾಗಿದೆ. ಇಂತಹ ಅಭಿಮಾನಿಗಳಲ್ಲಿ ಪಾಕಿಸ್ತಾನದ ಪುಟ್ಟ ಬಾಲಕ ಕೂಡ ಒಬ್ಬ. ಏಕೆಂದರೆ ಪಾಕ್ ಪ್ರಾಂತ್ಯದ ಹುಡುಗನೊಬ್ಬ ಬುಮ್ರಾ ಶೈಲಿಯಲ್ಲೇ ಬೌಲಿಂಗ್ ಮಾಡುತ್ತಿದ್ದಾನೆ. ಅದು ಕೂಡ ಯಾರ್ಕರ್ ಸ್ಪೆಷಲಿಸ್ಟ್ ಸ್ಟೈಲ್‌ನಲ್ಲೇ ಯಾರ್ಕರ್‌ಗಳನ್ನು ಎಸೆಯುವ ಮೂಲಕ ಎಂಬುದು ವಿಶೇಷ.

ಮಕ್ಕಳ ನಡುವೆ ಪಂದ್ಯವೊಂದರಲ್ಲಿ ಹುಡುಗನೊಬ್ಬ ಬೂಮ್ ಬೂಮ್ ಶೈಲಿಯಲ್ಲಿ ಬೌಲಿಂಗ್ ಮಾಡುತ್ತಿರುವ ವಿಡಿಯೋವನ್ನು ಪಾಕ್ ತಂಡದ ಮಾಜಿ ಆಟಗಾರ ವಾಸಿಂ ಅಕ್ರಮ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೆ ಹುಡುಗನ ಬೌಲಿಂಗ್ ನಿಯಂತ್ರಣ ಮತ್ತು ಬೌಲಿಂಗ್ ಶೈಲಿ ಜಸ್‌ಪ್ರೀತ್ ಬುಮ್ರಾ ಅವರಂತೆಯೇ ಇದೆ ಎಂದು ಅಕ್ರಮ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



## ಟೀಮ್ ಇಂಡಿಯಾ ಟಿ20 ತಂಡದ ನೂತನ ನಾಯಕ ಆಯ್ಕೆ..!

ರೋಹಿತ್ ಶರ್ಮಾ ಅವರ ಉತ್ತರಾಧಿಕಾರಿಯಾಗಿ ಹಾರ್ದಿಕ್ ಪಾಂಡ್ಯ ಕಾಣಿಸಿಕೊಳ್ಳುವುದು ಖಚಿತವಾಗಿದೆ. ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡದ ಉಪನಾಯಕರಾಗಿ ಕಾಣಿಸಿಕೊಂಡಿದ್ದ ಪಾಂಡ್ಯಗೆ ಟಿ20 ತಂಡದ ನಾಯಕತ್ವ ನೀಡಲು ಬಿಸಿಸಿಐ ನಿರ್ಧರಿಸಿದೆ. ಅದರಂತೆ ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ಪಾಂಡ್ಯ ಭಾರತ ಟಿ20 ತಂಡದ ಕ್ಯಾಪ್ಟನ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ಭಾರತ ಟಿ20 ತಂಡದ ನೂತನ ನಾಯಕನಾಗಿ ಹಾರ್ದಿಕ್ ಪಾಂಡ್ಯ ಆಯ್ಕೆಯಾಗಿದ್ದಾರೆ.

ಟಿ20 ವಿಶ್ವಕಪ್ ಗೆಲುವಿನ ಬಳಿಕ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಹೀಗಾಗಿ ಹೊಸ ನಾಯಕನನ್ನು ಆಯ್ಕೆ ಮಾಡಬೇಕಾದ ಅನಿವಾರ್ಯತೆ ಬಿಸಿಸಿಐ ಮುಂದಿತ್ತು. ಅದರಂತೆ ಇದೀಗ ಭಾರತ ಟಿ20 ತಂಡದ ನಾಯಕನಾಗಿ ಹಾರ್ದಿಕ್ ಪಾಂಡ್ಯಗೆ ಪಟ್ಟ ಕಟ್ಟಲು ಆಯ್ಕೆ ಸಮಿತಿ ನಿರ್ಧರಿಸಿದೆ ಎಂದು ಪಿಟಿಐ ವರದಿ ಮಾಡಿದೆ. ಇದರೊಂದಿಗೆ ಟೀಮ್ ಇಂಡಿಯಾ ಟಿ20 ತಂಡದ ಖಾಯಂ ನಾಯಕನಾಗಿ ಪಾಂಡ್ಯ ಕಾಣಿಸಿಕೊಳ್ಳುವುದು ಖಚಿತವಾಗಿದೆ. ಇದಕ್ಕೂ ಮುನ್ನ ಹಾರ್ದಿಕ್ ಪಾಂಡ್ಯ ಜೊತೆ ಜಸ್‌ಪ್ರೀತ್ ಬುಮ್ರಾ, ರಿಷಭ್ ಪಂತ್, ಸೂರ್ಯಕುಮಾರ್ ಹೆಸರುಗಳು ನಾಯಕತ್ವದ ರೇಸ್‌ನಲ್ಲಿ ಕೇಳಿ ಬಂದಿತ್ತು. ಇದೀಗ ಹಾರ್ದಿಕ್ ಪಾಂಡ್ಯರನ್ನೇ ಮುಂದುವರೆಸಲು ಆಯ್ಕೆ ಸಮಿತಿ ನಿರ್ಧರಿಸಿದ್ದು, ಅದರಂತೆ ಮುಂಬರುವ ಟಿ20 ಸರಣಿಗಳಲ್ಲಿ ಭಾರತ ಟಿ20 ತಂಡವನ್ನು ಪಾಂಡ್ಯ ಮುನ್ನಡೆಸಲಿದ್ದಾರೆ. ಜುಲೈ 27 ರಿಂದ ಶುರುವಾಗಲಿರುವ ಟಿ20 ಸರಣಿಯೊಂದಿಗೆ ಹಾರ್ದಿಕ್ ಪಾಂಡ್ಯ ಪೂರ್ಣ ಪ್ರಮಾಣದ ನಾಯಕರಾಗಿ ಪಾದರ್ಪಣೆ ಮಾಡಲಿದ್ದಾರೆ. ಇದಾಗ್ಯೂ ಏಕದಿನ ಮತ್ತು ಟೆಸ್ಟ್ ತಂಡದ ನಾಯಕರಾಗಿ ಮುಂದಿನ ವರ್ಷದವರೆಗೆ ರೋಹಿತ್ ಶರ್ಮಾ ಮುಂದುವರೆಯಲಿದ್ದಾರೆ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ.

ಹಾರ್ದಿಕ್ ಪಾಂಡ್ಯ ಭಾರತ ತಂಡವನ್ನು 16 ಟಿ20 ಪಂದ್ಯಗಳಲ್ಲಿ ಮುನ್ನಡೆಸಿದ್ದಾರೆ. ಈ ವೇಳೆ ಟೀಮ್ ಇಂಡಿಯಾ 10 ಮ್ಯಾಚ್‌ಗಳಲ್ಲಿ ಗೆಲುವು ದಾಖಲಿಸಿತ್ತು. ಅಲ್ಲದೆ ಪ್ರಸ್ತುತ ಇರುವ ಆಟಗಾರರಲ್ಲಿ ಟಿ20 ತಂಡವನ್ನು ಮುನ್ನಡೆಸಿರುವ ಹೆಚ್ಚಿನ ಅನುಭವ ಪಾಂಡ್ಯಗೆ ಇದೆ. ಇದೇ ಕಾರಣದಿಂದಾಗಿ ಹಾರ್ದಿಕ್ ಪಾಂಡ್ಯಗೆ ಕಪ್ತಾನನ ಪಟ್ಟ ನೀಡಲಾಗಿದೆ ಎಂದು ತಿಳಿದು ಬಂದಿದೆ.

## ಡೆಲ್ಲಿ ಕ್ಯಾಪಿಟಲ್ಸ್ ತಂಡದ ರಿಷಭ್ ಪಂತ್ ಔಟ್..

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ಆರಂಭಕ್ಕೂ ಮುನ್ನವೇ ಬಿಗ್ ಅಪ್‌ಡೇಟ್‌ಗಳು ಹೊರಬೀಳುತ್ತಿವೆ. ಈ ಅಪ್‌ಡೇಟ್‌ಗಳ ನಡುವೆ ರಿಷಭ್ ಪಂತ್ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ತೊರೆಯಲಿದ್ದಾರೆ ಎಂಬ ಸುದ್ದಿಯೊಂದು ಮುನ್ನಲೆಗೆ ಬಂದಿದೆ. ಐಪಿಎಲ್ 2025 ರ ಹರಾಜಿನಲ್ಲಿ ಕಾಣಿಸಿಕೊಳ್ಳಲು ಪಂತ್ ಬಯಸಿದ್ದು, ಹೀಗಾಗಿ ಮುಂದಿನ ಸೀಸನ್‌ನಲ್ಲಿ ಅವರು ಡೆಲ್ಲಿ ಪರ ಕಾಣಿಸಿಕೊಳ್ಳುವುದು ಅನುಮಾನ ಎನ್ನಲಾಗುತ್ತಿದೆ.

ಇತ್ತೀಚೆಗಷ್ಟೇ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ತಂಡದ ಮುಖ್ಯ ಕೋಚ್ ಹುದ್ದೆಯಿಂದ ರಿಕಿ ಪಾಂಟಿಂಗ್ ಅವರನ್ನು ತೆಗೆದು ಹಾಕಿದ್ದರು. ಈ ಸುದ್ದಿ ಬೆನ್ನಲ್ಲೇ ಇದೀಗ ನಾಯಕ ರಿಷಭ್ ಪಂತ್ ಕೂಡ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ತೊರೆಯಲಿದ್ದಾರೆ ಎಂಬ ಸುದ್ದಿಗಳು ಹರಿದಾಡಲಾರಂಭಿಸಿದೆ.

2021 ರಲ್ಲಿ ರಿಷಭ್ ಪಂತ್ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕ್ಯಾಪ್ಟನ್ ಆಗಿ ನೇಮಕವಾಗಿದ್ದರು. ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ಪಂತ್ ತಮ್ಮ ನಾಯಕತ್ವದ ಕೌಶಲ್ಯಗಳನ್ನು ಪ್ರದರ್ಶಿಸಿದ್ದರು. ಇದಾಗ್ಯೂ, ಅವರ ನಾಯಕತ್ವದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಒಮ್ಮೆಯೂ ಫೈನಲ್‌ಗೆ ಪ್ರವೇಶಿಸಿಲ್ಲ. ಅಲ್ಲದೆ ಕಳೆದ ಸೀಸನ್‌ನಲ್ಲಿ 6ನೇ ಸ್ಥಾನ ಅಲಂಕರಿಸಿತ್ತು.

ಇದೀಗ ಡೆಲ್ಲಿ ಕ್ಯಾಪಿಟಲ್ಸ್ ತಂಡದಿಂದ ರಿಕಿ ಪಾಂಟಿಂಗ್ ಅವರ ನಿರ್ಗಮನದೊಂದಿಗೆ, ರಿಷಬ್ ಪಂತ್ ಅವರ ಭವಿಷ್ಯದ ಬಗ್ಗೆ ವದಂತಿಗಳು ಹರಡಲು ಪ್ರಾರಂಭಿಸಿವೆ. ಅಲ್ಲದೆ ಮುಂಬರುವ ಮೆಗಾ ಹರಾಜಿನಲ್ಲಿ ಕಾಣಿಸಿಕೊಳ್ಳುವ ಮೂಲಕ ಪಂತ್ ಹೊಸ ತಂಡದ ಪರ ಕಣಕ್ಕಿಳಿಯಲು ಇಚ್ಛಿಸಿದ್ದಾರೆ ಎಂಬ ಮಾತುಗಳು ಕೂಡ ಕೇಳಿ ಬರುತ್ತಿವೆ. ಇತ್ತ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ಕೂಡ 2025ರ ಮೆಗಾ ಹರಾಜಿನ ಮೂಲಕ ಹೊಸ ತಂಡ ಕಟ್ಟುವ ಇರಾದೆಯಲ್ಲಿದೆ. ಇದರ ಮೊದಲ ಹೆಜ್ಜೆ ಎಂಬಂತೆ ರಿಕಿ ಪಾಂಟಿಂಗ್ ಅವರನ್ನು ಕೋಚ್ ಸ್ಥಾನದಿಂದ ತೆಗೆದು ಹಾಕಿದ್ದಾರೆ.



## ಶಮಿ ಕಂಬ್ಯಾಕ್ ಯಾವಾಗ?

ಟೀಮ್ ಇಂಡಿಯಾ ವೇಗಿ ಮೊಹಮ್ಮದ್ ಶಮಿ ಭಾರತದ ಪರ ಕಣಕ್ಕಿಳಿದು 7 ತಿಂಗಳುಗಳೇ ಕಳೆದಿವೆ. 2023ರ ಏಕದಿನ ವಿಶ್ವಕಪ್‌ನಲ್ಲಿ ಭರ್ಜರಿ ಬೌಲಿಂಗ್ ಪ್ರದರ್ಶನ ನೀಡಿದ್ದ ಶಮಿ, ವರ್ಲ್ಡ್ ಕಪ್ ಬಳಿಕ ಭಾರತ ತಂಡದಲ್ಲಿ ಕಾಣಿಸಿಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು. ಏಕದಿನ ವಿಶ್ವಕಪ್ ವೇಳೆ ಶಮಿ ಅವರ ಪಾದದಲ್ಲಿ ನೋವು ಕಾಣಿಸಿಕೊಂಡಿತ್ತು. ಈ ನೋವಿನ ನಡುವೆಯೂ ಅವರು ನೋವು ನಿವಾರಕ ಮಾತ್ರೆಗಳನ್ನು ತೆಗೆದುಕೊಂಡು ಟೀಮ್ ಇಂಡಿಯಾ ಪರ ಕಣಕ್ಕಿಳಿದಿದ್ದರು. ಇದರಿಂದ ಅವರ ಪಾದದ ಸಮಸ್ಯೆಯು ಬಿಗಡಾಯಿಸಿದೆ.

ಹೀಗಾಗಿ ಅವರು ಏಕದಿನ ವಿಶ್ವಕಪ್ ಬಳಿಕ ಯಾವುದೇ ಪಂದ್ಯವಾಡಿರಲಿಲ್ಲ. ಅಲ್ಲದೆ ವೈದ್ಯಕೀಯ ಪರಿಶೀಲನೆ ವೇಳೆ ಶಸ್ತ್ರಚಿಕಿತ್ಸೆ ಮಾಡಬೇಕಾದ ಅನಿವಾರ್ಯತೆ ಕಂಡು ಬಂದಿತ್ತು. ಅದರಂತೆ ಕಳೆದ ಫೆಬ್ರವರಿ ತಿಂಗಳಲ್ಲಿ ಮೊಹಮ್ಮದ್ ಶಮಿ ಸರ್ಜರಿಗೆ ಒಳಗಾಗಿದ್ದರು. ಇದೇ ಕಾರಣದಿಂದಾಗಿ ಐಪಿಎಲ್‌ನಲ್ಲೂ ಕಾಣಿಸಿಕೊಂಡಿರಲಿಲ್ಲ.

ಇದೀಗ ಮೊಹಮ್ಮದ್ ಶಮಿ ಸಂಪೂರ್ಣ ಫಿಟ್ ಆಗಿದ್ದು, ಬೌಲಿಂಗ್ ಅಭ್ಯಾಸ ಆರಂಭಿಸಿದ್ದಾರೆ. ಅಲ್ಲದೆ ಜಿಮ್‌ನಲ್ಲಿ ವರ್ಕ್ ಔಟ್ ಕೂಡ ಶುರು ಮಾಡಿಕೊಂಡಿದ್ದಾರೆ. ಹೀಗಾಗಿ ಮುಂಬರುವ ಸರಣಿಗಳ ವೇಳೆ ಶಮಿ ಟೀಮ್ ಇಂಡಿಯಾದಲ್ಲಿ ಕಾಣಿಸಿಕೊಳ್ಳುವುದು ಖಚಿತ. ಅದರಲ್ಲೂ ಶ್ರೀಲಂಕಾ ವಿರುದ್ಧದ ಏಕದಿನ ಸರಣಿಯಲ್ಲಿ ಮೊಹಮ್ಮದ್ ಶಮಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಏಕೆಂದರೆ ಈ ಸರಣಿಯಿಂದ ಪ್ರಮುಖ ವೇಗಿ ಜಸ್‌ಪ್ರೀತ್ ಬುಮ್ರಾ ವಿಶ್ರಾಂತಿಯ ಕಾರಣ ಹೊರಗುಳಿಯಲಿದ್ದಾರೆ ಎನ್ನಲಾಗುತ್ತಿದೆ. ಹೀಗಾಗಿ ಅನುಭವಿ ವೇಗಿ ಶಮಿ ಅವರನ್ನು ಆಯ್ಕೆ ಮಾಡುವ ಸಾಧ್ಯತೆಯಿದೆ.

ಒಂದು ವೇಳೆ ಶ್ರೀಲಂಕಾ ವಿರುದ್ಧದ ಸರಣಿಯಿಂದ ಮೊಹಮ್ಮದ್ ಶಮಿ ಹೊರಗುಳಿದರೆ, ಬಾಂಗ್ಲಾದೇಶ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಕಾಣಿಸಿಕೊಳ್ಳುವುದು ಬಹುತೇಕ ಖಚಿತ ಎನ್ನಬಹುದು. ಹಾಗಾಗಿ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಶಮಿ ಟೀಮ್ ಇಂಡಿಯಾ ಪರ ಮತ್ತೆ ಕಣಕ್ಕಿಳಿಯುವುದನ್ನು ಎದುರು ನೋಡಬಹುದು.



**ಭರ್ಜರಿ ಫಾರ್ಮ್‌ನಲ್ಲಿದ್ದ ಶಮಿ:** ವಿಶ್ವಕಪ್ 2023 ರಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿದ್ದ ಮೊಹಮ್ಮದ್ ಶಮಿ 24 ವಿಕೆಟ್ ಕಬಳಿಸಿ ಯಶಸ್ವಿ ಬೌಲರ್ ಎನಿಸಿಕೊಂಡಿದ್ದರು. ಶಮಿ ಅವರ ಕರಾರುವಾಕ್ ದಾಳಿಯ ನೆರವಿನಿಂದ ಭಾರತ ತಂಡವು ಫೈನಲ್‌ಗೆ ಪ್ರವೇಶಿಸಿತು. ಇದಾಗ್ಯೂ ಅಂತಿಮ ಪಂದ್ಯದಲ್ಲಿ ಟೀಮ್ ಇಂಡಿಯಾ ಆಸ್ಟ್ರೇಲಿಯಾ ವಿರುದ್ಧ ಮುಗ್ಗರಿಸಿ ಏಕದಿನ ವಿಶ್ವಕಪ್ ಗೆಲ್ಲುವ ಅವಕಾಶವನ್ನು ಕೈಚೆಲ್ಲಿಕೊಂಡಿದ್ದರು. ಫೈನಲ್ ಪಂದ್ಯದ ಬಳಿಕ ಮೈದಾನದಿಂದ ಹೊರಗುಳಿದಿದ್ದ ಶಮಿ ಪುನರಾಗಮನಕ್ಕಾಗಿ ಸಜ್ಜಾಗಿದ್ದಾರೆ.

## ವಿಶ್ರಾಂತಿ ಸಾಕು... ರೋಹಿತ್ ಶರ್ಮಾ, ವಿರಾಟ್ ಕೊಹ್ಲಿನೂ ಆಡಬೇಕು

ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಸೇರಿದಂತೆ ಹಿರಿಯ ಆಟಗಾರರನ್ನು ಆಯ್ಕೆ ಮಾಡಬೇಕು ಎಂದು ಟೀಮ್ ಇಂಡಿಯಾದ ನೂತನ ಕೋಚ್ ಗೌತಮ್ ಗಂಭೀರ್ ಆಯ್ಕೆ ಸಮಿತಿಗೆ ತಿಳಿಸಿದ್ದಾರೆ ಎಂದು ವರದಿಯಾಗಿದೆ. ಟಿ20 ವಿಶ್ವಕಪ್ ಬಳಿಕ ಟೀಮ್ ಇಂಡಿಯಾ ಆಟಗಾರರಿಗೆ ವಿಶ್ರಾಂತಿ ಸಿಕ್ಕಿದೆ. ಹೀಗಾಗಿ ರೋಹಿತ್ ಶರ್ಮಾ ಸೇರಿದಂತೆ ಪ್ರಮುಖರನ್ನು ತಂಡದ ಆಯ್ಕೆ ಪರಿಗಣಿಸಬೇಕೆಂದು ಎಂದು ಗಂಭೀರ್ ತಿಳಿಸಿದ್ದಾರೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರೀತ್ ಬುಮ್ರಾಗೆ ಮುಂಬರುವ ಸರಣಿವರೆಗೆ ವಿಶ್ರಾಂತಿ ನೀಡುವ ಅಗತ್ಯವಿಲ್ಲ. ಏಕೆಂದರೆ ಶ್ರೀಲಂಕಾ ವಿರುದ್ಧದ ಏಕದಿನ ಸರಣಿ ಶುರುವಾಗುವುದು ಆಗಸ್ಟ್ 2 ರಿಂದ, ಹಾಗೆಯೇ ಆಗಸ್ಟ್ 7 ಕ್ಕೆ ಸರಣಿ ಮುಗಿಯಲಿದೆ. ಇದಾದ ಬಳಿಕ ಬಾಂಗ್ಲಾದೇಶ್ ವಿರುದ್ಧದ ಸರಣಿಗಾಗಿ 6 ವಾರಗಳ ಅಂತರವಿದೆ. ಹೀಗಾಗಿ ಹಿರಿಯ ಆಟಗಾರರನ್ನು ಶ್ರೀಲಂಕಾ ಸರಣಿಯಿಂದ ಹೊರಗಿಡುವುದು ಸೂಕ್ತವಲ್ಲ ಎಂದು ಗೌತಮ್ ಗಂಭೀರ್ ಆಯ್ಕೆಗಾರರಿಗೆ ತಿಳಿಸಿದ್ದಾರೆ. ಬಾಂಗ್ಲಾದೇಶ್ ವಿರುದ್ಧದ ಸರಣಿಯು ಸೆಪ್ಟೆಂಬರ್ 19 ರಿಂದ ಶುರುವಾಗಲಿದೆ. ಅತ್ತ ಶ್ರೀಲಂಕಾ ವಿರುದ್ಧದ ಸರಣಿ ಆಗಸ್ಟ್ 7 ಕ್ಕೆ ಮುಗಿಯಲಿದೆ. ಈ ಎರಡು ಸರಣಿಗಳ ನಡುವೆ ಸುದೀರ್ಘ ವಿರಾಮವನ್ನು ಪಡೆಯಬಹುದು. ಹಾಗಾಗಿ ಶ್ರೀಲಂಕಾ ವಿರುದ್ಧದ ಏಕದಿನ ಸರಣಿ ವೇಳೆ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರೀತ್ ಬುಮ್ರಾ ಅವರಿಗೆ ವಿಶ್ರಾಂತಿ ನೀಡುವುದು ಸರಿಯಲ್ಲ ಎಂಬ ವಾದವನ್ನು ಗಂಭೀರ್ ಆಯ್ಕೆ ಸಮಿತಿಯ ಮುಂದಿಟ್ಟಿದ್ದಾರೆ. ಈ ಮೂಲಕ ಪ್ರಮುಖ ಆಟಗಾರರನ್ನು ಲಂಕಾ ವಿರುದ್ಧದ ಏಕದಿನ ಸರಣಿಗೆ ಆಯ್ಕೆ ಮಾಡುವಂತೆ ಗೌತಮ್ ಗಂಭೀರ್ ಒತ್ತಾಯಿಸಿದ್ದಾರೆ ಎಂದು ವರದಿಯಾಗಿದೆ.



ಗಂಭೀರ್ ಖಡಕ್ ಸೂಚನೆ..!

ಇದಕ್ಕೂ ಮುನ್ನ ಬಾಂಗ್ಲಾದೇಶ್ ವಿರುದ್ಧದ ಸರಣಿ ಮೂಲಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಜಸ್‌ಪ್ರೀತ್ ಬುಮ್ರಾ ಕಂಬ್ಯಾಕ್ ಮಾಡಲಿದ್ದಾರೆ ಎನ್ನಲಾಗಿತ್ತು. ಆದರೀಗ ಶ್ರೀಲಂಕಾ ಮತ್ತು ಬಾಂಗ್ಲಾದೇಶ್ ಸರಣಿಗಳ ನಡುವಣ ಅಂತರವನ್ನು ಗೌತಮ್ ಗಂಭೀರ್ ಬಿಸಿಸಿಐ ಆಯ್ಕೆಗಾರರ ಮುಂದಿಟ್ಟಿದ್ದಾರೆ. ಹೀಗಾಗಿ ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಜಸ್‌ಪ್ರೀತ್ ಬುಮ್ರಾ ಕಾಣಿಸಿಕೊಳ್ಳಲಿದ್ದಾರಾ ಎಂಬುದೇ ಈಗ ಕುತೂಹಲ.

| ಭಾರತ ಮತ್ತು ಶ್ರೀಲಂಕಾ ಟಿ20 ಸರಣಿ ವೇಳಾಪಟ್ಟಿ | | |
|---|---|---|
| ಮೊದಲ ಟಿ20 | ಜುಲೈ 27 | ಪಲ್ಲೆಕೆಲೆ |
| ಎರಡನೇ ಟಿ20 | ಜುಲೈ 28 | ಪಲ್ಲೆಕೆಲೆ |
| ಮೂರನೇ ಟಿ20 | ಜುಲೈ 30 | ಪಲ್ಲೆಕೆಲೆ |

| ಭಾರತ ಮತ್ತು ಶ್ರೀಲಂಕಾ ಏಕದಿನ ಸರಣಿ ವೇಳಾಪಟ್ಟಿ | | |
|---|---|---|
| ಮೊದಲ ಏಕದಿನ | ಆಗಸ್ಟ್ 2 | ಕೊಲಂಬೊ |
| ಎರಡನೇ ಏಕದಿನ | ಆಗಸ್ಟ್ 4 | ಕೊಲಂಬೊ |
| ಮೂರನೇ ಏಕದಿನ | ಆಗಸ್ಟ್ 7 | ಕೊಲಂಬೊ |

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**